ಏಪ್ರಿಲ್ 2018

₹ 15/-

# ಯುಗರಶ್ಮಿ

## ತ್ರೈಮಾಸಿಕ



- ಜಾಗತಿಕ ಸಂಘರ್ಷಗಳು ಮತ್ತು ನ್ಯಾಯಪಾಲನೆಯ ಆವಶ್ಯಕತೆ
- ನೈಜ ಇಸ್ಲಾಮನ್ನು ಸ್ವಾಧೀನಪಡಿಸಿಕೊಳ್ಳುವ ಹುಡುಕಾಟ
- ಮೂರನೇ ಜಾಗತಿಕ ಯುದ್ಧಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರ ಮುನ್ನೆಚ್ಚರಿಕೆ
- ಇಸ್ಲಾಮಿನ ಸಂದೇಶ
- ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು

"(ನಿರಪರಾಧಿಯಾದ) ಒಬ್ಬನನ್ನು ಯಾರಾದರೂ ಕೊಂದರೆ ಅವನು ಮನುಷ್ಯರೆಲ್ಲರನ್ನೂ ಕೊಂದಂತಾಗುತ್ತದೆ. ಯಾರಾದರೂ ಒಬ್ಬನ ಜೀವವನ್ನು ರಕ್ಷಿಸಿದರೆ ಆತನು ಮನುಷ್ಯರೆಲ್ಲರನ್ನೂ ರಕ್ಷಿಸಿದಂತಾಗುತ್ತದೆ."

(ಪವಿತ್ರ ಖುರ್‌ಆನ್ 5:33)

# ಯುಗರಶ್ಮಿ

ವಿಷಯ ಸೂಚಿಕೆ — ಪುಟ


- ಬಲ ಪ್ರಯೋಗ ಇಸ್ಲಾಮಿಕವಲ್ಲ 1
- ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
- ಜಾಗತಿಕ ಸಂಘರ್ಷಗಳು ಮತ್ತು ನ್ಯಾಯಪಾಲನೆಯ ಆವಶ್ಯಕತೆ 3
- ನೈಜ ಇಸ್ಲಾಮನ್ನು ಸ್ವಾಧೀನಪಡಿಸಿಕೊಳ್ಳುವ ಹುಡುಕಾಟ 12
- ಕವನ – ಅಲ್‌ಅಮೀನ್ 24
- ಮೂರನೇ ಜಾಗತಿಕ ಯುದ್ಧಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರ ಮುನ್ನೆಚ್ಚರಿಕೆ 25
- ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಂಕ್ಷಿಪ್ತ ಜೀವನ ಚರಿತ್ರೆ 28
- ರಫಅ್ ಇಲಲ್ಲಾಹ್ – ಅಲ್ಲಾಹನ ಕಡೆಗೆ ಆರೋಹಣದ ವಾಸ್ತವಿಕ ಅರ್ಥ 34
- ಸಂಪಾದಕರಿಗೆ ಪತ್ರ 37
- ಅಹ್ಮದಿಯಾ ವಾರ್ತೆಗಳು 38
- ನಿಧನ ವಾರ್ತೆಗಳು 41
- ಓದಿದ್ದು 43
  - ಆರ್‌ಎಸ್‌ಎಸ್, ಬಿಜೆಪಿ ವಿರುದ್ಧ ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಆರೋಪ 'ರಾಮ ಸೀತೆ ಗೋಮಾಂಸ ಭಕ್ಷಕರು'
  - ನಾಸಾದ ಕೆಪ್ಲರ್ ಗಗನ ನೌಕೆ ಸಹಾಯದಿಂದ ಪತ್ತೆ – ಸೌರಮಂಡಲದ ತದ್ರೂಪಿ!
  - ಪಿಸ್ತಾ ಸೇವಿಸಿ – ಆರೋಗ್ಯ ಕಾಪಾಡಿ
- ಅಹ್ಮದಿಯರಿಗೆ ಸುತ್ತೋಲೆ 45


ಮುಖಪುಟ ಚಿತ್ರ : 700 ವರ್ಷಗಳ ಅಂತರದ ಬಳಿಕ ಸ್ಪೈನಿನಲ್ಲಿ (ಪೆಡ್ರೋ ಆಬಾದ್) ನಿರ್ಮಿಸಲ್ಪಟ್ಟ ಪ್ರಥಮ ಅಹ್ಮದಿಯಾ ಮುಸ್ಲಿಂ ಮಸೀದಿ – ಬಶಾರತ್ ಮಸ್ಜಿದ್


ಬಿಡಿ ಪ್ರತಿ : ರೂ. 15/- ವಾರ್ಷಿಕ ಚಂದಾ : ರೂ. 60/- ಅಂಚೆ ಮೂಲಕ : ರೂ. 70/-

ವಿಳಾಸ : 10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

بسم الله الرحمن الرحيم
نحمده ونصلي على رسوله الكريم

# ಯುಗರಶ್ಮಿ

ಎಪ್ರಿಲ್ 2018

ಸಂಪಾದಕ : ಮುಹಮ್ಮದ್ ಯೂಸುಫ್

ಆರಂಭ : 1975 | ಸಂಪುಟ : 34 | ಶಹಾದತ್ :1397 ಹಿಜರೀ ಶಮ್ಸೀ | ಸಂಚಿಕೆ : 4

## ಬಲಪ್ರಯೋಗ ಇಸ್ಲಾಮಿಕವಲ್ಲ

ಈ ಲೋಕದಲ್ಲಿ ಜೀವಿಸಿದ ಒಬ್ಬನೇ ಒಬ್ಬ ಯಥಾರ್ಥ ಮುಸ್ಲಿಂ, ಇಸ್ಲಾಮಿನ ಪ್ರಚಾರಕ್ಕೋಸ್ಕರ ಬಲ ಪ್ರಯೋಗಿಸಬೇಕಾಗಿದೆ ಎಂಬ ನಂಬಿಕೆಯನ್ನು ಹೊಂದಿಲ್ಲ. ತದ್ವಿರುದ್ಧವಾಗಿ, ಇಸ್ಲಾಂ ಅದರ ಸ್ವತಃಸಿದ್ಧವಾದ ಮಹತ್ವದ ಬಲದಲ್ಲಿ ಎಲ್ಲ ಕಾಲದಲ್ಲೂ ವಿಜಯ ಗಳಿಸಿದೆ. ಮುಸ್ಲಿಮರೆಂದು ಅಭಿಮಾನಗೊಂಡೇ ಇಸ್ಲಾಮನ್ನು ಖಡ್ಗ ಬಲದಿಂದ ಪ್ರಚಾರಗೊಳಿಸಬೇಕೆಂದು ಹೇಳುವವರು ಇಸ್ಲಾಮಿನ ಮಹತ್ವ ಕುರಿತು ಅರಿವಿಲ್ಲದವರಾಗಿದ್ದಾರೆ. (ತಿರಿಯಾಖುಲ್ ಖುಲೂಬ್ – ಪುಟ 39)

**– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

**ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಥಾಪಕರು**

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

* ನಿಮ್ಮ ಬಳಿಗೆ ಯಾವುದಾದರೂ ಜನತೆಯ ಆದರಣೀಯ ವ್ಯಕ್ತಿ ಬಂದರೆ ಅವರನ್ನು ಗೌರವಿಸಿರಿ.

(ಸುನನ್ ಇಬ್ನುಮಾಜ)

* ಕುಟುಂಬಬಂಧವನ್ನು ವಿಚ್ಛೇದಿಸುವವನು ಸ್ವರ್ಗದಲ್ಲಿ ಪ್ರವೇಶಿಲಾರ. (ಬುಖಾರಿ, ಮುಸ್ಲಿಂ)
* ಅಲ್ಲಾಹನಿಗೆ ಸಹಭಾಗಿಯನ್ನು ಕಲ್ಪಿಸುವುದು, ಮಾತಾಪಿತರನ್ನು ಅನುಸರಿಸದೆ ಇರುವುದು, ಸುಳ್ಳು ಹೇಳುವುದು, ಸುಳ್ಳು ಸಾಕ್ಷ್ಯ ನೀಡುವುದು ಮಹಾಪಾಪಗಳಾಗಿವೆ. (ಬುಖಾರಿ, ಮುಸ್ಲಿಂ)
* ಸತ್ಯವಿಶ್ವಾಸಿಗೆ ತನ್ನ ಶರೀರದಲ್ಲೂ ಸಂತಾನಗಳಲ್ಲೂ ಸಂಪತ್ತಿನಲ್ಲೂ ಪರೀಕ್ಷೆಗಳು ಉಂಟಾಗುತ್ತಲೇ ಇರುವುವು. ಕೊನೆಗೆ ಆತನು ಪಾಪರಹಿತನಾಗಿ ಸ್ವರ್ಗದಲ್ಲಿ ಪ್ರವೇಶಿಸುವನು. (ತಿರ್ಮಿದೀ)
* ನಿಶ್ಚಯವಾಗಿಯೂ ಸತ್ಯವು ಮನಃಸಮಾಧಾನವನ್ನೂ ಸುಳ್ಳು ಪರಿಭ್ರಮೆಯನ್ನೂ ಉಂಟುಮಾಡುತ್ತದೆ. (ತಿರ್ಮಿದೀ)
* ನೀನು ಎಲ್ಲಿದ್ದರೂ ಅಲ್ಲಾಹನ ಆಜ್ಞಾನುಸಾರ ಜೀವಿಸು. (ತಿರ್ಮಿದೀ)
* ಅನಾವಶ್ಯಕ ಕಾರ್ಯಗಳಿಂದ ಬಿಟ್ಟು ನಿಲ್ಲುವುದು ಇಸ್ಲಾಮಿನ ಪರಿಪೂರ್ಣತೆಯಲ್ಲಿ ಸೇರುತ್ತದೆ.
* ಇಹಲೋಕ ಮಧುರವೂ ಅಲಂಕಾರಪ್ರದವೂ ಆಗಿದೆ. ಅದರಲ್ಲಿ ಅಲ್ಲಾಹನು ನಿಮ್ಮನ್ನು ಪ್ರತಿನಿಧಿಗಳಾಗಿ ನೇಮಿಸಿದ್ದಾನೆ. ನೀವೇನು ಮಾಡುತ್ತೀರೆಂದು ಅವನು ವೀಕ್ಷಿಸುತ್ತಾನೆ.
* ಅಲ್ಲಾಹನು ಹೇಳುತ್ತಾನೆ: ನನ್ನ ದಾಸ ನನ್ನ ಕಡೆಗೆ ಒಂದು ಗೇಣು ಹತ್ತಿರವಾದರೆ ನಾನು ಒಂದು ಮೊಳ ಹತ್ತಿರವಾಗುವೆನು. ಅವನು ಒಂದು ಮೊಳ ಹತ್ತಿರವಾದರೆ ನಾನು ಒಂದು ಗಜ ಹತ್ತಿರವಾಗುವೆನು. ನನ್ನ ಕಡೆಗೆ ಅವನು ನಡೆದು ಬಂದರೆ ಅವನ ಕಡೆಗೆ ನಾನು ಓಡಿ ತಲಪುವೆನು. (ಬುಖಾರಿ)
* ಪ್ರಧಾನವಾದ ಎರಡು ಅನುಗ್ರಹಗಳನ್ನು ಗಳಿಸುವುದರಲ್ಲಿ ಹೆಚ್ಚಿನವರು ಪರಾಜಿತರು – ಆರೋಗ್ಯ ಮತ್ತು ವಿಶ್ರಮ.

(ಬುಖಾರಿ)

# ಜಾಗತಿಕ ಸಂಘರ್ಷಗಳು ಮತ್ತು ನ್ಯಾಯಪಾಲನೆಯ ಆವಶ್ಯಕತೆ




ಲಂಡನಿನಲ್ಲಿ ಜರಗಿದ ನ್ಯಾಶನಲ್ ಪೀಸ್ ಸಿಂಪೋಸಿಯಂನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾಡಿದ ಮುಖ್ಯ ಭಾಷಣ.

**2017 ಮಾರ್ಚ್ 27ರಂದು ಯುನೈಟೆಡ್ ಕಿಂಗ್‌ಡಮ್ಮಿನ ಅಹ್ಮದಿಯಾ ಮುಸ್ಲಿಮ್ ಜಮಾಅತ್ ವತಿಯಿಂದ ಜರಗಿಸಲಾದ 14ನೇ ವಾರ್ಷಿಕ ನ್ಯಾಶನಲ್ ಪೀಸ್ ಸಿಂಪೋಸಿಯಂನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕರಾದ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮುಖ್ಯ ಭಾಷಣ ಮಾಡಿದರು. ಈ ಸಿಂಪೋಸಿಯಂನಲ್ಲಿ 30 ದೇಶಗಳಿಗೆ ಸೇರಿದ ಅಂದಾಜು 1000ಕ್ಕಿಂತಲೂ ಹೆಚ್ಚು ಸಂಖ್ಯೆಯ ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ಸರಕಾರದ ಸಚಿವರು, ರಾಯಭಾರಿಗಳು, ಪಾರ್ಲಿಮೆಂಟಿನ ದ್ವಿಸಭೆಗಳ ಸದಸ್ಯರು ಸೇರಿದ್ದರು. ಹಿರೋಶಿಮ ಬಾಂಬ್ ಸ್ಫೋಟದ ನಂತರ ಬದುಕುಳಿದವರಲ್ಲಿ ಒಬ್ಬರೂ ಅಣು ನಿಶ್ಶಸ್ತ್ರೀಕರಣಕ್ಕೋಸ್ಕರ ಸಕ್ರಿಯ ಕಾರ್ಯಪ್ರವೃತ್ತಕರೂ ಆಗಿರುವ ಶ್ರೀಮತಿ ಸೆಟ್‌ಸುಕೋ ಥರ್‌ಲೋವ್ (SETSUKO THURLOW) ಅವರಿಗೆ ಅಹ್ಮದಿಯಾ ಮುಸ್ಲಿಮ್ ಪ್ರೈಝ್ ಫೋರ್ ದಿ ಎಡ್ವಾನ್ಸ್‌ಮೆಂಟ್ ಆಫ್ ಪೀಸ್ (AHMADIYYA MUSLIM PRIZE FOR THE ADVANCEMENT OF PEACE) ಅವರ ಗಮನಾರ್ಹ ಪ್ರಯತ್ನಗಳನ್ನು ಗುರುತಿಸಿಕೊಂಡು ನೀಡಲಾಯಿತು.**

**ಈ ಮುಖ್ಯ ಭಾಷಣದಲ್ಲಿ ಹಝ್ರತ್ ಖಲೀಫರು ಪಾಶ್ಚಿಮಾತ್ಯ ದೇಶಗಳು ವಿದೇಶಗಳಿಗೆ ನಿರಂತರವಾಗಿ ಆಯುಧಗಳನ್ನು ಮಾರಾಟ ಮಾಡುತ್ತಿರುವುದು ಮತ್ತು ಸಂಯುಕ್ತರಾಷ್ಟ್ರ ಸಂಘ ಶಾಂತಿಯನ್ನು ಸ್ಥಾಪಿಸುವುದರಲ್ಲಿ ವಿಫಲವಾಗಿರುವುದು ಜಾಗತಿಕ ಶಾಂತಿಯನ್ನು ಕೆಡಿಸುವ ಕಾರಣಗಳಲ್ಲಿ ಕೆಲವು ಆಗಿವೆ ಎಂದು ಪ್ರತಿಪಾದಿಸಿದ್ದಾರೆ. ಇಸ್ಲಾಮ್ ಹಿಂಸಾಚಾರವನ್ನು ಪ್ರೋತ್ಸಾಹಿಸುತ್ತದೆ ಮತ್ತು ಮನ್ನಿಸುತ್ತದೆ ಎಂಬ ದೋಷಾರೋಪಗಳನ್ನು ಹಝ್ರತ್ ಖಲೀಫರು ವಿಶದವಾಗಿ ಖಂಡಿಸಿ ನೈಜ ಇಸ್ಲಾಮ್ ತತ್ವಗಳನ್ನು ವಿವರಿಸಿದ್ದಾರೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೇಳಿದರು:

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ). ಎಲ್ಲ ಸನ್ಮಾನ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹೂ – ನಿಮ್ಮೆಲ್ಲರ ಮೇಲೆ ಅಲ್ಲಾಹನ ಶಾಂತಿ, ಸಮೃದ್ಧಿ ಮತ್ತು ಅನುಗ್ರಹವಿರಲಿ.

ಲಂಡನಿನ ವೆಸ್ಟ್ ಮಿನ್‌ಸ್ಟರ್‌ನಲ್ಲಿ ಕಳೆದ ಬುಧವಾರ ಭಯೋತ್ಪಾದಕ ಆಕ್ರಮಣಗಳಿಂದ ಬಾಧಿತರಾದವರಿಗೆ ನಾನು ಮೊತ್ತಮೊದಲು ನನ್ನ ಹೃತ್ಪೂರ್ವಕ ಸಂತಾಪಗಳನ್ನು ಸೂಚಿಸಲು ಇಚ್ಛಿಸುತ್ತೇನೆ. ಇಂತಹ ದಾರುಣ ಸಂದರ್ಭದಲ್ಲಿ ನಮ್ಮ ಚಿಂತೆಗಳೂ ಪ್ರಾರ್ಥನೆಗಳೂ ಲಂಡನಿನ ನಿವಾಸಿಗಳೊಂದಿಗೆ ಇವೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪರವಾಗಿ ನಾನು ಖಚಿತವಾಗಿ ಸ್ಪಷ್ಟಪಡಿಸುತ್ತೇನೆ. ನಾವು ಭಯೋತ್ಪಾದಕ ಕೃತ್ಯಗಳನ್ನು ತೀವ್ರವಾಗಿ ಖಂಡಿಸುತ್ತೇವೆ ಮತ್ತು ಇಂತಹ ಕಷ್ಟಗಳಿಗೆ ಆಹುತಿಯಾದವರಿಗೆ ನಮ್ಮ ಹೃತ್ಪೂರ್ವಕ ಸಹಾನುಭೂತಿಯನ್ನು

ಸೂಚಿಸುತ್ತೇವೆ. ಲೋಕದ ಎಲ್ಲ ಭಾಗಗಳಲ್ಲಿಯೂ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಸ್ಲಾಮ್ ಧರ್ಮ ತತ್ವಗಳಿಗನುಸಾರವಾಗಿ ಶಾಂತಿಯನ್ನು ಹರಡುತ್ತಾ ಭಯೋತ್ಪಾದಕ ಕ್ರೂರಕೃತ್ಯಗಳ ವಿರುದ್ಧ ಪ್ರತಿಭಟನೆ ಸೂಚಿಸುತ್ತಾ ಇರುತ್ತದೆ. ವಾರ್ಷಿಕ ಶಾಂತಿ ಸಿಂಪೋಸಿಯಂ ಸಹ ಇಂತಹ ಪ್ರಯತ್ನಗಳ ಒಂದು ಭಾಗವಾಗಿದೆ. ನೀವು ಇಲ್ಲಿಗೆ ಬಂದು ಈ ರಾತ್ರಿ ನಮ್ಮೊಂದಿಗೆ ಸೇರಿರುವುದಕ್ಕೋಸ್ಕರ ನಾನು ನಿಮಗೆಲ್ಲರಿಗೂ ಕೃತಜ್ಞತೆ ಅರ್ಪಿಸುತ್ತೇನೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಹೀಗೆ ಹೇಳಿರುವರು: ಸರ್ವಶಕ್ತನಾದ ಅಲ್ಲಾಹನು ಈ ಕಾಲಘಟ್ಟದಲ್ಲಿ ಪವಿತ್ರ ಪೈಗಂಬರ್ ಮುಹಮ್ಮದರ(ಸ) ಸೇವಕನಾಗಿ ಇಸ್ಲಾಮ್ ಧರ್ಮದ ಎರಡು ಪ್ರಮುಖ ಉದ್ದೇಶಲಕ್ಷ್ಯಗಳನ್ನು ಲೋಕದಾದ್ಯಂತ ಹರಡಲು ನನ್ನನ್ನು ಕಳುಹಿಸಿರುವನು. ಮೊದಲನೆಯ ಉದ್ದೇಶಲಕ್ಷ್ಯ ಮಾನವರನ್ನು ದೇವನಿಗೆ ಸಮೀಪವಾಗುವಂತೆ ಮಾಡುವುದು ಆಗಿದೆ. ಎರಡನೆಯ ಉದ್ದೇಶಲಕ್ಷ್ಯ ಮಾನವರು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡುವಂತೆ ಅವರ ಗಮನ ಹರಿಸುವುದಾಗಿದೆ. ಲೋಕದಲ್ಲಿ ದೀರ್ಘಕಾಲ ನೆಲೆನಿಲ್ಲುವಂತಹ ವಾಸ್ತವಿಕ ಶಾಂತಿ ಸ್ಥಾಪನೆಗೆ ಈ ಎರಡು ಉದ್ದೇಶಲಕ್ಷ್ಯಗಳು ತಳಪಾಯವಾಗಿರುತ್ತವೆ ಎಂದು ನಾನು ನಂಬುತ್ತೇನೆ.

ನಮ್ಮ ಸೃಷ್ಟಿಯ ಉದ್ದೇಶ ದೇವಾರಾಧನೆಯಾಗಿದೆ ಮತ್ತು ಸಾಮೂಹಿಕವಾಗಿ ಆರಾಧನೆಗಳನ್ನು ಮಸ್‌ಜಿದ್‌ಗಳಲ್ಲಿ ಅನುಷ್ಠಿಸುವುದು ಉತ್ತಮವಾಗಿದೆ ಎಂದು ಮುಸ್ಲಿಮರಾದ ನಮಗೆ ಪವಿತ್ರ ಖುರ್‌ಆನ್ ಹೇಳಿದುದು ನಮಗೆ ದೊರೆತ ಭಾಗ್ಯವಾಗಿದೆ. ಅತ್ಯಂತ ಖೇದಕರವಾಗಿರುವುದೇನೆಂದರೆ ಕೆಲವು ಮುಸ್ಲಿಮ್ ಗುಂಪುಗಳು ಮತ್ತು ವ್ಯಕ್ತಿಗಳು ಇಸ್ಲಾಮ್ ಧರ್ಮದ ಶಾಂತಿಮಯ ಉದ್ದೇಶಲಕ್ಷ್ಯಗಳನ್ನು ಉಲ್ಲಂಘಿಸಿ ತಮ್ಮ ಮಸ್‌ಜಿದ್‌ಗಳನ್ನೂ ಮದ್ರಸಗಳನ್ನೂ ತೀವ್ರವಾದದ ಕೇಂದ್ರಗಳನ್ನಾಗಿ ಮಾಡಿ ಭಯೋತ್ಪಾದಕ ಕೃತ್ಯಗಳನ್ನು ಮುಸ್ಲಿಮೇತರರ ಮತ್ತು ಬೇರೆ ಮುಸ್ಲಿಮ್ ಪಂಗಡಗಳ ವಿರುದ್ಧ ಮಾಡಲು ಉತ್ತೇಜಿಸುತ್ತಿದ್ದಾರೆ. ಈ ಕಾರಣದಿಂದ ಪಶ್ಚಿಮದ ಲೋಕದಲ್ಲಿ ಮಸ್‌ಜಿದ್‌ಗಳು ಅಸ್ತವ್ಯಸ್ತತೆ ಮತ್ತು ಸಂಘರ್ಷಗಳ ಮೂಲ ಸ್ಥಾನವೆಂಬ ಭಯವು ವ್ಯಾಪಕವಾಗಿ ಹರಡಿರುವುದು ಆಶ್ಚರ್ಯಕರವಾದುದೇನೂ ಅಲ್ಲ.

ಈ ಕಾರಣದಿಂದ ಪಶ್ಚಿಮದ ಕೆಲವು ಪಕ್ಷಗಳು ಮತ್ತು ಗುಂಪುಗಳು ಮಸ್‌ಜಿದ್‌ಗಳನ್ನು ನಿಷಿದ್ಧಗೊಳಿಸಬೇಕೆಂದು ಅಥವಾ ಮುಸ್ಲಿಮರ ಮೇಲೆ ಕೆಲವು ನಿರ್ಬಂಧಗಳನ್ನು ಹೇರಬೇಕೆಂದು ಕರೆ ನೀಡಲು ಉತ್ತೇಜಿಸಲ್ಪಟ್ಟಿವೆ. ಉದಾಹರಣೆಗೆ, ಹಿಜಾಬ್ ಮತ್ತು ಮಿನಾರಗಳನ್ನು, ಮತ್ತಿತರ ಇಸ್ಲಾಮೀ ಲಾಂಛನಗಳನ್ನು ನಿಷಿದ್ಧಗೊಳಿಸಬೇಕೆಂಬ ಕೂಗು ಎದ್ದಿದೆ. ಕೆಲವು ಮುಸ್ಲಿಮರು ತಮ್ಮ ವರ್ತನೆಗಳ ಕಾರಣದಿಂದ ಮುಸ್ಲಿಮೇತರರಿಗೆ ಇಸ್ಲಾಮ್ ಧರ್ಮ ತತ್ವಗಳ ವಿರುದ್ಧ ದೋಷಾರೋಪಗಳನ್ನು ಮಾಡುವ ಸಂದರ್ಭಗಳನ್ನು ಒದಗಿಸುತ್ತಿರುವುದು ವಿಷಾದಕರವಾಗಿದೆ. ಒಬ್ಬ ಮುಸ್ಲಿಮನು ನಮಾಝುನ್ನು ಕಡ್ಡಾಯವಾಗಿ ಅನುಷ್ಠಿಸಬೇಕಲ್ಲದೆ ಅವನು ಅನಾಥರನ್ನು ಸಂರಕ್ಷಿಸಬೇಕು ಮತ್ತು ಬಡವರಿಗೆ ಆಹಾರ ನೀಡಬೇಕು. ಹೀಗೆ ಮಾಡದಿದ್ದರೆ ನಮ್ಮ ಆರಾಧನೆಗಳು ವ್ಯರ್ಥವಾಗುತ್ತವೆ. ಈ ವಿಷಯವನ್ನು ಪವಿತ್ರ ಖುರ್‌ಆನ್ ಅಧ್ಯಾಯ 107 – ವಚನ ಮೂರು, ನಾಲ್ಕು, ಐದರಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.

ಇಸ್ಲಾಮ್ ಧರ್ಮದ ಉಪದೇಶಗಳನ್ನು ಆಧಾರವಾಗಿಟ್ಟುಕೊಂಡು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ನಾವು ಅಲ್ಲಾಹನ ಅನುಗ್ರಹದಿಂದ ಮಾನವರ ಹಿತಕ್ಕೋಸ್ಕರ ಅನೇಕ ಯೋಜನೆಗಳನ್ನು ಜಾರಿಗೊಳಿಸಿ ಧರ್ಮ, ಜಾತಿ ಮತ್ತು ವರ್ಣ ವ್ಯತ್ಯಾಸ ಮಾಡದೆ ಕಷ್ಟಪೀಡಿತರ ಹೃದಯಬೇನೆಯನ್ನೂ ಪ್ರತಿಕೂಲ ಸ್ಥಿತಿಯನ್ನೂ ತಗ್ಗಿಸಲು ಪ್ರಯತ್ನಿಸುತ್ತಿದ್ದೇವೆ. ಲೋಕದ ದೂರದ ದಾರಿದ್ರ್ಯ ಬಾಧಿತ ಪ್ರದೇಶಗಳಲ್ಲಿ ನಾವು ಆಸ್ಪತ್ರೆಗಳನ್ನೂ ಶಾಲೆಗಳನ್ನೂ ಕಾಲೇಜುಗಳನ್ನೂ ಸ್ಥಾಪಿಸಿ ವಿದ್ಯಾಭ್ಯಾಸ ಮತ್ತು ಆರೋಗ್ಯ ಸೇವೆಯನ್ನು ನೀಡುತ್ತಿದ್ದೇವೆ. ಇವುಗಳಿಗೋಸ್ಕರ ನಾವು ಹೊಗಳಿಕೆಯನ್ನು ಬಯಸುವುದಿಲ್ಲ. ಅಲ್ಲಿನ ಜನರು ತಮ್ಮೆರಡು ಕಾಲುಗಳ ಮೇಲೆ ನಿಂತು ತಮ್ಮ ಆಶಾಭಿಲಾಷೆಗಳನ್ನು ಈಡೇರಿಸಿ ಗೌರವದಿಂದಲೂ ಸ್ವಾತಂತ್ರ್ಯದಿಂದಲೂ ಸಮಾಧಾನದಿಂದಲೂ ಜೀವಿಸುವಂತೆ ಮಾಡಲು ನೆರವು ನೀಡುವುದೇ ನಮ್ಮ ಆಶೆಯಾಗಿದೆ. ನಿರಾಶೆಗೊಂಡು ತೀವ್ರವಾದದ ಬಗ್ಗೆ ಒಲವು ಹೊಂದುವುದಕ್ಕೆ ಬದಲಾಗಿ ಅವರು ಈ ಮೂಲಕ ಜವಾಬ್ದಾರಿಯುಳ್ಳ ನಿಷ್ಠಾವಂತ ನಾಗರಿಕರಾಗಿ ತಮ್ಮ ದೇಶದಲ್ಲಿ ಜೀವಿಸುವರು. ಅವರು ಸ್ವತಃ ವೈಯುಕ್ತಿಕವಾಗಿ ಪ್ರಗತಿ ಹೊಂದುವರಲ್ಲದೆ ತಮ್ಮ ದೇಶದ ಅಭಿವೃದ್ಧಿಗೆ ಸಹಾಯಕರಾಗುವರು ಮತ್ತು ಅನ್ಯರು ಅವರ ಹೆಜ್ಜೆ ಗುರುತುಗಳಲ್ಲಿ ಸಾಗುವಂತೆ ಪ್ರೇರೇಪಣೆ ನೀಡುವವರಾಗುವರು.

ಇದೇ ರೀತಿ ಇಸ್ಲಾಮಿನ ಮೂಲಭೂತ ತತ್ವಗಳಲ್ಲಿ ಒಂದು, ಮುಸ್ಲಿಮರು ಸಮಾಜದ ಸಹಜೀವಿಗಳೊಂದಿಗೆ ಶಾಂತಿಯಿಂದ ಜೀವಿಸಬೇಕು ಮತ್ತು ಅನ್ಯರಿಗೆ ಯಾವುದೇ ಹಾನಿ ಉಂಟುಮಾಡಬಾರದು ಎಂದಾಗಿದೆ. ವಾಸ್ತವಿಕತೆ ಹೀಗಿದ್ದರೂ ಅನೇಕ ಜನರು, ಇಸ್ಲಾಮ್ ಹಿಂಸಾಚಾರ ಮತ್ತು ಯುದ್ಧದೊಂದಿಗೆ ಸಂಬಂಧ ಹೊಂದಿದೆ ಎಂದು ಹೇಳುತ್ತಾರೆ. ಆದರೆ ಇದು ಸತ್ಯದಿಂದ ದೂರವಾಗಿರುವ ಅಭಿಪ್ರಾಯವಾಗಿದೆ. ಭಯೋತ್ಪಾದಕರು ಏನೇ ವಾದಿಸಿದರೂ ಯಾವುದೇ ಸಂದರ್ಭದಲ್ಲಿ

ಸ್ವಚ್ಛಂದ ಆಕ್ರಮಣಗಳನ್ನು ಮತ್ತು ಹತ್ಯೆಗಳನ್ನು ಇಸ್ಲಾಮ್ ಎಂದೂ ಸಮರ್ಥಿಸುವುದಿಲ್ಲ. ಇಸ್ಲಾಮ್ ಧರ್ಮ ಮಾನವ ಜೀವನದ ಪಾವಿತ್ರ್ಯವನ್ನು ಪ್ರತಿಪಾದಿಸುತ್ತಿದೆ. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 33ರಲ್ಲಿ ಹೀಗೆ ಹೇಳಲಾಗಿದೆ: "ಒಬ್ಬನನ್ನು ಯಾರಾದರೂ ಕೊಂದರೆ ಅವನು ಮನುಷ್ಯರೆಲ್ಲರನ್ನೂ ಕೊಂದಂತಾಗುತ್ತದೆ. ಯಾರಾದರೂ ಒಬ್ಬನ ಜೀವವನ್ನು ರಕ್ಷಿಸಿದರೆ ಆತನು ಮನುಷ್ಯರೆಲ್ಲರನ್ನೂ ರಕ್ಷಿಸಿದಂತಾಗುತ್ತದೆ."

ಇದೆಷ್ಟು ಸ್ಪಷ್ಟವೂ ದೃಢವೂ ಆಗಿರುವ ಹೇಳಿಕೆಯಾಗಿದೆ! ಆದರೆ ಇಸ್ಲಾಮಿನ ಆರಂಭದ ಕಾಲದಲ್ಲಿ ಯುದ್ಧಗಳು ನಡೆದ ಬಗ್ಗೆ ಜನರು ಆಗಾಗ ಪ್ರಶ್ನಿಸುತ್ತಿದ್ದಾರೆ. ಅವರು ಹೀಗೆಯೂ ಕೇಳುತ್ತಾರೆ: ಭಯೋತ್ಪಾದ ಕೃತ್ಯಗಳು ಇಸ್ಲಾಮಿನ ಹೆಸರಿನಲ್ಲಿ ಏಕೆ ನಡೆಸಲ್ಪಡುತ್ತವೆ? ಈ ಪ್ರಶ್ನೆಗೆ ನಾನು ಉತ್ತರ ನೀಡುವಾಗ ಪವಿತ್ರ ಖುರ್‌ಆನಿನ ಅಧ್ಯಾಯ 22ರ ಎರಡು ವಚನಗಳನ್ನು ಉಲ್ಲೇಖಿಸುತ್ತೇನೆ. ಈ ವಚನಗಳ ಮೂಲಕ ಮುಸ್ಲಿಮರಿಗೆ ಪ್ರತಿರೋಧಕ ಯುದ್ಧ ಮಾಡಲು ಪ್ರಥಮ ಬಾರಿ ಅನುಮತಿ ನೀಡಲಾಯಿತು. ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: "ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ, ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ".

ಪವಿತ್ರ ಪೈಗಂಬರರಿಗೆ(ಸ) ಯುದ್ಧ ಮಾಡಲು ಅನುಮತಿಸಿದ ಕಾರಣವನ್ನು ವಿಶದೀಕರಿಸಿ ಮುಂದಿನ ಪವಿತ್ರ ಖುರ್‌ಆನ್ ವಚನದಲ್ಲಿ ಹೀಗೆ ಹೇಳಲಾಗಿದೆ: "ಅಲ್ಲಾಹನೇ ನಮ್ಮ ಪ್ರಭು ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತವೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ."

ಪವಿತ್ರ ಖುರ್‌ಆನಿನ ಈ ವಚನಗಳು ಏನನ್ನು ಸಾಬೀತುಗೊಳಿಸುತ್ತವೆ? ಖಂಡಿತವಾಗಿಯೂ ಈ ಪವಿತ್ರ ಖುರ್‌ಆನ್ ವಚನಗಳು ಮುಸ್ಲಿಮರಿಗೆ ಕ್ರೌರ್ಯ ಕೃತ್ಯಗಳನ್ನು ಮಾಡಲು ಮತ್ತು ಅನ್ಯರ ರಕ್ತಪಾತ ಮಾಡಲು ಪರವಾನಗಿ ನೀಡುವುದಿಲ್ಲ. ಈ ವಚನಗಳು ಅನ್ಯಧರ್ಮಗಳನ್ನು ಸಂರಕ್ಷಣೆ ಮಾಡುವ ಹೊಣೆಗಾರಿಕೆಗಳನ್ನು ಸ್ಥಾಪಿಸುತ್ತವೆ ಮತ್ತು ಅನ್ಯರಿಗೆ ತಮಗಿಷ್ಟವಿರುವ ಧರ್ಮವನ್ನು ಅವಲಂಬಿಸಲಿರುವ ಸ್ವಾತಂತ್ರ್ಯವನ್ನು ಯಾವುದೇ ರೀತಿಯ ಬಲಾತ್ಕಾರವಿಲ್ಲದೆ ಹೊಂದುವುದನ್ನು ಮುಸ್ಲಿಮರು ಖಾತರಿಪಡಿಸಬೇಕೆಂದು ಆವಶ್ಯಪಡುತ್ತದೆ.

ಆದುದರಿಂದ ಇಸ್ಲಾಮ್ ಎಂತಹ ಧರ್ಮವಾಗಿದೆ ಎಂದರೆ ಅದರಲ್ಲಿ ಧಾರ್ಮಿಕ ಸ್ವಾತಂತ್ರ್ಯ, ಮನಸ್ಸಾಕ್ಷಿಯ ಸ್ವಾತಂತ್ರ್ಯ ಮತ್ತು ನಂಬಿಕೆಯ ಸ್ವಾತಂತ್ರ್ಯ ಎಂಬ ಸಾರ್ವತ್ರಿಕ ತತ್ವಗಳು ಎಂದೆಂದಿಗೂ ಅಡಕವಾಗಿವೆ. ಆದುದರಿಂದ ಇಂದಿನ ಕಾಲದಲ್ಲಿ ಮುಸ್ಲಿಮ್ ನಾಮಧಾರಿ ಗುಂಪುಗಳು ಅಥವಾ ಪಂಗಡಗಳು ಜನರನ್ನು ಕೊಲ್ಲುತ್ತಿರುವುದಾದರೆ ಅದನ್ನು ಕಟುವಾಗಿ ಖಂಡಿಸಬೇಕಾಗಿದೆ. ಅವರ ಬರ್ಬರ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳನ್ನು ಸಂಪೂರ್ಣವಾಗಿ ಉಲ್ಲಂಘಿಸುವವುಗಳಾಗಿವೆ. ಇಂತಹ ಕೃತ್ಯ ನಡೆಸುವ ಜನರು ತಾವು ಯಾರ ಧರ್ಮವನ್ನು ಅನುಸರಿಸುತ್ತಿರುವುದಾಗಿ ಹೇಳುತ್ತಿದ್ದಾರೆಯೋ ಅದರ ಬಗ್ಗೆ ಅವರಿಗೆ ಯಾವ ಜ್ಞಾನವೂ ಇರುವುದಿಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ.

ಉದಾಹರಣೆಗೆ, ಬ್ರೆಸ್ಸಲ್ಸ್ ಮತ್ತು ಪ್ಯಾರಿಸ್‌ನಲ್ಲಿ ನಡೆದ ಭಯೋತ್ಪಾದಕ ಕೃತ್ಯಗಳನ್ನು ಮಾಡಿದ ಒಬ್ಬ ಭಯೋತ್ಪಾದಕನನ್ನು ಪ್ರತಿನಿಧೀಕರಿಸಿದ ಒಬ್ಬ ನ್ಯಾಯವಾದಿ ಮಿಸ್ಟರ್ ಸ್ವೆನ್‌ಮೇರಿ ಇತ್ತೀಚೆಗೆ ಒಂದು ಫ್ರೆಂಚ್ ಪತ್ರಿಕೆಗೆ ಸಂದರ್ಶನ ನೀಡುತ್ತಾ ಹೇಳಿದರು: ನನ್ನ ಕಕ್ಷಿಗಾರನಿಗೆ ಇಸ್ಲಾಮ್ ಧರ್ಮದ ಬಗ್ಗೆ ಏನೂ ತಿಳಿದಿರಲಿಲ್ಲ. ಆ ಭಯೋತ್ಪಾದಕ ಎಂದಾದರೂ ಪವಿತ್ರ ಖುರ್‌ಆನನ್ನು ಓದಿರುವನೋ ಎಂದು ವಿಚಾರಿಸಿದಾಗ ಅವನು ತಾನು ಓದಿಲ್ಲ. ಆದರೆ ಆನ್‌ಲೈನ್‌ನಲ್ಲಿ ಒಂದು ವ್ಯಾಖ್ಯಾನವನ್ನು ಓದಿರುವುದಾಗಿ ಹೇಳಿದನು.

ಇದಲ್ಲದೆ ಲಂಡನಿನ ರೋಯಲ್ ಇನ್‌ಸ್ಟಿಟ್ಯೂಟ್ ಫೋರ್ ಇಂಟರ್‌ನೇಶನಲ್ ರಿಲೇಶನ್ಸ್ ಎಂಬ ಸಂಸ್ಥೆ ಒಂದು ಸಂಶೋಧನಾತ್ಮಕ ವರದಿಯನ್ನು 2016 ಮಾರ್ಚ್‌ನಲ್ಲಿ ಪ್ರಕಟಿಸಿತ್ತು. ಆ ವರದಿಯನ್ನು ಹೀಗೆ ಮುಕ್ತಾಯಗೊಳಿಸಲಾಗಿತ್ತು: ತಾವು ಮುಸ್ಲಿಮರೆಂದು ಹೇಳಿಕೊಂಡ ಭಯೋತ್ಪಾದಕರಿಗೆ ಇಸ್ಲಾಮ್ ಬಗ್ಗೆ ಯಾವ ಜ್ಞಾನವೂ ಇರಲಿಲ್ಲ.

ತೀವ್ರವಾದಿಗಳಾಗಿ ಭಯೋತ್ಪಾದಕ ಅಪರಾಧಗಳನ್ನು ಪಶ್ಚಿಮದಲ್ಲಿ ನಡೆಸಿದ ತರುಣರಾದ ಮುಸ್ಲಿಮರ ಬಗ್ಗೆ ಆ ವರದಿಯಲ್ಲಿ ಹೀಗೆ ಬರೆಯಲಾಗಿದೆ: "ಇವರಿಗಿಂತ ಹಿಂದಿನ ಕಾಲದ ಭಯೋತ್ಪಾದಕರಿಗಿಂತ ಧಾರ್ಮಿಕ ಚಿಂತನೆಗಳ ಪರಿಚಯ ಖಂಡಿತವಾಗಿಯೂ ಹೆಚ್ಚು ಪೊಳ್ಳಾದುದೂ ಮೇಲು ಮೇಲಿನದೂ

ಈಗಿನ ಕಾಲದ ಭಯೋತ್ಪಾದಕರದಾಗಿದೆ. ಅಂತರ್‍ರಾಷ್ಟ್ರೀಯ ರಾಜಕಾರಣದ ಬಗ್ಗೆ ಪರಿಚಯವು ಕೂಡ ಅದೇ ಮಟ್ಟದ್ದಾಗಿದೆ...... ಹಿಂದಿನ ಭಯೋತ್ಪಾದಕರ ತೀವ್ರವಾದ ಮತ್ತು ಭಯೋತ್ಪಾದನೆಯ ಕೃತ್ಯಗಳ ಪ್ರಾರಂಭದ ಬಿಂದು ಬಹುತೇಕ ಸಂದರ್ಭಗಳಲ್ಲಿ ಅನ್ಯಾಯ ಎಂದಾಗಿತ್ತು. ಆದರೆ ಈಗ ಅದು ಹೆಚ್ಚಿನ ಮಟ್ಟಿಗೆ ಮರೆಮಾಡಲ್ಪಟ್ಟು ಅದರ ಬದಲಿಗೆ ವೈಯಕ್ತಿಕ ಇಚ್ಛಾಭಂಗ ಮತ್ತು ಸ್ವಾರ್ಥ ಉದ್ದೇಶಗಳು ಸ್ಥಾನ ಪಡೆದಿವೆ. ಇವುಗಳೇ ಅವರ ಯಾತ್ರೆಯ ಮುಖ್ಯ ಇಂಜಿನ್‌ಗಳಾಗಿವೆ.

ವಾಶಿಂಗ್‌ಟನ್ ಪೋಸ್ಟ್ (WASHINGTON POST) ಪತ್ರಿಕೆಯಲ್ಲಿ ಬೆಲ್‌ಜಿಯಂ ದೇಶದ ಭಯೋತ್ಪಾದಕ ಪ್ರತಿರೋಧ ವಿಭಾಗದ ಅಧಿಕಾರಿ ಅಲೆನ್ ಗ್ರಿಗ್ನಾರ್ಡ್ (ALAIN GRIGNARD) ಹೀಗೆ ಹೇಳುತ್ತಾರೆ: "ಸಮಾಜದ ವಿರುದ್ಧ ಅವರ ವಿದ್ರೋಹ ಚಿಕ್ಕಪುಟ್ಟ ಅಪರಾಧಗಳ ಮತ್ತು ಅಪರಾಧ ಪ್ರವೃತ್ತಿ ಮೂಲಕ ಪ್ರಕಟವಾಗುತ್ತಿತ್ತು. ಅವರಲ್ಲಿ ಬಹುತೇಕರು ದಾರಿಯ ಪುಂಡರ ಗುಂಪಿಗೆ ಸೇರಿದವರಾಗಿದ್ದರು. ಇಸ್ಲಾಮಿಕ್ ಸ್ಟೇಟ್ ಎಂಬ ಭಯೋತ್ಪಾದಕ ಗುಂಪು ತಂದುದು ಇಸ್ಲಾಮಿನ ಹೊಸ ತಳಿಯನ್ನಾಗಿದೆ. ಅದು ಅವರ ತೀವ್ರಗಾಮಿ ವರ್ತನೆಯನ್ನು ಸಮರ್ಥಿಸಿತು."

ಈ ರೀತಿ ಮುಸ್ಲಿಮೇತರರಾದ ಪರಿಣಿತರು ಭಯೋತ್ಪಾದಕರು ಇಸ್ಲಾಮಿನ ಹೊಸ ತಳಿಯನ್ನು ಸ್ಥಾಪಿಸಿದ್ದಾರೆಂದು ಒಪ್ಪಿಕೊಂಡಿದ್ದಾರೆ. ಆದರೆ ಅದು ಇಸ್ಲಾಮಿನ ಧರ್ಮ ತತ್ವಗಳ ನಿಂದನೀಯ ತಿರುಚುವಿಕೆಯಾಗಿದೆ. ಈ ಹೊಸ ತಳಿಯನ್ನು ಅನುಸರಿಸುವವರು ನಿಷ್ಕಳಂಕ ಜನರನ್ನು ನಿರ್ದಯವಾಗಿ ಹತ್ಯೆ ಮಾಡುತ್ತಿದ್ದಾರೆ, ಅಂಗವಿಕಲಗೊಳಿಸುತ್ತಿದ್ದಾರೆ ಮತ್ತು ಮಾನಭಂಗಪಡಿಸುತ್ತಿದ್ದಾರೆ. ಇಂತಹ ಜನರು ಪವಿತ್ರ ಖುರ್‌ಆನ್ ಪ್ರಕಾರ ಮಾನವರೆಲ್ಲರನ್ನೂ ಹತ್ಯೆ ಮಾಡುವವರಾದ ಅಪರಾಧಿಗಳಾಗಿದ್ದಾರೆ.

ಇನ್ನೊಂದು ಕಡೆಯುಲ್ಲಿ ಕಾಣುವುದೇನೆಂದರೆ, ಮುಸ್ಲಿಮೇತರರಲ್ಲಿ ಕೆಲವು ವ್ಯಕ್ತಿಗಳು ಮತ್ತು ಗುಂಪುಗಳು ವಿಭಜನೆ ಮತ್ತು ಹಗೆತನದ ಜ್ವಾಲೆಗಳಿಗೆ ಗಾಳಿಹಾಕಲು ಪ್ರಯತ್ನಿಸುತ್ತಿದ್ದಾರೆ. ಅವರು ಇಸ್ಲಾಮ್ ಧರ್ಮ ತತ್ವಗಳನ್ನು ನಿಂದಿಸುವುದನ್ನು ಮತ್ತು ಅನ್ಯಾಯಕರವಾಗಿ ಅಪಮಾನಿಸುವುದನ್ನು ತಮ್ಮ ಜೀವಿತ ಧ್ಯೇಯವನ್ನಾಗಿ ಮಾಡಿಕೊಂಡಿದ್ದಾರೆ. ಉದಾಹರಣೆಗೆ, ಫೋರಿನ್ ಪಾಲಿಸಿ (FOREIGN POLICY) ಎಂಬ ಪತ್ರಿಕೆಯಲ್ಲಿ ಕಳೆದ ವಾರ ಪ್ರಕಟವಾದ ಅಂಕಣದಲ್ಲಿ ಪತ್ರಕರ್ತೆ ಬೆಥನಿ ಅಲ್ಲೆನ್ (BEITHANY ALLEN) ಭದ್ರ ಬಂಡವಾಳ ಹೊಂದಿದ ಆಧುನಿಕ ನೆಟ್‌ವರ್ಕ್ ಅಮೇರಿಕದಲ್ಲಿ ಸ್ಥಾಪಿತವಾಗಿದೆ ಎಂದೂ ಅದರ ಏಕಮಾತ್ರ ಉದ್ದೇಶ ಇಸ್ಲಾಮಿನ ಭಯವನ್ನು ಉತ್ತೇಜಿಸುವುದಾಗಿದೆ ಎಂದೂ ಇಸ್ಲಾಮಿನ ಶಾಂತಿಮಯ ತತ್ವಗಳ ಪ್ರಚಾರ ಪ್ರಯತ್ನಗಳನ್ನು ತಡೆಯುವುದಾಗಿದೆ ಎಂದೂ ಬರೆದಿದ್ದಾರೆ. ಅವರು ಹೀಗೆ ಹೇಳುತ್ತಾರೆ:

"ಚೆನ್ನಾಗಿ ಭಂಡವಾಳ ಹೊಂದಿದ ಒಂದು ನೆಟ್‌ವರ್ಕ್ ಅಮೇರಿಕನ್ ಮುಸ್ಲಿಮರಿಗಿರುವ ಅಭಿಪ್ರಾಯ ಪ್ರಕಟಣೆಯ ಹಕ್ಕನ್ನು ಕಿತ್ತು ಹಾಕಿ ಭಯದ ರಾಜಕಾರಣದ ಜ್ವಾಲೆಗೆ ಗಾಳಿ ಹಾಕಲು ಪ್ರಯತ್ನಿಸುತ್ತಿದೆ. ಅಮೇರಿಕದ ತೀವ್ರ ಬಲಪಂಥೀಯ, ಮುಸ್ಲಿಮ್ ವಿರೋಧಿ ಪರಿಸರ ಪ್ರತಿಪಾದಿಸುವ ವಿಕೃತ ಇಸ್ಲಾಮೀ ವ್ಯಾಖ್ಯಾನಗಳು ಇಸ್ಲಾಮಿಕ್ ಸ್ಟೇಟ್ (ISIS) ಪ್ರತಿಪಾದಿಸುವಂಹದೇ ಆಗಿವೆ. ಲೇಖಿಕೆ ಮುಂದುವರಿದು ಹೇಳುತ್ತಾರೆ: ಅಮೇರಿಕದಲ್ಲಿರುವ ಶಾಂತಿ ಪ್ರಿಯರಾದ ಮುಸ್ಲಿಮರು, ......ಇಸ್ಲಾಮ್ ಬಗ್ಗೆ ಭೀತಿ ಎಂಬ ವರ್ಧಿಸುತ್ತಿರುವ ಶಕ್ತಿಯುತ ಉದ್ಯಮದ ಬಲಿಪಶುವಾಗುತ್ತಿದ್ದಾರೆ. ಅದು ಸಂತುಲಿತ ಮತ್ತು ಬಹಿರಂಗ ಚರ್ಚೆಯನ್ನು ಸಂಕುಚಿತಗೊಳಿಸಿ ಇಸ್ಲಾಮಿನ ಶಾಂತಮಯ ಮೂಲ ವ್ಯಾಖ್ಯಾನಗಳನ್ನು ಪ್ರಚಾರಗೊಳಿಸಲು ಪ್ರಯತ್ನಿಸುವ ಮುಸ್ಲಿಮರನ್ನು ಬದಿಗೆ ಸರಿಸಲು ಪ್ರಯತ್ನಿಸುತ್ತಿದೆ."

ಲೇಖಿಕಿ ಹೀಗೆ ಸಹ ಬರೆದಿದ್ದಾರೆ: "ಅಭಿಪ್ರಾಯ ಪ್ರಕಟಣೆ ಮತ್ತು ಧಾರ್ಮಿಕ ಸ್ವಾತಂತ್ರ್ಯಗಳಿಗೆ ಸಂಬಂಧಿಸಿ ಅಮೇರಿಕದಲ್ಲಿ ಬಲಿಷ್ಠವಾದ ಸಂರಕ್ಷಣೆಗಳಿವೆ..... ಆದರೆ ಒಂದು ನೆಟ್‌ವರ್ಕ್ ಈ ಸ್ವಾತಂತ್ರ್ಯಗಳನ್ನು ಮುಸ್ಲಿಮರಿಗೆ ನಿರಾಕರಿಸಲು ಉದ್ದೇಶಿಸುತ್ತದೆ ಮತ್ತು ಇಸ್ಲಾಮನ್ನು ಒಂದು ಧರ್ಮವಾಗಿ ಪರಿಗಣಿಸದೆ ಒಂದು ಅಪಾಯಕಾರಿ ರಾಜಕೀಯ ಸಿದ್ಧಾಂತ ಎಂದು ಪರಿಗಣಿಸುತ್ತದೆ ಮತ್ತು ಭಿನ್ನಾಭಿಪ್ರಾಯ ಸೂಚಿಸುವ ಮುಸ್ಲಿಮರನ್ನು ಮೌನವಾಗಿರಿಸಲು ಮತ್ತು ಅಪಮಾನಿಸಲು ಪ್ರಯತ್ನಿಸುತ್ತಿದೆ."

ಲೇಖಿಕೆ ಅಮೇರಿಕದ ಒಬ್ಬ ಶಾಂತಿ ಪ್ರತಿಪಾದಕ ನವ ಮುಸ್ಲಿಮನ ಉದಾಹರಣೆ ನೀಡಿದ್ದಾರೆ. ಆ ವ್ಯಕ್ತಿ ಇಸ್ಲಾಮ್ ಧರ್ಮದ ಸತ್ಯವಾದ ಉಪದೇಶಗಳ ಬಗ್ಗೆ ಯುನಿವರ್ಸಿಟಿಯಲ್ಲಿ ಭಾಷಣ ಮಾಡಿದ ಕೂಡಲೆ ಒಂದು ಶಕ್ತಿಶಾಲಿ ಗುಂಪು ಆ ವ್ಯಕ್ತಿಯ ವಿರುದ್ಧವಾಗಿ ವರ್ತಿಸಿತು. ಹತ್ಯೆ, ಗುಲಾಮಗಿರಿ ಮತ್ತು ಮಾನಭಂಗ ಬಗ್ಗೆ ಸಮರ್ಥಿಸುವವ ಎಂದು ಚಿತ್ರೀಕರಿಸಲಾಯಿತು. ಆತನ ಕುಟುಂಬಕ್ಕೆ ಹತ್ಯೆ ಮತ್ತು ಮಾನಭಂಗದ ಬೆದರಿಕೆ ಒಡ್ಡಲಾಯಿತು. ಆತನು ಉದ್ಯೋಗಿಯಾಗಿದ್ದ ಯುನಿವರ್ಸಿಟಿಗೆ ಆತನನ್ನು ಉದ್ಯೋಗದಿಂದ ಕಿತ್ತುಹಾಕಬೇಕೆಂದು ಈಮೈಲ್‌ಗಳ ನೆರೆಯನ್ನು ಹಾಯಿಸಲಾಯಿತು. ಇಂತಹ ಪ್ರಕರಣಗಳು ಸಾಬೀತುಗೊಳಿಸುವುದೇನೆಂದರೆ, ಇಸ್ಲಾಮಿನ ವಿರುದ್ಧ ಜನರ ಮೇಲೆ ಪ್ರಭಾವ ಬೀರಲು ಮತ್ತು ಇಸ್ಲಾಮಿನ ನೈಜ ತತ್ವಗಳು ವಿಶಾಲವಾಗಿ ಹರಡುವುದನ್ನು ತಡೆಯಲು ಸಂಘಟಿತ ಪ್ರಯತ್ನ ನಡೆಸಲಾಗುತ್ತಿದೆ.

ತನ್ನ ಸಂಶೋಧನೆಯನ್ನು ಆಧಾರವಾಗಿಟ್ಟುಕೊಂಡು ಲೇಖಕಿ ಹೀಗೆ ನಿಷ್ಕರ್ಷಿಸುತ್ತಾರೆ: "ಈ ರೀತಿ ವರ್ತಿಸಿ, ಕ್ರೈಸ್ತ ಧರ್ಮ ಅನುಭವಿಸುವ ಕಾರ್ಯಾತ್ಮಕ ಸ್ವಾತಂತ್ರ್ಯದ ಹಕ್ಕನ್ನು ಮುಸ್ಲಿಮರಿಗೆ ನಿರಾಕರಿಸುತ್ತಿದ್ದಾರೆ. ಆಧುನಿಕ ಅಮೇರಿಕನ್ ಜೀವಿತದೊಂದಿಗೆ ಸೌಹಾರ್ದ ಹೊಂದಿರುವ ಇಸ್ಲಾಮನ್ನು ಪ್ರತಿಪಾದಿಸುವ ಮುಸ್ಲಿಮರನ್ನು ಮೌನವಾಗಿರಿಸಲು ಪ್ರಯತ್ನಿಸುತ್ತಿದ್ದಾರೆ. ಇದೇ ಅವರ ಉದ್ದೇಶವಾಗಿದೆ."

ವಿಷಾದಕರವಾಗಿ, ರಾಜಕಾರಣಿಗಳು ಅನಾವಶ್ಯಕ ಉದ್ರೇಕಿಸುವ ಹೇಳಿಕೆಗಳನ್ನು ನೀಡುವುದನ್ನು ನಾವು ಆಲಿಸುತ್ತಿದ್ದೇವೆ. ಅವು ಸತ್ಯಕ್ಕೆ ಬದ್ಧವಾಗಿರದೆ ಕೇವಲ ಅವರ ರಾಜಕೀಯ ಹಿತಾಸಕ್ತಿಗಳಿಗೆ ಬದ್ಧವಾಗಿರುತ್ತವೆ. ಉದಾಹರಣೆಗೆ, ಅಮೇರಿಕದ ಅಧ್ಯಕ್ಷ ಪದವಿಗೆ ಅಭ್ಯರ್ಥಿಯಾಗಿದ್ದ ಡಾಕ್ಟರ್ ಬೆನ್ ಕಾರ್‌ಸನ್ – ಅವರು ಈಗ ಯು.ಎಸ್. ಆಡಳಿತೆಯ ಕ್ಯಾಬಿನೆಟ್ ಸದಸ್ಯರಾಗಿದ್ದಾರೆ – ಇಸ್ಲಾಮನ್ನು ಒಂದು ಧರ್ಮ ಎಂದು ವರ್ಣಿಸದೆ ಅದು ಒಂದು ಜೀವಿತ ವ್ಯವಸ್ಥೆ ಎಂದು ಹೇಳಿದರು. ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಹೀಗೆ ಹೇಳಿದರು:

"ನಾನು ಸೂಚಿಸುವುದೇನೆಂದರೆ, ಪ್ರತಿಯೊಬ್ಬನು ಕೆಲವು ಗಂಟೆಗಳ ಬಿಡುವು ಮಾಡಿಕೊಂಡು ಇಸ್ಲಾಮ್ ಬಗ್ಗೆ ಓದಬೇಕು. ಮುಹಮ್ಮದ್ ಬಗ್ಗೆ ಓದಬೇಕು. ಮಕ್ಕದಲ್ಲಿ ಅವರು ಹೇಗೆ ಆರಂಭಿಸಿದರೆಂದು ಓದಬೇಕು. ಮಕ್ಕದ ಜನರು ಅವರ ಬಗ್ಗೆ ಯಾವ ಅಭಿಪ್ರಾಯ ಸೂಚಿಸಿದರು ಎಂದು ತಿಳಿಯಬೇಕು– ಅದು ಬಹಳ ಅನುಕೂಲಕರವಾಗಿ ಅಲ್ಲ..... ಅವರ ಚಿಕ್ಕಪ್ಪ ಪ್ರಭಾವಶಾಲಿಯಾಗಿದ್ದ ಕಾರಣ ಹೇಗೆ ಅವರನ್ನು ರಕ್ಷಿಸಿದರೆಂದು. ಚಿಕ್ಕಪ್ಪ ಮೃತರಾದಾಗ ಅವರು ಓಡಿಹೋಗಬೇಕಾಯಿತು. ಅವರು ಉತ್ತರ ದಿಕ್ಕಿನಲ್ಲಿರುವ ಮದೀನಕ್ಕೆ ಹೋದರು..... ಅಲ್ಲಿ ಅವರು ತನ್ನ ಸೈನ್ಯವನ್ನು ಜಮಾಯಿಸಿದರು. ಅವರು ತಮ್ಮ ಹಾಗೆ ವಿಶ್ವಾಸ ಹೊಂದದ ಎಲ್ಲರನ್ನೂ ಸಾಮೂಹಿಕ ಹತ್ಯೆ ಮಾಡಲು ತೊಡಗಿದರು."

ನಾನು ಡಾಕ್ಟರ್ ಕಾರ್‌ಸನ್ ಹೇಳಿದ ಒಂದು ಮಾತನ್ನು ಅಂಗೀಕರಿಸುತ್ತೇನೆ. ಇಸ್ಲಾಮಿನ ಪವಿತ್ರ ಪೈಗಂಬರರ(ಸ) ನೈಜ ಸ್ವಭಾವಗುಣಗಳನ್ನು ಅರಿತುಕೊಳ್ಳಲು ಜನರು ಬಿಡುವು ಮಾಡಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ನಿಷ್ಪಕ್ಷಪಾತ ಗ್ರಂಥಗಳನ್ನು ಅಧ್ಯಯನ ಮಾಡಿದರೆ ಅವರಿಗೆ ತಿಳಿಯುವುದು – ಪವಿತ್ರ ಪೈಗಂಬರರು(ಸ) ಮುಸ್ಲಿಮೇತರರನ್ನು ಎಂದೂ ಸಾಮೂಹಿಕ ಹತ್ಯೆ ಮಾಡಿರಲಿಲ್ಲ. ಇಂತಹ ದೋಷಾರೋಪಗಳು ಚಾರಿತ್ರಿಕ ಸತ್ಯಗಳಿಗೆ ಅಪಮಾನಕರವಾಗಿವೆ. ಸತ್ಯವೇನೆಂದರೆ, ಅನೇಕ ವರ್ಷಗಳಷ್ಟು ಕಾಲ ತೀವ್ರ ಹಿಂಸಾಚಾರಗಳಿಗೆ ತುತ್ತಾದ ಪವಿತ್ರ ಪೈಗಂಬರರನ್ನು(ಸ) ಮತ್ತು ಅವರ ಅನುಯಾಯಿಗಳನ್ನು ಅವರ ಸ್ವಂತ ಪಟ್ಟಣವಾದ ಮಕ್ಕದಿಂದ ಹೊರಗೋಡಿಸಲಾಯಿತು. ಅವರು ಮದೀನಕ್ಕೆ ವಲಸೆ ಹೋಗಲು ನಿರ್ಬಂಧಿಸಲ್ಪಟ್ಟು ಅಲ್ಲಿ ಯಹೂದಿಗಳೊಂದಿಗೆ ಮತ್ತು ಇತರ ಅರಬಿ ಗೋತ್ರಗಳೊಂದಿಗೆ ಶಾಂತಿಯಿಂದ ಜೀವಿಸುತ್ತಿದ್ದರು. ಆದರೆ ಮಕ್ಕದ ಅವಿಶ್ವಾಸಿಗಳು ಮುಸ್ಲಿಮರು ಮದೀನದಲ್ಲಿ ಶಾಂತಿಯಿಂದ ಜೀವಿಸಲು ಬಿಡಲಿಲ್ಲ. ಅವರು ಮುಸ್ಲಿಮರನ್ನು ಬೆನ್ನಟ್ಟಿ ಯುದ್ಧಮಾಡಿ ಇಸ್ಲಾಮನ್ನು ಸಂಪೂರ್ಣವಾಗಿ ನಾಶಮಾಡಲು ಪ್ರಯತ್ನಿಸಿದರು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಇಸ್ಲಾಮಿನ ಚರಿತ್ರೆಯಲ್ಲಿ ಪ್ರಥಮ ಬಾರಿ ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ಯುದ್ಧಮಾಡಲು ಅನುಮತಿ ನೀಡಿದನು. ನಾನು ಇದರ ಮೊದಲು ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳು ಸೂಚಿಸುವುದೇನೆಂದರೆ, ಈ ಅನುಮತಿ ನೀಡಿದುದು ನಂಬಿಕೆಯ ಸ್ವಾತಂತ್ರ್ಯದ ಸಾರ್ವತ್ರಿಕ ತತ್ವವನ್ನು ಸ್ಥಾಪಿಸಲಿಕ್ಕೋಸ್ಕರವಾಗಿತ್ತು.

ಆದುದರಿಂದ ಪವಿತ್ರ ಪೈಗಂಬರರು(ಸ) ಯುದ್ಧಾಸಕ್ತಿ ಹೊಂದಿದವರೆಂದೂ ಸಮರ ಪ್ರಿಯರೆಂದೂ ಆಕ್ಷೇಪಿಸುವುದು ಅನ್ಯಾಯಕರವೂ ಅತ್ಯಂತ ಕ್ರೂರಕೃತ್ಯವೂ ಆಗಿದೆ. ಇಂತಹ ಮಿಥ್ಯ ಆರೋಪಗಳು ಲೋಕದಾದ್ಯಂತವಿರುವ ಮಿಲಿಯಗಟ್ಟಲೆ ಮುಸ್ಲಿಮರ ಹೃದಯಗಳಿಗೆ ನೋವುಂಟು ಮಾಡುವವುಗಳೂ ಆಗಿವೆ. ಚರಿತ್ರೆ ಸಾಕ್ಷ್ಯವಹಿಸುವುದೇನೆಂದರೆ ಇಸ್ಲಾಮಿನ ಪೈಗಂಬರರು(ಸ) ತನ್ನ ಅಸ್ತಿತ್ವದ ಪ್ರತಿಯೊಂದು ಕಣದ ಮೂಲಕ ಶಾಂತಿ ಮತ್ತು ಸೌಹಾರ್ದವನ್ನು ಬಯಸಿದರು.

ಇದರ ಬಗ್ಗೆ ನೀವು ನನ್ನ ಮಾತನ್ನು ಮಾತ್ರ ಆಲಿಸಬೇಕಾಗಿಲ್ಲ. ಇಪ್ಪತ್ತನೆಯ ಶತಮಾನದ ಓರ್ವ ಪ್ರಸಿದ್ಧ ಲೇಖಕಿ ರೂಥ್ ಕ್ರಾನ್‌ಸ್ಟನ್ ಬರೆದುದನ್ನು ಆಲಿಸಿರಿ. ಪವಿತ್ರ ಪೈಗಂಬರ್ ಮುಹಮ್ಮದ್(ಸ) ಮೇಲೆ ಹೇಳಿದ ಪ್ರತಿರೋಧಾತ್ಮಕ ಯುದ್ಧಗಳನ್ನು ಯುನೈಟಡ್ ಸ್ಟೇಟ್ಸ್ ದ್ವಿತೀಯ ಜಾಗತಿಕ ಮಹಾಯುದ್ಧದಲ್ಲಿ ನಡೆಸಿದ ಅಣುಬಾಂಬ್ ದಾಳಿಯೊಂದಿಗೆ ಹೋಲಿಸಿ ಹೇಳುತ್ತಾ ಹೀಗೆ ಬರೆದಿದ್ದಾರೆ:

"ಮುಹಮ್ಮದ್ ಎಂದೂ ಯುದ್ಧವನ್ನು ಮತ್ತು ರಕ್ತಪಾತವನ್ನು ಪ್ರಚೋದಿಸಿರಲಿಲ್ಲ. ಅವರು ಹೋರಾಡಿದ ಪ್ರತಿಯೊಂದು ಯುದ್ಧ ಪ್ರತಿರೋಧಾತ್ಮಕವಾಗಿತ್ತು. ಅವರು ಬಾಳಿ ಬದುಕಲು ಮಾತ್ರ ಪ್ರತಿರೋಧಾತ್ಮಕವಾಗಿ ಯುದ್ಧ ಮಾಡಿದರು. "ಅವರು ತಮ್ಮ ಕಾಲದ ಆಯುಧಗಳನ್ನು ಬಳಸಿ ಆ ಕಾಲದ ಶೈಲಿಯಲ್ಲಿ ಯುದ್ಧ ಮಾಡಿದರು..... ಇಂದು 140 ಮಿಲಿಯ ಜನಸಂಖ್ಯೆ ಹೊಂದಿದ ಒಂದು ಕ್ರೈಸ್ತ ದೇಶ ನೂರ ಇಪ್ಪತ್ತು ಸಾವಿರ ನಿಸ್ಸಹಾಯಕರಾದ ನಾಗರಿಕರನ್ನು ಒಂದೇ ಒಂದು ಬಾಂಬ್ ಮೂಲಕ ಕೊಲ್ಲುವಾಗ ಗರಿಷ್ಠ ಐದುನೂರು ಅಥವಾ ಆರುನೂರು ಜನರನ್ನು ಒಟ್ಟಾರೆ

ಕೊಂದ ಒಬ್ಬ ನಾಯಕನನ್ನು ಓರೆ ದೃಷ್ಟಿಯಿಂದ ನೋಡಲು ಹೇಗೆ ತಾನೆ ಸಾಧ್ಯ?"

ಕೃತಜ್ಞತೆಯಿಂದ ಸ್ಮರಿಸಬೇಕಾದುದೇನೆಂದರೆ, ಇಸ್ಲಾಮನ್ನು ತೀವ್ರವಾದದ ಮತ್ತು ಹಿಂಸಾಚಾರದ ಧರ್ಮ ಎಂದು ಮುದ್ರೆಯೊತ್ತುವುದು ಸಾಮಾನ್ಯವಾಗಿರುವ ಪರಿಸರದಲ್ಲಿ ಕೆಲವು ಮುಸ್ಲಿಮೇತರ ಜರ್ನಲಿಸ್ಟ್‌ಗಳು ಮತ್ತು ವಿಶ್ಲೇಷಕರು ಪ್ರಾಮಾಣಿಕತೆಯಿಂದಲೂ ನ್ಯಾಯನಿಷ್ಠೆಯಿಂದಲೂ ಬರೆಯುತ್ತಿದ್ದಾರೆ. ಸುಳ್ಳು ಮತ್ತು ಅನ್ಯಾಯದ ವಿರುದ್ಧ ಅವರ ಹೋರಾಟ ಅಭಿನಂದನೀಯವಾಗಿದೆ. ನಮ್ಮ ಬಹುಮಾನ್ಯ ಯು.ಕೆ. ಪ್ರಧಾನ ಮಂತ್ರಿಯವರು ತಮ್ಮ ಕೆಲವು ಭಾಷಣಗಳಲ್ಲಿ ಪವಿತ್ರ ಖುರ್‌ಆನ್ ವಚನಗಳನ್ನು ಉಲ್ಲೇಖಿಸಿ ಇಸ್ಲಾಮಿನ ವಿರುದ್ಧ ಮಾಡಲಾಗುವ ದೋಷಾರೋಪಗಳನ್ನು ಖಂಡಿಸಿದುದಕ್ಕೆ ನಾನು ಬಹಳ ಆಭಾರಿಯಾಗಿದ್ದೇನೆ.

ಜೂಲಿಯ ಐಯೋಫ್ (JULIA IOFFE) ಫಾರಿನ್ ಪಾಲಿಸಿ (FOREIGN POLICY) ಪತ್ರಿಕೆಯಲ್ಲಿ ಬರೆದ ಲೇಖನ ಸಹ ಪ್ರಶಂಸಾರ್ಹವಾಗಿದೆ. ಲೇಖಕಿ ಇಸ್ಲಾಮ್ ಸಹಿತ ವಿವಿಧ ಧರ್ಮಗಳ ಚರಿತ್ರೆಯನ್ನು ಅಧ್ಯಯನ ಮಾಡಿದ್ದರು. ಅವರು ಹೇಳುತ್ತಾರೆ: "ಯಾವುದೇ ಧರ್ಮ ಸಹಜವಾಗಿ ಹಿಂಸಾತ್ಮಕವಲ್ಲ. ಯಾವುದೇ ಧರ್ಮ ಸಹಜವಾಗಿ ಶಾಂತಿಭರಿತವೂ ಅಲ್ಲ. ಧರ್ಮ, ಅದು ಯಾವುದೇ ಆಗಿರಲಿ, ಅದು ವ್ಯಾಖ್ಯಾನದ ವಿಷಯವಾಗಿದೆ. ಆ ವ್ಯಾಖ್ಯಾನದಲ್ಲಿ ನಾವು ಸೌಂದರ್ಯವನ್ನು ಅಥವಾ ಕುರೂಪವನ್ನು ಕಾಣುತ್ತೇವೆ."

ನಾನು ಲೇಖಕಿಯ ನಿಷ್ಪಕ್ಷಪಾತಕರವಾದ ನಿಷ್ಕರ್ಷೆಯನ್ನು ಮೆಚ್ಚುತ್ತೇನೆ. ನಾವು ಇಂದಿನ ಅನಿಶ್ಚಿತ ಮತ್ತು ಅಭದ್ರ ಕಾಲವನ್ನು ದಾಟಿಹೋಗುವಾಗ ನಾನು ದೃಢವಾಗಿ ನಂಬುವುದೇನೆಂದರೆ ಒಬ್ಬರಿನ್ನೊಬ್ಬರನ್ನು ವಿಮರ್ಶಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಅದರ ಮೂಲಕ ಒಡಕು ಮತ್ತು ಹಗೆತನ ವರ್ಧಿಸುತ್ತದೆ. ಆದುದರಿಂದ ಈ ಸಮಯದ ಆವಶ್ಯಕತೆ ಏನೆಂದರೆ ನಮ್ಮನ್ನು ವಿಭಜಿಸುವ ಭೀತಿಯ ಗೋಡೆಗಳನ್ನು ಕೆಡವಿ ಹಾಕಬೇಕು. ನಮ್ಮನ್ನು ಬೇರ್ಪಡಿಸುವ ಗೋಡೆಗಳನ್ನು ನಿರ್ಮಿಸುವುದಕ್ಕೆ ಬದಲಾಗಿ ನಾವು ನಮ್ಮನ್ನು ಪರಸ್ಪರ ಸಮೀಪವಾಗುವಂತೆ ಮಾಡುವ ಸೇತುವೆಗಳನ್ನು ನಿರ್ಮಿಸಬೇಕು.

ವಿಷಾದಕರವಾದುದೇನೆಂದರೆ, ಇನ್ನಷ್ಟು ಹೆಚ್ಚು ಪಾಶವಿಕ ಭಯೋತ್ಪಾದಕ ಕೃತ್ಯಗಳ ಸಮಾಚಾರಗಳು ಬಾರದ ಯಾವ ದಿನವೂ ಬಾಕಿಯಾಗಿ ಇರುವುದಿಲ್ಲ. ಲೋಕವು ಮುಸ್ಲಿಮರಿಗೂ ಮುಸ್ಲಿಮೇತರರಿಗೂ ಸಮಾನವಾಗಿ ಅಪಾಯಕರ ಪ್ರದೇಶವಾಗಿ ಮುಂದುವರಿಯುತ್ತಿದೆ ಎಂಬುದು ನಿರಾಕರಿಸಲಾಗದು. ಆದುದರಿಂದ ನಾವೆಲ್ಲರೂ ಎಲ್ಲ ವಿಧ ದೌರ್ಜನ್ಯಗಳ, ಹಗೆತನಗಳ ವಿರುದ್ಧ ಎದ್ದು ನಿಲ್ಲಬೇಕು ಮತ್ತು ಲೋಕದಲ್ಲಿ ಶಾಂತಿಯನ್ನು ಬೆಳೆಸಲು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಬೇಕು. ನಾವು ಸತ್ಯವಾಗಿಯೂ ಶಾಂತಿಯನ್ನು ಬಯಸುವವರಾದರೆ ಲೋಕದ ರಾಜಕಾರಣಿಗಳು, ನಾಯಕರು, ಪಕ್ಷಗಳು ಮತ್ತು ಮೀಡಿಯಾ ವಿವೇಕದಿಂದಲೂ ಔಚಿತ್ಯಪೂರ್ಣವಾಗಿಯೂ ಕಾರ್ಯನಿರತರಾಗಬೇಕು.

ಪ್ರಕಟಿಸಲಾದ ಅನೇಕ ವರದಿಗಳು ಸೂಚಿಸುವುದೇನೆಂದರೆ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮ್ ತರುಣರು ಉಗ್ರಗಾಮಿಗಳಾದುದು ಏಕೆಂದರೆ ತಮ್ಮ ವಿಶ್ವಾಸಗಳನ್ನು ಪಶ್ಚಿಮ ದೇಶಗಳಲ್ಲಿ ಆಕ್ರಮಿಸಲಾಗುತ್ತಿದೆ ಮತ್ತು ಪರಿಹಾಸ ಮಾಡಲಾಗುತ್ತಿದೆ ಎಂಬ ಮಾನಸಿಕ ಬೇಗುದಿ ಅವರು ಅನುಭವಿಸಿದ್ದರು. ಈ ಕಾರಣವು ಯಾವುದೇ ರೀತಿಯಲ್ಲಿ ಅವರ ಅಪರಾಧವನ್ನು ಸಮರ್ಥಿಸುವಂತಹದ್ದಲ್ಲ ಮತ್ತು ಅವರು ತಮ್ಮ ಅಪರಾಧಗಳಿಗೆ ಹೊಣೆಗಾರರಾಗಿಯೇ ಇರುತ್ತಾರೆ. ಆದರೆ ಸದ್ಬುದ್ಧಿ ಆವಶ್ಯಪಡುವುದೇನೆಂದರೆ ಜ್ವಾಲೆಗೆ ಪೆಟ್ರೋಲ್ ಹೊಯ್ಯಬಾರದು. ಅದಕ್ಕೆ ಬದಲಾಗಿ ನಾವು ಪರಸ್ಪರ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು, ಅನ್ಯರ ನಂಬಿಕೆಗಳನ್ನು ಗೌರವಿಸಬೇಕು ಮತ್ತು ಸೌಹಾರ್ದದ ಸಮಾನ ಕ್ಷೇತ್ರವನ್ನು ಕಂಡುಕೊಳ್ಳಬೇಕು. ಈ ವಿಷಯಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಅಧ್ಯಾಯ 3 ವಚನ 65ರಲ್ಲಿ ಒಂದು ವಿವೇಕಭರಿತ ತತ್ವವನ್ನು ಮತ್ತು ಮೌಲ್ಯವನ್ನು ಹೀಗೆ ಪ್ರತಿಪಾದಿಸಿದೆ: "ನಮಗೂ ನಿಮಗೂ ಮಧ್ಯೆ ಒಪ್ಪಿಗೆಯಿರುವ ವಿಚಾರದೆಡೆಗೆ ಬನ್ನಿರಿ."

ಪವಿತ್ರ ಖುರ್‌ಆನ್ ಈ ವಚನದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಒಂದು ಸುವರ್ಣ ತತ್ವವನ್ನು ಪ್ರತಿಪಾದಿಸಿದೆ. ಜನರು ತಮ್ಮನ್ನು ಒಗ್ಗೂಡಿಸುವ ವಿಷಯಗಳ ಕಡೆಗೆ ಗಮನವನ್ನು ಕೇಂದ್ರೀಕರಿಸಬೇಕು ಎಂದು ಹೇಳಿದೆ. ಪ್ರಮುಖ ಧರ್ಮಗಳ ಬಗ್ಗೆ ಹೇಳುವುದಾದರೆ, ಅವುಗಳನ್ನು ಒಗ್ಗೂಡಿಸುವುದು ಸರ್ವಶಕ್ತನಾದ ದೇವನ ಬಗ್ಗೆ ಇರುವ ವಿಶ್ವಾಸವಾಗಿದೆ. ಆದರೆ ಇದರ ಅರ್ಥ, ಒಬ್ಬ ಧಾರ್ಮಿಕ ಮನುಷ್ಯನಿಗೆ ಧರ್ಮರಹಿತ ಮನುಷ್ಯನೊಂದಿಗೆ ಸಮಾನವಾಗಿರುವುದು ಯಾವುದೂ ಇಲ್ಲ ಎಂದಲ್ಲ.

ಶಾಂತಿಮಯ ವಿಭಿನ್ನ ಸಂಸ್ಕೃತಿಯ ಜನರ ಸಮಾಜ ಹೇಗೆ ರೂಪಿಸಬಹುದೆಂದು ನಮಗೆ ಪವಿತ್ರ ಖುರ್‌ಆನ್ ಕಲಿಸಿದೆ. ಈ ಸಮಾಜದಲ್ಲಿ ವಿವಿಧ ಧರ್ಮಾವಲಂಬಿಗಳು ಒಬ್ಬರಿನ್ನೊಬ್ಬರ ಸಮೀಪವಾಗಿದ್ದುಕೊಂಡು ಜಿವಿಸಬಹುದಾಗಿದೆ. ಮುಖ್ಯವಾಗಿ ಆವಶ್ಯಕವಾಗಿರುವುದು ಸಹಿಷ್ಣುತೆ ಮತ್ತು ಪರಸ್ಪರ ಗೌರವವಾಗಿದೆ. ಇದಕ್ಕೆ ಅನುಸಾರವಾಗಿ ಪವಿತ್ರ ಖುರ್‌ಆನ್ ಹೀಗೆ ಉಪದೇಶಿಸಿದೆ:

ಮುಸ್ಲಿಮರು ವಿಗ್ರಹಗಳ ವಿರುದ್ಧವಾಗಿ ಮತ್ತು ಅನ್ಯರ ಆರಾಧ್ಯ ಮೂರ್ತಿಗಳ ವಿರುದ್ಧ ಮಾತನಾಡಬಾರದು. ಏಕೆಂದರೆ ಅನ್ಯರು ಪ್ರತಿಭಟಿಸಿ ಅಲ್ಲಾಹನನ್ನು ನಿಂದಿಸುವರು. ಅನಂತರ ನಿರಂತರ ಪರಸ್ಪರ ನಿಂದನೆಯ ವಲಯ ಸ್ಥಾಪಿಸಲ್ಪಡುವುದು.

ಇಂದಿನ ಭಾಷಣದ ವಿಷಯ ನಿಮಗೆ ತಿಳಿದಿರುವಂತೆ "ಜಾಗತಿಕ ಸಂಘರ್ಷಗಳು ಮತ್ತು ನ್ಯಾಯ ಪಾಲನೆಯ ಆವಶ್ಯಕತೆ" ಎಂದಾಗಿದೆ. ನಾನು ಅನೇಕ ವರ್ಷಗಳಿಂದ ಹೇಳುತ್ತಿದ್ದೇನೆ – ಸಮಾಜದ ಪ್ರತಿಯೊಂದು ವಿಭಾಗದಲ್ಲಿ ನ್ಯಾಯರಾಹಿತ್ಯವು ವ್ಯಾಪಿಸಿದೆ. ಸಂಯುಕ್ತರಾಷ್ಟ್ರ ಸಂಘದಲ್ಲಿಯೂ ನ್ಯಾಯರಾಹಿತ್ಯ ಕಂಡುಬರುತ್ತದೆ. ಸಂಯುಕ್ತರಾಷ್ಟ್ರ ಸಂಘದೊಂದಿಗೆ ನಿಕಟ ಸಂಬಂಧ ಹೊಂದಿದವರು ಸಹ ಬಹಿರಂಗವಾಗಿ ಅದರ ನ್ಯೂನತೆಗಳ ಬಗ್ಗೆ, ಅದರ ಸ್ಥಾಪನೆಯ ಮುಖ್ಯ ಉದ್ದೇಶವಾಗಿರುವ ಅಂತರ್ರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಸ್ಥಾಪಿಸುವ ಬಗ್ಗೆ, ಅದರ ವಿಫಲತೆ ಬಗ್ಗೆ ಸಾಕ್ಷ್ಯ ನೀಡುತ್ತಿದ್ದಾರೆ. ಉದಾಹರಣೆ, "ನ್ಯೂಯೋರ್ಕ್ ಟೈಮ್ಸ್" ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಸಂಯುಕ್ತರಾಷ್ಟ್ರ ಸಂಘದ ಮಾಜಿ ಅಸಿಸ್ಟೆಂಟ್ ಸೆಕ್ರೆಟರಿ ಜನರಲ್ ಏಂಟನಿ ಬ್ಯಾನ್‌ಬರಿ ಹೇಳುತ್ತಾರೆ:

"ನಾನು ಸಂಯುಕ್ತರಾಷ್ಟ್ರ ಸಂಘವನ್ನು ಪ್ರೀತಿಸುತ್ತೇನೆ. ಆದರೆ ಅದು ಪರಾಭವ ಹೊಂದುತ್ತಿದೆ. ಅದರಲ್ಲಿ ಬಹಳ ಹೆಚ್ಚು ಅಧಿಕಾರಿ, ನೌಕರವರ್ಗವಿದ್ದರೂ ಅದರಿಂದ ಪ್ರಯೋಜನವಿಲ್ಲ. ಅನೇಕ ನಿರ್ಧಾರಗಳನ್ನು ರಾಜಕೀಯ ಕಾರಣದಿಂದ ಮಾಡಲಾಗುತ್ತಿದೆ – ಸಂಯುಕ್ತರಾಷ್ಟ್ರ ಸಂಘದ ಸ್ಥಾಪನೆಯ ಉದ್ದೇಶಲಕ್ಷ್ಯಗಳನ್ನು ಅನುಸರಿಸದೆ ಮತ್ತು ವಾಸ್ತವಿಕ ಸ್ಥಿತಿಯನ್ನು ಪರಿಶೀಲಿಸದೆ ನಿರ್ಧಾರಗಳನ್ನು ಮಾಡಲಾಗುತ್ತಿದೆ..... ಸಂಯುಕ್ತರಾಷ್ಟ್ರ ಸಂಘ ಮುಂದುವರಿದು ಪ್ರಗತಿಗಳಿಸಬೇಕಾದರೆ ಅದನ್ನು ಸಂಪೂರ್ಣವಾಗಿ ಪರಿವರ್ತಿಸಬೇಕು. ಬಾಹ್ಯ ತಜ್ಞರ ಸಮಿತಿ ಅದನ್ನು ಪರಿಶೋಧಿಸಿ ಅದರಲ್ಲಿ ಉಂಟುಮಾಡಬೇಕಾದ ಬದಲಾವಣೆಗಳನ್ನು ಸೂಚಿಸಬೇಕು."

ಕಳೆದ ಕೆಲವು ವರ್ಷಗಳ ಕಾಲದಲ್ಲಿ ಕೆಲವು ದೇಶಗಳ ಸರಕಾರಗಳು ಅನ್ಯಾಯಭರಿತ ಮತ್ತು ವಿವೇಕರಹಿತ ವಿದೇಶ ಧೋರಣೆಯ ತೀರ್ಮಾನಗಳನ್ನು ಕೈಗೊಂಡದ್ದು ಲೋಕದ ಶಾಂತಿ ಮತ್ತು ಸ್ಥಿರತೆಗೆ ನಕಾರಾತ್ಮಕ ಪ್ರಭಾವ ಬೀರಿದೆ. ಒಬ್ಬ ಪ್ರಸಿದ್ಧ ಅಂಕಣಗಾರರಾದ ಪೌಲ್ ಕ್ರಗ್‌ಮ್ಯಾನ್ (PAUL KRUGMAN) ಇತ್ತೀಚೆಗೆ ನ್ಯೂಯೋರ್ಕ್ ಟೈಮ್ಸ್‌ನಲ್ಲಿ 2003ರ ಇರಾಖ್ ಯುದ್ಧದ ಬಗ್ಗೆ ಹೀಗೆ ಬರೆದಿದ್ದಾರೆ:

"ಇರಾಖ್ ಯುದ್ಧ ಒಂದು ನಿಷ್ಕಳಂಕ ತಪ್ಪು ಕೃತ್ಯವಾಗಿರಲಿಲ್ಲ. ರಹಸ್ಯಾನ್ವೇಷಣೆ ವಿಭಾಗದ ವರದಿಯ ಮೇಲೆ ಆಧಾರವಾಗಿಟ್ಟುಕೊಂಡು ಮಾಡಿದ ಮತ್ತು ಅನಂತರ ಆ ವರದಿ ತಪ್ಪೆಂದು ಸಾಬೀತಾದುದೇನೂ ಅಲ್ಲ..... ಆಕ್ರಮಣಕ್ಕೆ ನೀಡಿದ ಸಮರ್ಥನೆಗಳು ನೆವನಗಳನ್ನಾಶ್ರಯಿಸಿಯಾಗಿದ್ದವು. ತಪ್ಪಾಗಿ ಸೃಜಿಸಲಾದ ನೆವನಗಳು ಅವುಗಳಾಗಿದ್ದುವು."

ನಾನು ಈ ಉದಾಹರಣೆಗಳನ್ನು ನೀಡಿದುದರ ಕಾರಣವೇನೆಂದರೆ ಲೋಕದಲ್ಲಿ ವರ್ಧಿಸುತ್ತಿರುವ ಸಂಘರ್ಷಗಳಿಗೆ ಏಕಮಾತ್ರ ಕಾರಣ ಮುಸ್ಲಿಮರು ಎಂದು ಹೇಳುವುದು ತಪ್ಪೆಂದು ಸ್ಪಷ್ಟಪಡಿಸಲಿಕ್ಕಾಗಿದೆ. ಇಂದಿನ ಕಾಲದ ಯುದ್ಧಗಳ ಮತ್ತು ಕ್ರೂರ ಕೃತ್ಯಗಳ ಕೇಂದ್ರ, ಕೆಲವು ಮುಸ್ಲಿಮ್ ದೇಶಗಳಾಗಿವೆ ಎಂಬುದು ನಿರಾಕರಿಸಲಾಗದು. ಆದರೆ ಉಳಿದ ಲೋಕ ಐಕ್ಯದಿಂದಿದೆ ಮತ್ತು ಅಸ್ತವ್ಯಸ್ತತೆಯಿಂದ ಮುಕ್ತವಾಗಿದೆ ಎಂದು ಸಹ ಹೇಳಲಾಗದು.

ಉದಾಹರಣೆಗೆ, ಅನೇಕ ವರದಿಗಳು ಮತ್ತು ಹೇಳಿಕೆಗಳು ಯುನೈಟೆಡ್ ಸ್ಟೇಟ್ಸ್ ಮತ್ತು ಚೈನದ ಮಧ್ಯೆ ವರ್ಧಿಸುತ್ತಿರುವ ಬಿಗುವಿನ ಪರಿಸ್ಥಿತಿ ಮತ್ತು ಅವರ ಮಧ್ಯೆ ಯುದ್ಧದ ಸಾಧ್ಯತೆಯನ್ನು ಸಹ ಸೂಚಿಸುತ್ತವೆ. ಇತ್ತೀಚೆಗೆ ವಿಶಾಲವಾಗಿ ಹರಡಲಾದ ಒಂದು ವರದಿಯಲ್ಲಿ ಪ್ರೆಸಿಡೆಂಟ್ ಟ್ರಂಪರ ಒಬ್ಬ ನಿಕಟ ಸಲಹೆಗಾರ ಯುನೈಟೆಡ್ ಸ್ಟೇಟ್ಸ್ ಮತ್ತು ಚೀನದ ಮಧ್ಯೆ ಮುಂದಿನ ಐದರಿಂದ ಹತ್ತು ವರ್ಷಗಳೊಳಗೆ ಯುದ್ಧವಾಗಲಿದೆ ಎಂಬುದರ ಬಗ್ಗೆ "ಸಂಶಯವಿಲ್ಲ" ಎಂದು ಹೇಳಿದ್ದಾನೆ. ಅದೇ ಪ್ರಕಾರ, ಜನವರಿ 2017ರಲ್ಲಿ ಸೌತ್ ಚೈನಾ ಮೋರ್ನಿಂಗ್ ಪೋಸ್ಟ್ (SOUTH CHINA MORNING POST)ನಲ್ಲಿ ಚೈನಾದ ಒಬ್ಬ ಸೇನಾಧಿಕಾರಿ ಹೀಗೆ ಹೇಳಿದುದಾಗಿ ವರದಿಯಾಗಿದೆ: ಯುನೈಟೆಡ್ ಸ್ಟೇಟ್ಸ್ ಮತ್ತು ಚೈನಾ ಮಧ್ಯೆ ಯುದ್ಧ ಕೇವಲ ಒಂದು ಘೋಷಣೆಯಲ್ಲ; ಅದೊಂದು ಪ್ರಯೋಗಿಕ ವಾಸ್ತವಿಕತೆ.

ಇದೇ ರೀತಿ ರಶ್ಯ ಮತ್ತು ಪಶ್ಚಿಮದ ದೇಶಗಳ ಮಧ್ಯೆ ಇರುವ ಪ್ರಕ್ಷುಬ್ಧ ಸ್ಥಿತಿ ಮುಂದುವರಿಯುತ್ತಾ ಇದ್ದು ಅದು ಎಂದಾದರೂ ವರ್ಧಿಸುವ ಅಪಾಯವಿದೆ. ಈ ಪ್ರಕ್ಷುಬ್ಧ ಸ್ಥಿತಿ ಮುಂದುವರಿಯುತ್ತಾ ಇರುವಾಗ ಜರ್ಮನಿಯ ಮಾಜಿ ವಿದೇಶಕಾರ್ಯ ಸಚಿವ ಫ್ರಾಂಕ್ ವಾಲ್ಟರ್ ಸ್ಟೆನ್‌ಮೇಯರ್, ರಶ್ಯದ ಗಡಿ ಪ್ರದೇಶದಲ್ಲಿ ನೇಟೋ ನಡೆಸುವ ಸೈನಿಕ ಕಸರತ್ತುಗಳ ವಿರುದ್ಧ ಕಳೆದ ಜೂನ್ ತಿಂಗಳಲ್ಲಿ ಹೇಳಿಕೆ ನೀಡಿದರು:

"ಬಲ ಪ್ರದರ್ಶಿಸಿ ಮತ್ತು ಯುದ್ಧಾಕಾಂಕ್ಷೆ ಪ್ರಕಟಿಸಿ ನಾವು ಪರಿಸ್ಥಿಯನ್ನು ಕೆಡಿಸಬಾರದು. ಮಿತ್ರ ಕೂಟದ ಪೂರ್ವದ ಗಡಿಯಲ್ಲಿ ಸಾಂಕೇತಿಕ ಟ್ಯಾಂಕ್‌ಗಳ ಪೆರೇಡ್‌ನಿಂದ ಭದ್ರತೆ ಲಭಿಸುವುದು ಎಂದು ಯಾರಾದರೂ ಯೋಚಿಸುವುದು ತಪ್ಪಾಗಿದೆ. ಒಂದು ಹಳೆಯ ಸಂಘರ್ಷವನ್ನು ಪುನರಾರಂಭಿಸಲು ಒಂದು ನೆಪವನ್ನು ಸೃಷ್ಟಿಸದಿರುವುದು ಉತ್ತಮವಾಗಿದೆ."

ಮಾಜಿ ವಿದೇಶಕಾರ್ಯ ಮಂತ್ರಿಯ ಮಾತುಗಳನ್ನು ನಾನು ಅನುಮೋದಿಸುತ್ತೇನೆ. ದೇಶಗಳು ಒಂದು ಇನ್ನೊಂದನ್ನು ಉದ್ರೇಕಿಸಬಾರದು ಮತ್ತು ಒಂದು ಇನ್ನೊಂದರ ಮೇಲೆ ಆಧಿಪತ್ಯ ಸ್ಥಾಪಿಸಲು ಪ್ರಯತ್ನಿಸಬಾರದು. ಅವರು ರಾಜಕೀಯ ಮುತ್ಸದ್ಧಿತನದಿಂದ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಬೇಕು ಮತ್ತು ಪರಸ್ಪರ ಬೆದರಿಕೆ ಒಡ್ಡಬಾರದು. ದುಃಖಕರವಾದುದೇನೆಂದರೆ, ನಾವು ವಿರುದ್ಧ ಅಭಿಪ್ರಾಯಗಳನ್ನು ಆಲಿಸಲು ಮತ್ತು ಸಹಿಸಲು ನಮಗಿರುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದೇವೆ. ಸಂಪರ್ಕ ಜಾಲಗಳನ್ನು ತೆರೆಯುವುದು ಮತ್ತು ಚರ್ಚೆಗಳನ್ನು ಪ್ರಾರಂಭಿಸುವುದು ಅತ್ಯಾವಶ್ಯಕವಾಗಿದೆ. ಹಾಗೆ ಮಾಡದಿದ್ದರೆ ಲೋಕದ ಅಸ್ವಸ್ಥತೆ ವರ್ಧಿಸುವುದು.

ನಾವು ಇನ್ನಷ್ಟು ಯುದ್ಧಗಳು ಮತ್ತು ರಕ್ತಪಾತಗಳ ಕಡೆಗೆ ಸಾಗುತ್ತಿದ್ದೇವೆ ಎಂಬುದನ್ನು ಸೂಚಿಸುವ ವಿವಿಧ ವರದಿಗಳನ್ನು ನಾನು ಉಲ್ಲೇಖಿಸಿದ್ದೇನೆ. ಅಂತರಾಷ್ಟ್ರೀಯ ಮಟ್ಟದಲ್ಲಿಯೂ ದೇಶಿಯ ಮಟ್ಟದಲ್ಲಿಯೂ ಪರಸ್ಪರ ಧ್ರುವೀಕರಣ ಮತ್ತು ನಿಷ್ಠುರವರ್ತನೆಯನ್ನು ಕಾಣುತ್ತಿದ್ದೇವೆ. ಒಬ್ಬರಿನ್ನೊಬ್ಬರ ಕಡೆಗೆ ಬೊಟ್ಟು ಮಾಡುವುದಕ್ಕೆ ಮತ್ತು ಪರಸ್ಪರ ದೋಷಾರೋಪಣೆ ಮಾಡುವುದಕ್ಕೆ ಬದಲಾಗಿ ನಾವು ಪರಿಹಾರ ಮಾರ್ಗಗಳನ್ನು ಕಂಡುಹಿಡಿಯಬೇಕಾಗಿದೆ. ಲೋಕದಲ್ಲಿ ಅಶಾಂತಿಯನ್ನು ನಿವಾರಿಸಲು ನನ್ನ ಅಭಿಪ್ರಾಯ ಪ್ರಕಾರ ಸಜ್ಜುಗೊಳಿಸಲಾದ ಒಂದು ಮಾರ್ಗವಿದೆ ಮತ್ತು ಅದು ತಕ್ಷಣ ಮಹತ್ತರ ಪ್ರಭಾವ ಬೀರುವುದಾಗಿದೆ. ಅದು ಅಂತರಾಷ್ಟ್ರೀಯ ಆಯುಧ ಮಾರಾಟವನ್ನು ತಡೆಗಟ್ಟುವುದು ಮತ್ತು ನಿಯಂತ್ರಿಸುವುದಾಗಿದೆ.

ನಮಗೆ ತಿಳಿದಿರುವ ಹಾಗೆ ಪಶ್ಚಿಮದ ದೇಶಗಳು ತಮ್ಮ ಆರ್ಥಿಕ ವ್ಯವಸ್ಥೆಗೆ ಇಂಧನ ನೀಡಲು ವಿದೇಶಗಳಿಗೆ ಆಯುಧಗಳನ್ನು ಮಾರಾಟ ಮಾಡುತ್ತಿವೆ. ಪರಸ್ಪರ ಹೋರಾಡುತ್ತಿರುವ ದೇಶಗಳಿಗೆ ಅವರು ಆಯುಧಗಳನ್ನು ಪೂರೈಕೆ ಮಾಡುತ್ತಿದ್ದಾರೆ. ಕೆಲವು ವಾರಗಳ ಹಿಂದೆ ಹೀಗೆ ವರದಿಯಾಗಿತ್ತು: ಅಮೇರಿಕದ ಹೊಸ ಆಡಳಿತೆ ಸೌದಿ ಅರೇಬಿಯಾದೊಂದಿಗೆ ಒಂದು ಹೊಸ ಒಪ್ಪಂದ ಮಾಡಿದೆ. ಆಧುನಿಕ ಆಯುಧಗಳನ್ನು ಮತ್ತು ಮಿಸೈಲ್‌ಗಳ ನಿರ್ಮಾಣ ತಂತ್ರಜ್ಞಾನವನ್ನು ಮಾರಾಟ ಮಾಡುವ ಒಪ್ಪಂದ ಮಾಡಲಾಗಿದೆ. ಇದಲ್ಲದೆ ಕಳೆದ ವರ್ಷ ಪ್ರಕಟವಾದ ಸಂಯುಕ್ತರಾಷ್ಟ್ರ ಸಂಘದ ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಆಯುಧಗಳ ಮಾರಾಟಕ್ಕೆ ಸಂಬಂಧಿಸಿ ರೂಢಿಯಲ್ಲಿರುವ ನಿಯಮಗಳು ಪಾಲಿಸಲ್ಪಡುವುದಿಲ್ಲ. ಹಲವಾರು ಕಂಪೆನಿಗಳು, ವ್ಯಕ್ತಿಗಳು ಮತ್ತು ದೇಶಗಳು ಲಿಬ್ಯಾ ದೇಶದ ವಿರುದ್ಧ ಹೊರಿಸಲಾದ ಆಯುಧ ನಿರ್ಬಂಧಗಳನ್ನು ಮೀರಿ ಅಲ್ಲಿರುವ ವಿವಿಧ ಗುಂಪುಗಳಿಗೆ ಆಯುಧ ಪೂರೈಕೆ ಮಾಡುತ್ತಾ ಇವೆ. ಕೆಲವು ಸೀಮಿತ ನಿಯಮಗಳು ಕೂಡ ಪಾಲಿಸಬೇಕಾದಲ್ಲಿ ಪಾಲಿಸಲ್ಪಡುವುದಿಲ್ಲ. ಪ್ರತಿಯೊಂದು ದೇಶದ ಮುಖ್ಯ ಆಸಕ್ತಿ ಇರಬೇಕಾದುದು ಮಾನವರೆಲ್ಲರ ಹಿತ ಮತ್ತು ಶಾಂತಿಯನ್ನು ಗಳಿಸುವುದಾಗಿದ್ದರೂ ದುಃಖಕರವಾದ ಸತ್ಯವೇನೆಂದರೆ ವಾಣಿಜ್ಯ ಹಿತಾಸಕ್ತಿಗಳಿಗೆ ಮತ್ತು ಸಂಪತ್ತಿನ ಗಳಿಕೆಗೆ ಅನಿವಾರ್ಯವಾಗಿ ಆದ್ಯತೆ ನೀಡಲಾಗುತ್ತಿದೆ. ಈ ಸಂಕುಚಿತ ಸ್ವಾರ್ಥಹಿತಾಸಕ್ತಿ ಬಗ್ಗೆ ಸಿ.ಎನ್.ಎನ್. ಟೆಲಿವಿಶನ್ ಆತಿಥೇಯ ಹೀಗೆ ಹೇಳಿದರು – ಆಯುಧಗಳ ಮಾರಾಟವನ್ನು ತಡೆಗಟ್ಟಿದರೆ ಅಮೇರಿಕದ ಆಯುಧ ನಿರ್ಮಾಣ ಕಂಪೆನಿಗಳಲ್ಲಿ ಜನರಿಗೆ ಕೆಲಸವಿಲ್ಲದಾಗುವುದು. ಅವರು ಹೀಗೆ ಸ್ಪಷ್ಟೀಕರಿಸಿದರು:

"ಅಲ್ಲಿ ಅನೇಕ ಉದ್ಯೋಗಗಳು ಕಳೆದುಹೋಗುವ ಅಪಾಯ ಶಂಕೆ ಇದೆ. ಈ ಆಯುಧ ಮಾರಾಟಗಾರರು ಯುದ್ಧ ವಿಮಾನಗಳನ್ನು ಮತ್ತು ಇತರ ಆಧುನಿಕ ಯುದ್ಧ ಸಾಮಗ್ರಿಗಳನ್ನು ಸೌದಿ ಅರೇಬಿಯಾ ದೇಶಕ್ಕೆ ಮಾರಾಟ ಮಾಡುವುದನ್ನು ನಿಲ್ಲಿಸುವುದಾದರೆ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಉದ್ಯೋಗಗಳು ನಷ್ಟವಾಗುವುವು ಮತ್ತು ಸರಕಾರಕ್ಕೆ ಆದಾಯ ಕಡಿಮೆಯಾಗುವುದು."

ಇದಲ್ಲದೆ ಕೆಲವು ಸಾರಿ ಹೀಗೆ ವಾದಿಸಲಾಗುತ್ತಿದೆ – ಆಯುಧ ಮಾರಾಟ ವಾಸ್ತವಿಕವಾಗಿ ಶಾಂತಿಯನ್ನು ಉತ್ತೇಜಿಸುವುದು ಮತ್ತು ಅದು ಯುದ್ಧವನ್ನು ತಡೆಗಟ್ಟುವುದು. ಆದರೆ ನನ್ನ ಅಭಿಪ್ರಾಯದಲ್ಲಿ ಈ ವಾದವು ವಿವೇಕರಹಿತವಾಗಿದೆ. ಅದು ಅತ್ಯಂತ ಅಪಾಯಕರ ಆಯುಧಗಳ ನಿರ್ಮಾಣವನ್ನು ಮತ್ತು ಮಾರಾಟವನ್ನು ಉತ್ತೇಜಿಸುವುದಾಗಿದೆ. ಇಂತಹ ಸಮರ್ಥನೆಗಳ ಕಾರಣದಿಂದ ಲೋಕವು ಎಂದೂ ಕೊನೆಗೊಳ್ಳದ ಆಯುಧ ಸ್ಪರ್ಧೆಯಲ್ಲಿ ಸಿಕ್ಕುಹಾಕಲ್ಪಟ್ಟಿದೆ. ಮಾನವರ ಹಿತಕ್ಕೋಸ್ಕರ ಸರಕಾರಗಳು ಆಯುಧ ವ್ಯಾಪಾರ ತಡೆಗಟ್ಟಿದರೆ ತಮ್ಮ ಆರ್ಥಿಕ ವ್ಯವಸ್ಥೆ ಕೆಟ್ಟು ಹೋಗುವುದು ಎಂಬ ಭಯವನ್ನು ನಿರ್ಲಕ್ಷಿಸಬೇಕು. ಅವರು ಅದಕ್ಕೆ ಬದಲಾಗಿ ತಾವು ತಮ್ಮ ಮುಂದಿನ ಪೀಳಿಗೆಗೆ ಎಂತಹ ಲೋಕವನ್ನು ಬಳುವಳಿಯಾಗಿ ನೀಡುತ್ತಿದ್ದೇವೆ ಎಂದು ಯೋಚಿಸಬೇಕು.

ಮುಸ್ಲಿಮ್ ದೇಶಗಳು ಬಳಸುವ ಆಯುಧಗಳು ಮಾತ್ರವಲ್ಲ ಭಯೋತ್ಪಾದಕ ಗುಂಪುಗಳಾದ ದಾಯೆಶ್ (IS) ಉಪಯೋಗಿಸುವ ಆಯುಧಗಳು ಸಹ ಪಶ್ಚಿಮ ಅಥವಾ ಪೂರ್ವ ಯುರೋಪಿನಲ್ಲಿ ನಿರ್ಮಿಸಲ್ಪಟ್ಟದ್ದಾಗಿರುತ್ತವೆ. ಆದುದರಿಂದ ಇಂತಹ ಆಯುಧ ಸರಬರಾಜು ವಿರುದ್ಧ ಕ್ರಮಕೈಗೊಳ್ಳುವುದು ಅತ್ಯಾವಶ್ಯಕವಾಗಿದೆ. ಇದೊಂದು ಕ್ರಮವನ್ನಾದರೂ ಕೈಗೊಂಡರೆ ಅದು ಅತ್ಯಂತ ಮಹತ್ವಪೂರ್ಣ ಪರಿಣಾಮವನ್ನು ಸ್ವಲ್ಪ ಕಾಲದೊಳಗೆ ಪ್ರಕಟಿಸುವುದು ಎಂದು ನಾನು ನಂಬುತ್ತೇನೆ. ಇದರ ಹೊರತು ಬೇರೆ ದಾರಿಯೇನೂ ಕಾಣಿಸುವುದಿಲ್ಲ.

ನಾನು ವಿಶದೀಕರಿಸಲು ಇಚ್ಛಿಸುವುದಿಲ್ಲ. ನಾನು ಲೇಖನಗಳಿಂದ ಉಲ್ಲೇಖಿಸಿದ ಭಾಗಗಳು ಸ್ವತಃ ಇನ್ನೊಂದು ಬೃಹತ್ ಗಾತ್ರದ ಯುದ್ಧ ಪ್ರಾರಂಭವಾಗುವ ಕಡೆಗೆ ಸೂಚಿಸುತ್ತವೆ. ಯಾವುದೇ ದೇಶ ಅಥವಾ ಜನರ ಗುಂಪು ತಾವು ಸುರಕ್ಷಿತರು ಎಂದು ಭಾವಿಸಬಾರದು. ಏಕೆಂದರೆ ಯುದ್ಧ ಪ್ರಾರಂಭವಾದರೆ ಅದು ಬೇಗನೆ ಮತ್ತು ಅನಿರೀಕ್ಷಿತವಾದ ರೀತಿಯಲ್ಲಿ ವ್ಯಾಪಿಸುತ್ತದೆ.

ನಾವು ದ್ವಿತೀಯ ಮಹಾಯುದ್ಧದ ಕಡೆಗೆ ವೀಕ್ಷಿಸಿದರೆ ಅನೇಕ ದೇಶಗಳು ಆ ಯುದ್ಧದಲ್ಲಿ ಭಾಗವಹಿಸಬಾರದೆಂದು ನಿರ್ಧಾರ ಮಾಡಿದ್ದುವು. ಆದರೆ ಅವರನ್ನು ಕ್ರಮೇಣ ಅದರ ಕಡೆಗೆ ಎಳೆದು ತರಲಾಯಿತು. ಮಿತ್ರಕೂಟಗಳು ಮತ್ತು ಬಣಗಳು ಧೋರಣೆಗಳನ್ನು ಬದಲಾಯಿಸುತ್ತಾ ಇದ್ದುವು. ಇಂದಿನ ಕಾಲದಲ್ಲಿ ಅನೇಕ ದೇಶಗಳು ಅಣುಬಾಂಬುಗಳನ್ನು ಹೊಂದಿವೆ. ಕೇವಲ ಒಂದು ಬಾಂಬನ್ನು ಮಾತ್ರ ಎಂದಾದರೂ ಬಳಸುವುದಾದರೆ ಅದರಿಂದುಂಟಾಗುವ ಪರಿಣಾಮಗಳು ಊಹಾತೀತವಾಗಿವೆ ಮತ್ತು ಆ ದುಷ್ಪರಿಣಾಮಗಳು ನಾವು ಗತಿಸಿದ ನಂತರ ಸಹ ಮುದುವರಿಯುವುವು. ದೀರ್ಘಕಾಲ ನಮ್ಮ ಮುಂದಿನ ಪೀಳಿಗೆಗಳಿಗೆ ಸಮೃದ್ಧಿಯ ಬಳುವಳಿಗಳನ್ನು ಬಿಟ್ಟು ಹೋಗುವುದಕ್ಕೆ ಬದಲಾಗಿ ನಾವು ದುಃಖ ಮತ್ತು ನಿರಾಶೆಯನ್ನು ಬಿಟ್ಟು ಹೋಗುವ ಅಪರಾಧಿಗಳಾಗುವೆವು. ಲೋಕಕ್ಕೆ ನಮ್ಮ ಕೊಡುಗೆ ಅಂಗವಿಕಲತೆಯೊಂದಿಗೆ ಮತ್ತು ಬುದ್ಧಿಮಾಂದ್ಯದೊಂದಿಗೆ ಜನಿಸುವ ಮಕ್ಕಳಾಗುವುವು. ಇಂತಹ ಮಕ್ಕಳ ತಂದೆ ತಾಯಂದಿರು ತಮ್ಮ ಮಕ್ಕಳನ್ನು ಪೋಷಿಸಲು ಜೀವದಿಂದಿರುವರೆಂಬುದಕ್ಕೆ ಕೂಡ ಖಾತರಿ ಏನಿದೆ?

ಆದುದರಿಂದ ನಾವು ಯಾವಾಗಲೂ ನೆನಪಿನಲ್ಲಿಡಬೇಕಾದುದೇನೆಂದರೆ ನಾವು ನಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಮಾತ್ರ ಹಿಂಬಾಲಿಸಲು ಹೇಗಾದರೂ ಪರಿಶ್ರಮಿಸುವುದಾದರೆ ಅನ್ಯರ ಹಕ್ಕುಗಳು ಅನ್ಯಾಯದಿಂದ ವಶಕ್ಕೊಳಪಡಿಸಲಾಗುವುದು ಮತ್ತು ಅದರ ಪರಿಣಾಮವಾಗಿ ಸಂಘರ್ಷಗಳು, ಯುದ್ಧಗಳು ಮತ್ತು ದುರ್ಗತಿ ಪ್ರಾರಂಭವಾಗುವುವು. ನಾವು ಯಾವ ಪ್ರಪಾತದ ಅಂಚಿನಲ್ಲಿ ನಿಂತಿದ್ದೇವೆ ಎಂದು ನಾವು ಯೋಚಿಸಿ ಮನವರಿಕೆ ಮಾಡಬೇಕು. ನಾವು ಯಾವ ಉದ್ದೇಶಕ್ಕೋಸ್ಕರ ಸೃಷ್ಟಿಸಲ್ಪಟ್ಟಿದ್ದೇವೆ ಎಂದು ತಿಳಿದುಕೊಳ್ಳಬೇಕು.

ನಾನು ನನ್ನ ಭಾಷಣದ ಪ್ರಾರಂಭದಲ್ಲಿ ಹೇಳಿದ ಹಾಗೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರು ಆಗಮಿಸಿದುದು ಮನುಷ್ಯರನ್ನು ಅವರ ಸೃಷ್ಟಿಕರ್ತನೊಂದಿಗೆ ಜೋಡಿಸಲಿಕ್ಕೋಸ್ಕರ ಮತ್ತು ಮಾನವರನ್ನು ಒಗ್ಗೂಡುವಂತೆ ಮಾಡಲಿಕ್ಕೋಸ್ಕರವಾಗಿದೆ. ತುಂಬಾ ತಡವಾಗುವ ಮೊದಲು ಮಾನವನು ತನ್ನ ಪ್ರಜ್ಞೆಯನ್ನು ಗಳಿಸಲಿ ಎಂದು ನಾನು ನನ್ನ ಹೃದಯದ ಆಳದಿಂದ ಪ್ರಾರ್ಥಿಸುತ್ತಿದ್ದೇನೆ.

ಲೋಕಕ್ಕೆ ನನ್ನ ಸಂದೇಶವೇನೆಂದರೆ, ಲೋಕ ಇಂದಿನ ಕಡೆಗೆ ನೋಡಿದರೆ ಸಾಕಾಗಲಾರದು; ಅದು ನಾಳಿನ ಕಡೆಗೆಯೂ ನೋಡಬೇಕು. ನಾವು ನಮ್ಮ ಮಕ್ಕಳಿಗೆ ಭರವಸೆ ಮತ್ತು ಭಾಗ್ಯದ ಬಳುವಳಿ ಬಿಟ್ಟು ಹೋಗೋಣ. ನಮ್ಮ ಪಾಪಗಳ ದಾರುಣ ಪರಿಣಾಮಗಳನ್ನು ಅವರಿಗೆ ಬಳುವಳಿಯಾಗಿ ಬಿಟ್ಟುಹೋಗಬಾರದು.

ಕೊನೆಯದಾಗಿ, ಲೋಕದ ಜನರಿಗೆ ಸರ್ವಶಕ್ತನಾದ ದೇವನು ವಿವೇಕ ದಯಪಾಲಿಸಲಿ ಎಂದೂ ನಮ್ಮ ಮೇಲೆ ತೇಲಾಡುತ್ತಿರುವ ದಟ್ಟವಾದ ಮೋಡಗಳು ನೀಗಿಸಲ್ಪಟ್ಟು ನಾವು ಪ್ರಕಾಶ ಮಾನವಾದ ಸಮೃದ್ಧಿಯ ಭವಿಷ್ಯವನ್ನು ಕಾಣುವಂತಾಗಲಿ ಎಂದೂ ಪ್ರಾರ್ಥಿಸುತ್ತೇನೆ.

ಅಲ್ಲಾಹನು ಮಾನವರೆಲ್ಲರ ಮೇಲೆ ದಯೆದೋರಲಿ – ಆಮೀನ್. ಎಲ್ಲ ಅತಿಥಿಗಳಿಗೆ ಧನ್ಯವಾದಗಳು, ಬಹಳ ಧನ್ಯವಾದಗಳು.

(**Review of Religions – May 2017 ಸಂಚಿಕೆಯಿಂದ. ಅನುವಾದಕ: ಯಮ್. ಉಬೈದುಲ್ಲಾ**).


**READ AHMADIYYA PERIODICALS**

**THE REVIEW OF RELIGIONS**
English Monthly
Annual Subcription : Rs. 550/
Contact : The Editor
The Review of Religions
Mohalla Ahmadiyya
QADIAN - 143516 (Punjab)
Telephone : +91 1872 500970

**BADAR** - Urdu Weekly
Annual Subcription : Rs. 550/-
Contact : The Manager
The Badar Weekly
Mohalla Ahmadiyya.
QADIAN - 143516 (Punjab)
Telephone : (0091) 94170 20616

# ನೈಜ ಇಸ್ಲಾಮನ್ನು ಸ್ವಾಧೀನಪಡಿಸಿಕೊಳ್ಳುವ ಹುಡುಕಾಟ




**ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಯುನೈಟೆಡ್ ಕಿಂಗ್‌ಡಮ್ಮಿನ ವಾರ್ಷಿಕ ಸಮ್ಮೇಳನದಲ್ಲಿ 2017 ಜುಲೈ ದಿನಾಂಕ 29ರಂದು ಮಾಡಿದ ಸಮಾರೋಪ ಭಾಷಣ.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಹೀಗೆ ಹೇಳಿದರು:

ಮುಸ್ಲಿಮೇತರರನ್ನು ಆಹ್ವಾನಿಸಲಾದ ಸಭೆಗಳಲ್ಲಿ ನಾನು ಇಸ್ಲಾಮ್ ಧರ್ಮದ ಸುಂದರವಾದ ಶಾಂತಿ ಪ್ರತಿಪಾದಕ ಉಪದೇಶಗಳನ್ನು ವಿವರಿಸಿದಾಗಲೆಲ್ಲ ಅನೇಕ ಜನರು ಆಶ್ಚರ್ಯಚಕಿತರಾಗಿ ಕೇಳುತ್ತಾರೆ: “ಇದು ವಾಸ್ತವಿಕವಾಗಿ ಇಸ್ಲಾಮ್ ಧರ್ಮದ ಉಪದೇಶವಾಗಿದೆಯೋ?” ಈ ಜನರ ಈ ಪ್ರತಿಕ್ರಿಯೆ ಮತ್ತು ಪ್ರಶ್ನೆ ಕೇವಲ ಒಂದು ನಿರ್ದಿಷ್ಟ ದೇಶಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಎಲ್ಲ ದೇಶಗಳಲ್ಲಿಯೂ ವ್ಯತ್ಯಾಸವಿಲ್ಲದೆ ಜನರು ಈ ರೀತಿ ಪ್ರತಿಕ್ರಿಯೆ ಪ್ರಕಟಿಸುತ್ತಾರೆ. ಇಂದಿನ ಕಾಲದಲ್ಲಿ ವಿವಿಧ ದೇಶಗಳ ಪ್ರಾದೇಶಿಕ ಅಹ್ಮದಿಯಾ ಘಟಕಗಳು ತಮ್ಮ ಕಾರ್ಯಕ್ಷೇತ್ರದೊಳಗೆ ಇಸ್ಲಾಮ್ ಧರ್ಮದ ಶಾಂತಿಮಯ ಉಪದೇಶಗಳನ್ನೊಳಗೊಂಡ ಕರಪತ್ರಗಳನ್ನು ಹಂಚುತ್ತಿವೆ. ಪ್ರತಿಯೊಂದು ದೇಶದಲ್ಲಿ ಇಂತಹ ಕರಪತ್ರಗಳನ್ನು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಹಂಚಲಾಗುತ್ತಿದೆ. ಅಂತಹ ಸಂದರ್ಭದಲ್ಲಿ ಅದರ ಬಗ್ಗೆ ತಿಳಿದುಕೊಂಡ ಪ್ರತಿಯೊಬ್ಬನು ಆಶ್ಚರ್ಯಗೊಂಡು ಹೇಳುತ್ತಾನೆ: “ನೀವು ಇಸ್ಲಾಮನ್ನು ಹೇಗೆ ಚಿತ್ರಿಸುತ್ತಿರುವಿರೋ ಅದಕ್ಕೆ ಸಂಪೂರ್ಣ ವಿರುದ್ಧವಾಗಿ ಮಾಧ್ಯಮಗಳು ಇಸ್ಲಾಮ್ ಬಗ್ಗೆ ಚಿತ್ರಣ ನೀಡುತ್ತವೆ.”

ಕೆಲವು ತೀವ್ರವಾದಿ ಗುಂಪುಗಳು ಮಾಡುವ ಕೃತ್ಯಗಳನ್ನು ಬಳಸಿಕೊಂಡು ಮಾಧ್ಯಮಗಳು ಲೋಕದಾದ್ಯಂತ ಇಸ್ಲಾಮನ್ನು ಅಪಮಾನಕ್ಕೆ ಗುರಿಪಡಿಸುತ್ತಿವೆ. ಇದರ ಪರಿಣಾಮವಾಗಿ ಆಫ್ರಿಕದ ದೂರ ಪ್ರದೇಶಗಳಿಂದ ಮೊದಲುಗೊಂಡು ಅಮೇರಿಕದ ತನಕ ವಾಸಿಸುವ ಜನರು ನಾನು ಮೇಲೆ ಪ್ರಸ್ತಾಪಿಸಿದ ರೀತಿಯಲ್ಲಿ ಅಭಿಪ್ರಾಯಗಳನ್ನು ಪ್ರಕಟಿಸುತ್ತಿದ್ದಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಮುಸ್ಲಿಮೇತರ ಲೋಕದ ಬಹುತೇಕ ಜನರು, ದಕ್ಷಿಣ ಅಮೇರಿಕದ ದ್ವೀಪಗಳಲ್ಲಿ ವಾಸಿಸುವವರು, ಆಸ್ಟ್ರೇಲಿಯಾ, ಯುರೋಪು ಮತ್ತು ಜಪಾನಿನ ಜನರು ಸಹ ಲೋಕದ ಅಸ್ತವ್ಯಸ್ತತೆಗೆ, ಶಾಂತಿ ರಹಿತ ಸ್ಥಿತಿಗೆ ಮುಸ್ಲಿಮರು ಮತ್ತು ಇಸ್ಲಾಮ್ ಧರ್ಮ ಕಾರಣವೆಂದು ದೂಷಿಸುತ್ತಿದ್ದಾರೆ. ಆದರೆ ವಾಸ್ತವಿಕವಾಗಿ ಇಸ್ಲಾಮ್ ಧರ್ಮ ತತ್ವಗಳು ಲೋಕದಲ್ಲಿ ವಾಸ್ತವಿಕ ಶಾಂತಿ ಸ್ಥಾಪನೆಗೆ ಮತ್ತು ಭದ್ರತೆಗೆ ಖಾತರಿ ನೀಡುತ್ತದೆ. ಇಸ್ಲಾಮ್ ಎಂಬ ಪದದಲ್ಲಿ ಭದ್ರತೆ ಮತ್ತು ಶಾಂತಿಯ ಸಂದೇಶವಿದೆ. ಅದು ಪ್ರತಿಯೊಬ್ಬನಿಗೆ ಯಾವುದೇ ತಾರತಮ್ಯವಿಲ್ಲದೆ ಶಾಂತಿಯನ್ನೂ ಪ್ರಶಾಂತತೆಯನ್ನೂ ನೀಡುತ್ತದೆ. ಇಸ್ಲಾಮ್ ಧರ್ಮತತ್ವಗಳು ಹೇಗಿವೆ ಎಂದರೆ ಅವು ಎಲ್ಲ ವಿಧ ಕೀಳರಿಮೆಯನ್ನೂ ಮೇಲರಿಮೆಯನ್ನೂ ಎಲ್ಲ ವಿಧ ತಾರತಮ್ಯ ಭಾವನೆಯನ್ನೂ ನಿವಾರಿಸಿ ಎಲ್ಲ ಮಾನವರು ಸಮಾನರೆಂದು ಘೋಷಿಸುತ್ತದೆ. ಪವಿತ್ರ ಪೈಗಂಬರರು[ಸ] ಘೋಷಿಸಿದರು: ಒಬ್ಬ ಅರಬಿ ಅರಬಿಯೇತರನಿಗಿಂತ ಶ್ರೇಷ್ಠನಲ್ಲ. ಅರಬಿಯೇತರನು ಅರಬಿಗಿಂತಲೂ ಶ್ರೇಷ್ಠನಲ್ಲ. ಬಿಳಿಯನು ಕಪ್ಪಗೆ ಇರುವವನಿಗಿಂತ ಶ್ರೇಷ್ಠನಲ್ಲ. ಕಪ್ಪು ವ್ಯಕ್ತಿ ಬಿಳಿಯನಿಗಿಂತ ಶ್ರೇಷ್ಠನಲ್ಲ.

ಮಾನವರೆಂಬ ನೆಲೆಯಲ್ಲಿ ಎಲ್ಲ ಮನುಷ್ಯರು ಸಮಾನರು. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಪೈಗಂಬರರಿಗೆ[ಸ],

"ಮಾನವರೆಲ್ಲರಿಗೂ ಕಾರುಣ್ಯವಾಗಿರುವವರು" ಎಂದು ಬಿರುದು ನೀಡಿ ಅವರನ್ನು ಶಾಂತಿ ಮತ್ತು ಭದ್ರತೆಗೆ ಖಾತರಿ ನೀಡುವವರನ್ನಾಗಿ ಮಾಡಿರುವನು. ಸಕಲ ಲೋಕಗಳಿಗೆ ಕಾರುಣ್ಯವಾಗಿ ಕಳುಹಿಸಲ್ಪಟ್ಟ ವ್ಯಕ್ತಿ ಲೋಕದ ಶಾಂತಿ ಮತ್ತು ಭದ್ರತೆ ನಾಶ ಮಾಡುವವನಾಗುವುದು ಸಾಧ್ಯವಿಲ್ಲ. ಮುಖ್ಯವಾಗಿ, ಇಸ್ಲಾಮ್ ಸಕಲ ಲೋಕಗಳ ಪ್ರಭುವಾದ ದೇವನನ್ನು ನಂಬುತ್ತದೆ. ಅವನು ವಿಶ್ವದಲ್ಲಿರುವ ಎಲ್ಲವುಗಳ ಸೃಷ್ಟಿಕರ್ತನೂ ಪರಿಪಾಲಕನೂ ಆಗಿದ್ದಾನೆ. ಅವನು ಎಲ್ಲ ಧರ್ಮಗಳ ಅನುಯಾಯಿಗಳ ಪ್ರಭುವೂ ಆಗಿದ್ದಾನೆ. ವಾಸ್ತವಿಕವಾಗಿ, ದೇವನು ತನ್ನನ್ನು ನಂಬದವರ ಲೌಕಿಕ ಆವಶ್ಯಕತೆಗಳನ್ನು ಸಹ ನೆರವೇರಿಸಿ ಕೊಡುತ್ತಾನೆ ಮತ್ತು ಅವರಿಗೆ ಶಾಂತಿಯನ್ನು ಪ್ರದಾನ ಮಾಡುತ್ತಾನೆ. ಇಸ್ಲಾಮ್ ಧರ್ಮ ಪ್ರತಿಪಾದಿಸುವ ದೇವನು ಹೇಳುವುದೇನೆಂದರೆ, ಪ್ರತಿಯೊಂದು ಧರ್ಮದ ಮೂಲತತ್ವಗಳು ವಾಸ್ತವಿಕವಾಗಿ ಏಕದೇವನ ಕಡೆಗೆ ಸೂಚಿಸುತ್ತವೆ. ಅವನು ಹೇಳುತ್ತಾನೆ: "ನಾನು ಎಲ್ಲ ವಸ್ತುಗಳನ್ನು ಒದಗಿಸಿ ಕೊಡುವವನಾಗಿದ್ದೇನೆ." ವಿವಿಧ ಧರ್ಮಗಳು ಏಕದೇವನಿಗೆ ವಿವಿಧ ಹೆಸರುಗಳನ್ನು ನೀಡಿವೆ. ಆ ಹೆಸರುಗಳು ಪ್ರತಿಯೊಂದು ಧರ್ಮದ ಪ್ರವಾದಿ ಬಳಸುತ್ತಿದ್ದ ಭಾಷೆಗಳಿಗೆ ಅನುಸಾರವಾಗಿವೆ. ಇದರ ಪರಿಣಾಮವಾಗಿ, ತಮ್ಮ ದೇವನು ಅನ್ಯಧರ್ಮಗಳ ದೇವನಿಗಿಂತ ಬೇರೆ ಎಂದು ಕೆಲವರು ನಂಬುತ್ತಾರೆ. ಈ ಕಾರಣದಿಂದ ವಿವಾದಗಳು ತಲೆದೋರಿವೆ. ಇಸ್ಲಾಮ್ ಸ್ಪಷ್ಟವಾಗಿ ಹೇಳಿದೆ – ಧರ್ಮದ ಹೆಸರಿನಲ್ಲಿ ಜಗಳ ಮಾಡಬಾರದು ಮತ್ತು ಒಬ್ಬರಿನ್ನೊಬ್ಬರ ಕತ್ತನ್ನು ಕೊಯ್ಯಬಾರದೆಂದು. ವಿಶ್ವದಲ್ಲಿರುವುದು ಒಬ್ಬನೇ ಒಬ್ಬ ದೇವನಾಗಿದ್ದಾನೆ. ಅವನು ಯಹೂದಿಯರ ಮತ್ತು ಕ್ರೈಸ್ತರ ದೇವನಾಗಿರುವ ಹಾಗೆಯೇ ಹಿಂದುಗಳ ಮತ್ತು ಮುಸ್ಲಿಮರ ದೇವನೂ ಇತರ ಎಲ್ಲ ಧರ್ಮಗಳ ಅನುಯಾಯಿಗಳ ದೇವನೂ ಆಗಿದ್ದಾನೆ. ಅವನು ಪ್ರತಿಯೊಬ್ಬ ಮನುಷ್ಯನ ದೇವನಾಗಿದ್ದಾನೆ.

ಸರ್ವಸೃಷ್ಟಿಗಳು ದೇವನಿಗೆ ಸೇರಿವೆ. ಅವನು ತನ್ನ ಎಲ್ಲ ಸೃಷ್ಟಿಗಳ ಪರಿಪಾಲಕನಾಗಿದ್ದಾನೆ. ಅವನ ಕಾರುಣ್ಯ ಎಲ್ಲವನ್ನೂ ವ್ಯಾಪಿಸಿವೆ. ದೇವನ ಕಾರುಣ್ಯ ಎಲ್ಲವನ್ನೂ ಆವರಿಸಿರುವುದಾದರೆ, ಎಲ್ಲ ಸೃಷ್ಟಿಗಳು ಅವನಿಗೆ ಸೇರಿದವುಗಳಾಗಿದ್ದರೆ, ಅವನು ಎಲ್ಲರ ಪರಿಪಾಲಕನಾಗಿದ್ದರೆ ಮನುಷ್ಯರು ತಮ್ಮ ಧರ್ಮಗಳ ವ್ಯತ್ಯಾಸಗಳ ಕಾರಣದಿಂದ ಅಥವಾ ಬೇರೆ ಕಾರಣಗಳಿಂದ ಲೋಕದಲ್ಲಿ ಅಸ್ತವ್ಯಸ್ತತೆಯನ್ನು ಹುಟ್ಟಿಸುವುದಾದರೂ ಏಕೆ?

ಈ ವಿಷಯಕ್ಕೆ ಸಂಬಂಧಿಸಿ ಈ ಕಾಲದಲ್ಲಿ ವಾಗ್ದತ್ತ ಮಸೀಹರು ಮಾರ್ಗದರ್ಶನ ನೀಡಿದ್ದಾರೆ. ಅವರು ಹೇಳುತ್ತಾರೆ: ಅಸ್ತವ್ಯಸ್ತತೆಯ ಅಸ್ತಿಭಾರ ಹಾಕಲ್ಪಡುವುದು ಜನರು ಅಥವಾ ಜನಾಂಗಗಳು ಮೇಲರಿಮೆ ಮನೋಭಾವ ಹೊಂದುವಾಗ ಆಗಿದೆ. ಅವರು ಭಾವಿಸುತ್ತಾರೆ– "ದೇವನು ನಮಗೆ ಮಾತ್ರ ಸೇರಿದವನು. ಅವನಿಗೆ ಅನ್ಯ ಜನಾಂಗದವರೊಂದಿಗೆ ಮತ್ತು ಅನ್ಯ ಧರ್ಮದವರೊಂದಿಗೆ ಯಾವ ಸಂಬಂಧವೂ ಇಲ್ಲ." ಆದರೆ ಇಸ್ಲಾಮ್ ವಾದಿಸುವುದೇನೆಂದರೆ, ನಮ್ಮ ದೇವನು ರಬ್ಬುಲ್ ಆಲಮೀನ್ – ಸಕಲ ಲೋಕಗಳ ಪ್ರಭು ಎಂದು. ಇಸ್ಲಾಮ್ ಈ ವಾಸ್ತವಿಕತೆ ಕಡೆಗೆ ನಮ್ಮ ಗಮನ ಹರಿಸಿ ಹೇಳುತ್ತಿದೆ: ನಮ್ಮ ಪೈಕಿ ಪ್ರತಿಯೊಬ್ಬನ ದೇವನು ಒಬ್ಬನೇ. ಅವನು ನಮ್ಮೆಲ್ಲರ ಸೃಷ್ಟಿಕರ್ತನೂ ಪರಿಪಾಲಕನೂ ಆಗಿದ್ದಾನೆ. ಆದುದರಿಂದ ನಾವೆಲ್ಲರೂ ಪರಸ್ಪರ ಶಾಂತಿ ಮತ್ತು ಸೌಹಾರ್ದದಿಂದ ಜೀವಿಸಬೇಕು.

ವಾಗ್ದತ್ತ ಮಸೀಹರು ಒಂದು ಕಡೆ ಹೀಗೆ ಹೇಳಿದ್ದಾರೆ: "ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನನ್ನು, ಅಲ್‌ಹಮ್‌ದುಲಿಲ್ಲಾಹಿ ರಬ್ಬಿಲ್ ಆಲಮೀನ್, ಎಂದರೆ ಸರ್ವಲೋಕಗಳ ಸೃಷ್ಟಿಕರ್ತನೂ ರಕ್ಷಕನೂ ಆದ ಅಲ್ಲಾಹನು ಮಾತ್ರ ಎಲ್ಲ ಸ್ತುತಿಗಳಿಗೆ ಅರ್ಹನು ಎಂಬ ವಾಕ್ಯದಿಂದ ಪ್ರಾರಂಭಿಸಿರುವನು. ಈ ವಚನದಲ್ಲಿ ಬಳಸಿದ ಆಲಮೀನ್ (ಸರ್ವಲೋಕಗಳು) ಎಂಬ ಪದದಲ್ಲಿ ಎಲ್ಲ ಜನಾಂಗದವರೂ ಎಲ್ಲ ಕಾಲದವರೂ ಎಲ್ಲ ರಾಜ್ಯದವರೂ ಒಳಗೊಂಡಿರುತ್ತಾರೆ. ದೇವಾನುಗ್ರಹಗಳು ತಮಗೆ ಮಾತ್ರ ಲಭಿಸಿರುವುದೆಂದು ಅಭಿಪ್ರಾಯಪಟ್ಟು ಇತರ ಜನಾಂಗದವರು ಮನುಷ್ಯ ವರ್ಗದವರಲ್ಲವೆಂಬ ರೀತಿಯಲ್ಲಿಯೂ ದೇವನು ಅವರನ್ನು ಸೃಷ್ಟಿಸಿದ ನಂತರ ಅವರನ್ನು ಮರೆತು ಬಿಟ್ಟಿರುವನೆಂದೋ ಕೈ ಬಿಟ್ಟಿರುವನೆಂದೋ ಅವರು ಅವನ ಸೃಷ್ಟಿಗಳೇ ಅಲ್ಲವೆಂಬ ರೀತಿಯಲ್ಲೂ ಭಾವಿಸಿ ದೇವನ ಸರ್ವ ವ್ಯಾಪಕವಾದ ಅನುಗ್ರಹವನ್ನು ಇತರರಿಗೆ ಅಲ್ಲಗಳೆಯುವ ಎಲ್ಲ ಜಾತಿಯವರಿಗೂ ಪವಿತ್ರ ಖುರ್‌ಆನಿನ ಈ ವಾಕ್ಯವು ಒಂದು ಖಂಡನೆಯಾಗಿದೆ." (ಪೈಗಾಮೆ ಸುಲ್‌ಹ್, ಮೆಸ್ಸೇಜ್ ಆಫ್ ಪೀಸ್, ಮೈತ್ರಿ ಸಂದೇಶ).

ಮೇಲೆ ವಿವರಿಸಿದ ಮನೋಭಾವ ಹೊಂದಿದ ಜನರೇ ಲೋಕದಲ್ಲಿ ಅಸ್ತವ್ಯಸ್ತತೆಯನ್ನೂ ಗಲಭೆ ಗೊಂದಲಗಳನ್ನೂ ಸೃಷ್ಟಿಸಿ ಲೋಕದ ಶಾಂತಿಯನ್ನು ತಮ್ಮ ಮೇಲರಿಮೆಯ ಮನೋಭಾವದಿಂದ ಕೆಡಿಸುತ್ತಿದ್ದಾರೆ.

ಇತ್ತೀಚೆಗೆ ಅಮೇರಿಕದ ಅಧ್ಯಕ್ಷರ ಆಪ್ತ ಸ್ನೇಹಿತನಾದ ಒಬ್ಬ ರಾಜಕಾರಣಿ ಸ್ಪಷ್ಟವಾಗಿ ದೂರದರ್ಶನದಲ್ಲಿ ಹೇಳಿರುವನು – ಬಿಳಿ ಜನಾಂಗ ಇತರ ಎಲ್ಲ ಜನಾಂಗಗಳಿಗಿಂತ ಶ್ರೇಷ್ಠವೆಂದೂ ಇತರ ಪ್ರತಿಯೊಂದು ಜನಾಂಗದ ಮೇಲೆ ತಾವು ಇಚ್ಛಿಸುವ ರೀತಿಯಲ್ಲಿ ಅಧಿಕಾರ ಚಲಾಯಿಸುವುದು ತಮ್ಮ ಜನ್ಮಸಿದ್ಧ ಹಕ್ಕೆಂದೂ. ಕಪ್ಪು ವರ್ಣದವರು ಮತ್ತು ಆಫ್ರಿಕನರು ಅತ್ಯಂತ ಕೀಳು ವರ್ಗದವರೆಂದು ಸಹ ಅವನು ಹೇಳಿದನು. ಅವರ ಚರ್ಮದ ಕಪ್ಪು ವರ್ಣದ ಕಾರಣದಿಂದ ಅವರಿಗೆ ಇತರ ಜನರಿಗಿರುವಂತಹ ಬುದ್ಧಿಶಕ್ತಿ ಕೂಡ ಹೊಂದುವುದು ಅಸಾಧ್ಯವೆಂದು ಸಹ ಅವನು ಹೇಳಿದನು. ಅವನ ದುರಹಂಕಾರ ಅವನನ್ನು ಎಷ್ಟು ಭಂಡತನದಿಂದ ವರ್ತಿಸುವಂತೆ ಮಾಡಿದೆ ಎಂದರೆ ಅವನು

ತನ್ನನ್ನು ಸರ್ವಶಕ್ತನಾದ ದೇವನಿಗೆ ಸಮಾನವಾಗಿ ಮಾಡಿಕೊಂಡಿದ್ದಾನೆ. ಇಸ್ಲಾಮನ್ನು ಅಪಮಾನಿಸಲು ಪ್ರಯತ್ನಿಸುವವರು ಚಿಂತಿಸಬೇಕು – ಮೇಲೆ ಪ್ರಸ್ತಾಪಿಸಿದಂತಹ ಹೇಳಿಕೆಗಳು ಶಾಂತಿ ಸ್ಥಾಪಿಸಲು ಎಂದಾದರೂ ಸಹಕಾರಿಯಾಗಲು ಸಾಧ್ಯವೇ ಎಂದು. ದುರಹಂಕಾರಿಗಳಾದ ಜನರ ಹೃದಯಗಳಲ್ಲಿರುವುದನ್ನು ಮೇಲೆ ಪ್ರಸ್ತಾಪಿಸಿದ ಹೇಳಿಕೆ ಪ್ರತಿಧ್ವನಿಸುತ್ತದೆ. ಇಂತಹ ಜನರು ನ್ಯಾಯ ಪಾಲನೆ, ಶಾಂತಿ ಮತ್ತು ಸೌಹಾರ್ದ ಸ್ಥಾಪನೆ ಬಗ್ಗೆ ಮೇಲಿಂದ ಮೇಲೆ ಹೇಳಿಕೆ ನೀಡುತ್ತಾ ಇದ್ದರೂ ಅವರ ಉದ್ದೇಶಲಕ್ಷ್ಯಗಳೂ ಅವರ ಕಾರ್ಯಕ್ರಮಗಳ ಸೂಚಿಯೂ ಮೇಲೆ ವಿವರಿಸಿದವುಗಳೇ ಆಗಿವೆ.

ಅಲ್‌ಹಮ್‌ದುಲಿಲ್ಲಾಹಿ ರಬ್ಬಿಲ್ ಆಲಮೀನ್ ಎಂಬ ಪವಿತ್ರ ವಚನದ ಬಗ್ಗೆ ವಿವರಿಸುತ್ತಾ ವಾಗ್ದತ್ತ ಮಸೀಹರು ಹೇಳುತ್ತಾರೆ: "ದೇವನು ಸರ್ವಲೋಕಗಳ, ಸರ್ವ ಜನಾಂಗಗಳ ಪ್ರಭು ಎಂಬ ಅರ್ಥವನ್ನೊಳಗೊಂಡ ವಚನದಿಂದ ಪವಿತ್ರ ಖುರ್‌ಆನ್ ಪ್ರಾರಂಭಿಸಲ್ಪಟ್ಟಿದೆ. ದೇವನು ಯಾವುದಾದರೊಂದು ನಿರ್ದಿಷ್ಟ ಜನಾಂಗದವರಲ್ಲಿ ಅಥವಾ ನಿರ್ದಿಷ್ಟ ದೇಶದಲ್ಲಿ ಮಾತ್ರ ಪ್ರವಾದಿಗಳನ್ನು ನಿಯೋಜಿಸಿರುವನೆಂಬ ವಿಶ್ವಾಸವು ಸರಿಯಲ್ಲವೆಂದು ಪವಿತ್ರ ಖುರ್‌ಆನಿನಲ್ಲಿ ಹಲವು ಕಡೆಗಳಲ್ಲಿ ದೇವನು ಹೇಳಿರುವನು. ಯಾವುದೇ ಗೋತ್ರವನ್ನಾಗಲೀ ದೇಶವನ್ನಾಗಲೀ ಮರೆತಿಲ್ಲ. ಈ ವಿಷಯವನ್ನು ಪವಿತ್ರ ಖುರ್‌ಆನ್‌ನಲ್ಲಿ ಹಲವೆಡೆಗಳಲ್ಲಿ ಉದಾಹರಣೆಗಳಿಂದಲೂ ದೃಷ್ಟಾಂತಗಳಿಂದಲೂ ಸ್ಪಷ್ಟಪಡಿಸಲಾಗಿದೆ. ಸರ್ವಶಕ್ತನಾದ ದೇವನು ಎಲ್ಲ ಸಮುದಾಯದವರಿಗೂ ದೇಶದವರಿಗೂ ಅವರ ಲೌಕಿಕಾವಶ್ಯಕತೆಗಳನ್ನು ಈಡೇರಿಸಲು ಸಕಲ ವಿಧ ಸೌಕರ್ಯಗಳನ್ನು ಒದಗಿಸಿ ಕೊಟ್ಟಿರುವ ಹಾಗೆಯೇ ಎಲ್ಲ ಜನಾಂಗಗಳ ಮತ್ತು ಎಲ್ಲ ದೇಶಗಳ ಜನರ ಆಧ್ಯಾತ್ಮಿಕ ಆವಶ್ಯಕತೆಗಳಿಗಾಗಿಯೂ ಎಲ್ಲ ಏರ್ಪಾಡುಗಳನ್ನು ಮಾಡಿರುವನು. ಇದರ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಒಂದೆಡೆಯಲ್ಲಿ ಹೀಗೆ ಹೇಳಲಾಗಿದೆ: **[illegible] ವ ಇನ್‌ಮ್ಮಿನ್ ಉಮ್ಮತಿನ್ ಇಲ್ಲಾ ಖಲಾಫೀಹಾ ನದೀ಼ರ್** – ಓರ್ವ ಮುನ್ನೆಚ್ಚರಿಕೆಗಾರನು ಬಂದಿರದ ಯಾವ ಸಮುದಾಯವೂ ಇಲ್ಲ." (ಪವಿತ್ರ ಖುರ್‌ಆನ್ 35:25). (ಪೈಗಾಮೆ ಸುಲ್‌ಹ್, ದಿ ಮೆಸ್ಸೇಜ್ ಆಫ್ ಪೀಸ್, ಮೈತ್ರಿ ಸಂದೇಶ).

ವಾಗ್ದತ್ತ ಮಸೀಹ್[ಅ] ಪುನಃ ಹೇಳುತ್ತಾರೆ: "ಆದುದರಿಂದ ನಾವೆಲ್ಲರೂ ವಿಶ್ವಾಸವನ್ನು ಹೊಂದಬೇಕಾದ ದೇವನು ಸಂಪೂರ್ಣನೂ ಸತ್ಯಸ್ವರೂಪನೂ ಸರ್ವಲೋಕಗಳ ಸೃಷ್ಟಿಕರ್ತನೂ ಪಾಲಕನೂ ಆಗಿದ್ದಾನೆಂದು ವಿವಾದವಿಲ್ಲದೆ ನಂಬಬೇಕಾಗಿದೆ. ಅವನ ಪರಿಪಾಲನೆಯು ಯಾವುದಾದರೊಂದು ನಿರ್ದಿಷ್ಟ ಜಾತಿಗೋ ನಿರ್ದಿಷ್ಟ ಕಾಲಕ್ಕೋ ನಿರ್ದಿಷ್ಟ ರಾಜ್ಯಕ್ಕೋ ಸೀಮಿತವಾದುದಲ್ಲ. ಅವನು ಎಲ್ಲ ಜಾತಿಯವರ, ಎಲ್ಲ ಕಾಲಗಳ, ಎಲ್ಲ ರಾಜ್ಯಗಳ ಪಾಲಕನಾಗಿದ್ದಾನೆ. ಸಕಲ ಅನುಗ್ರಹಗಳ ಮೂಲ ಅವನಾಗಿದ್ದಾನೆ. ಲೌಕಿಕವೂ ಆಧ್ಯಾತ್ಮಿಕವೂ ಆದ ಸರ್ವಶಕ್ತಿಗಳ ಆರಂಭ ಅವನಿಂದಾಗಿದೆ. ಎಲ್ಲ ಸೃಷ್ಟಿಗಳನ್ನು ಸಾಕಿ ಸಲಹುವವನು ಅವನಾಗಿದ್ದಾನೆ. ಎಲ್ಲ ವಸ್ತುಗಳೂ ಅವನನ್ನೇ ಆಶ್ರಯಿಸಿಕೊಂಡಿವೆ. ಅವನ ಅನುಗ್ರಹವು ಸಕಲ ಜಾತಿಗಳಲ್ಲಿಯೂ ಸಕಲ ರಾಜ್ಯಗಳಲ್ಲಿಯೂ ಸಕಲ ಯುಗಗಳಲ್ಲಿಯೂ ಸರ್ವವ್ಯಾಪಕವಾಗಿದೆ. ಅವನ ಕೃಪೆಯ ಕುರಿತು, ಯಾರೂ ಆಕ್ಷೇಪಿಸದ ರೀತಿಯಲ್ಲಿ ಅದು ಸರ್ವವ್ಯಾಪಿಯಾಗಿದೆ. ದೇವನು ತನ್ನ ಅನುಗ್ರಹಗಳನ್ನು ಇತರರಿಗಲ್ಲದೆ ತಮಗೆ ಕರುಣಿಸಲಿಲ್ಲ ಎಂದೋ ದೇವನಿಂದ ಮಾರ್ಗದರ್ಶಕ ಗ್ರಂಥಗಳು ಇತರರಿಗಲ್ಲದೆ ತಮಗೆ ಲಭಿಸಲಿಲ್ಲ ಎಂದೋ ದೇವನು ತನ್ನ ವಚನ, ಪ್ರಕಟಣೆ, ದೃಷ್ಟಾಂತಗಳ ಮುಖಾಂತರ ಹಿಂದಿನ ಕಾಲದಲ್ಲಿ ಹೊರತು ತಮ್ಮ ಕಾಲದಲ್ಲಿ ಪ್ರತ್ಯಕ್ಷನಾಗಲಿಲ್ಲ ಎಂದೋ ಆಕ್ಷೇಪಿಸಲು ಯಾವುದೇ ಜನಾಂಗಕ್ಕೂ ಅವನು ಎಡೆಗೊಡಲಿಲ್ಲ. ಹೀಗೆ ದೇವನು ತನ್ನ ಲೌಕಿಕವೂ ಆಧ್ಯಾತ್ಮಿಕವೂ ಆಗಿರುವ ಅನುಗ್ರಹಗಳಿಂದ ಯಾವುದೇ ಸಮುದಾಯವನ್ನಾಗಲೀ ಕಾಲವನ್ನಾಗಲೀ ವಂಚಿತವನ್ನಾಗಿ ಮಾಡದೆ ಸರ್ವವ್ಯಾಪಕವನ್ನಾಗಿ ಮಾಡಿರುವನು." (ಪೈಗಾಮೆ ಸುಲ್‌ಹ್, ದಿ ಮೆಸ್ಸೇಜ್ ಆಫ್ ಪೀಸ್, ಮೈತ್ರಿ ಸಂದೇಶ).

ಆದುದರಿಂದ ಬಿಳಿ ವರ್ಣದವರು ಹೆಚ್ಚು ಬುದ್ಧಿಶಾಲಿಗಳೂ ಶ್ರೇಷ್ಠ ಸಾಮರ್ಥ್ಯಶಾಲಿಗಳೂ ಎಂದು ಪ್ರತಿಪಾದಿಸುವವರು ಹೇಳುವುದು ತಪ್ಪಾಗಿದೆ. ಸರ್ವಶಕ್ತನಾದ ಅಲ್ಲಾಹನು ಎಲ್ಲ ಮನುಷ್ಯರಿಗೆ ಬುದ್ಧಿಶಕ್ತಿಯನ್ನೂ ಅನುಗ್ರಹವನ್ನೂ ದಯಪಾಲಿಸಿದ್ದಾನೆ. ತಮ್ಮನ್ನು ಇತರರಿಗಿಂತ ಶ್ರೇಷ್ಠರೆಂದು ಪರಿಗಣಿಸುವ ಲೌಕಿಕ ಜನರು ಮಾತ್ರವಲ್ಲ, ಇಸ್ಲಾಮ್ ಹೊರತು ಬೇರೆ ಯಾವ ಧರ್ಮವೂ ಮಾನವರ ಸಮಾನತೆ ಬಗ್ಗೆ ಸ್ಪಷ್ಟವಾಗಿ ಉಪದೇಶಿಸಿಲ್ಲ. ಆಧ್ಯಾತ್ಮಿಕವಾಗಿ ಮಾನವರನ್ನು ಸಮಾನರಾಗಿ ಪರಿಗಣಿಸಿ ಪ್ರತಿಯೊಂದು ಜನಾಂಗಗಕ್ಕೆ ಪ್ರವಾದಿಗಳನ್ನು ಸರ್ವಶಕ್ತನಾದ ದೇವನು ನಿಯೋಜಿಸಿರುವನು ಎಂದು ಇಸ್ಲಾಮ್ ಧರ್ಮ ಮಾತ್ರ ಉಪದೇಶಿಸುತ್ತಿದೆ. ಎಲ್ಲ ಪ್ರವಾದಿಗಳು ದೇವನಿಂದ ತಂದ ಸಂದೇಶ ಒಂದೇ ರೀತಿ ಆಗಿತ್ತು. ಮಾನವರ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲ ಎಂಬುದೇ ಆ ಸಂದೇಶವಾಗಿತ್ತು. ಆದುದರಿಂದ ಪವಿತ್ರ ಖುರ್‌ಆನ್ ಉಪದೇಶಿಸಿದ ಪ್ರಕಾರ ಎಲ್ಲ ದೇಶಗಳ ಪ್ರವಾದಿಗಳನ್ನು ನಂಬುವುದು ಮುಸ್ಲಿಮರಿಗೆ ಕಡ್ಡಾಯವಾಗಿದೆ. ಆದರೆ ಇತರ ಧರ್ಮಗಳ ಅನುಯಾಯಿಗಳಿಗೆ ಇಂತಹ ಬದ್ಧತೆ ಇಲ್ಲ. ಪ್ರತಿಯೊಂದು ಜನಾಂಗದಲ್ಲಿಯೂ ಪ್ರವಾದಿಗಳು ಆಗಮಿಸಿರುವರೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತಿದೆ. ಆದುದರಿಂದ ನಾವು ಎಲ್ಲ ಪ್ರವಾದಿಗಳನ್ನು ನಂಬುತ್ತೇವೆ.

ನಾವು ಎಲ್ಲ ದೇಶಗಳ ಪ್ರವಾದಿಗಳನ್ನು ನಂಬುತ್ತೇವೆ. ಇಂತಿಂತಹ ದೇಶದ ಪ್ರವಾದಿ ಸುಳ್ಳುಗಾರ ಎಂದಾಗಲಿ, ಅವರ ಉಪದೇಶಗಳು ತಪ್ಪು ಮಾರ್ಗದರ್ಶಕ ಎಂದಾಗಲಿ ನಾವು ಹೇಳಲಾರೆವು. ಒಬ್ಬ ಮುಸ್ಲಿಮನು ಹಾಗೆ ಹೇಳಿಕೆ ನೀಡುವುದು ಅಸಾಧ್ಯವಾಗಿದೆ. ಏಕೆಂದರೆ ಹಾಗೆ ಹೇಳಿದರೆ ಪವಿತ್ರ ಖುರ್‌ಆನ್ ಹೇಳಿದುದನ್ನು ಸುಳ್ಳೆಂದು ಘೋಷಿಸಿದ ಹಾಗಾಗುತ್ತದೆ (ಅಲ್ಲಾಹನು ಅಂತಹ ಅಪರಾಧದಿಂದ ರಕ್ಷಿಸಲಿ).

ಧಾರ್ಮಿಕ ಸಹಿಷ್ಣುತೆ ಮತ್ತು ಶಾಂತಿ ಪ್ರತಿಪಾದಕ ಉಪದೇಶಗಳನ್ನು ನೀಡುವುದರಲ್ಲಿ ಇಸ್ಲಾಮ್ ಅಪ್ರತಿಮವಾಗಿದೆ ಎಂದು ಇದು ಸಾಬೀತುಗೊಳಿಸುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಒಬ್ಬ ಕ್ರೈಸ್ತ ಅಥವಾ ಯಹೂದಿ ಅಥವಾ ಯಾವುದೇ ಅನ್ಯಧರ್ಮದ ಅನುಯಾಯಿ ಇಸ್ಲಾಮ್ ಧರ್ಮದ ಪವಿತ್ರ ಪೈಗಂಬರರ ವಿರುದ್ಧ ಅನುಚಿತ ವಿಮರ್ಶೆ ಮಾಡಬಹುದಾಗಿದೆ.ಆದರೆ ಮುಸ್ಲಿಮನಾದವನು ಯೇಸು ಕ್ರಿಸ್ತರನ್ನು, ಮೋಶೆಯನ್ನು ಮತ್ತು ಇತರ ಧರ್ಮಗಳ ಸ್ಥಾಪಕರನ್ನು ಗೌರವಿಸಬೇಕಾದುದು ಅನಿವಾರ್ಯವಾಗಿದೆ. ಆದುದರಿಂದ ಅನ್ಯಧರ್ಮದ ಅನುಯಾಯಿಗಳು ಪವಿತ್ರ ಪೈಗಂಬರರನ್ನು(ಸ) ನಿಂದಿಸುತ್ತಿರುವಾಗ ಸಹ ಮುಸ್ಲಿಮರಾದ ನಾವು ಅನ್ಯಧರ್ಮಗಳ ಪ್ರತಿಯೊಬ್ಬ ಪ್ರವಾದಿಯ ಹೆಸರನ್ನು ಉಚ್ಚರಿಸುವಾಗ ಅಲೈಹಿಸ್ಸಲಾಮ್ (ಅವರ ಮೇಲೆ ಶಾಂತಿ ಇರಲಿ) ಎಂದು ಹಾರೈಸುತ್ತೇವೆ. ಮತ್ತು ಅವರನ್ನು ಗೌರವಿಸುತ್ತೇವೆ. ಈ ರೀತಿ ಇಸ್ಲಾಮ್ ತನ್ನ ಅನುಯಾಯಿಗಳೊಂದಿಗೆ ಎಲ್ಲ ಸಂದರ್ಭಗಳಲ್ಲಿಯೂ ಸೌಹಾರ್ದದ ಅಸ್ತಿಭಾರವನ್ನು ಹಾಕಬೇಕೆಂದು ಉಪದೇಶಿಸುವ ಮೂಲಕ ಅತ್ಯಂತ ಉನ್ನತಮಟ್ಟದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪನೆಯನ್ನು ಮಾಡುವ ಏಕ ಮಾತ್ರ ಧರ್ಮವೆಂದು ಸಾಬೀತಾಗುತ್ತದೆ.

ಮುಸ್ಲಿಮರು ಧಾರ್ಮಿಕ ಕಲಹಗಳಿಂದ ದೂರ ಸರಿದು ಶಾಂತಿಯಿಂದ ಜೀವಿಸಬೇಕೆಂದು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಉಪದೇಶಿಸಿ ಹೀಗೆ ಹೇಳುತ್ತಾನೆ:

[illegible]

[illegible]

**ವಲಾ ತಸುಬ್ಬುಲ್ಲಧೀನ ಯದ್‌ಊನ ಮಿನ್‌ದೂನಿಲ್ಲಾಹಿ ಫಯಸುಬ್ಬುಲ್ಲಾಹ ಅದುವ್ವನ್ ಬಿಗೈರಿ ಇಲ್‌ಮಿನ್. ಕದ್ಹಾಲಿಕ ಝಯ್ಯನ್ನಾಲಿಕುಲ್ಲಿ ಉಮ್ಮತಿನ್ ಅಮಲಹುಮ್ ಸುಮ್ಮ ಇಲಾ ರಬ್ಬಿಹಿಮ್ ಮರ್‌ಜಿಉಹುಮ್ ಫಯುನಬ್ಬಿಉಹುಮ್ ಬಿಮಾ ಕಾನೂ ಯಅ್‌ಮಲೂನ್.**

"ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು. ಹೀಗೆ ನಾವು ಪ್ರತಿಯೊಂದು ಸಮುದಾಯದವರಿಗೂ ಅವರ ಕೃತ್ಯವನ್ನು ಚಲೋದಾಗಿ ತೋರಿಸಿಕೊಟ್ಟಿದ್ದೇವೆ. ಆ ಮೇಲೆ ಅವರ ಪ್ರಭುವಿನ ಬಳಿಗೆಯೇ ಅವರ ಮರಳಿಕೆಯಾಗಿದೆ. ಆಗ ಅವರ ಕೃತ್ಯಗಳ ಬಗ್ಗೆ ಅವರಿಗೆ ಅವನು ವಿವರಿಸಿ ಕೊಡುವನು." (6:109).

ಕಲಹವನ್ನು ನಿವಾರಿಸಿ ಜನರು ಲೋಕದಲ್ಲಿ ಸೌಹಾರ್ದದಿಂದ ಜೀವಿಸಲು ಇದಕ್ಕಿಂತ ಉತ್ತಮವಾದ ಮಾರ್ಗ ಬೇರೆ ಏನಿದೆ! ಪವಿತ್ರ ಖುರ್‌ಆನಿನ ವಚನ ಸರ್ವಶಕ್ತನಾದ ಅಲ್ಲಾಹನನ್ನು ಬಿಟ್ಟು ಬಹುದೇವಾರಾಧನೆ ಮಾಡುವವರ ಬಗ್ಗೆ ಪ್ರಸ್ತಾಪಿಸುತ್ತಿದೆ. ಇದನ್ನು ಅರಬಿ ಭಾಷೆಯಲ್ಲಿ ಶಿರ್ಕ್ (ಏಕದೇವನಿಗೆ ಸಹಭಾಗಿಗಳನ್ನು ಕಲ್ಪಿಸುವುದು) ಎಂದು ಕರೆಯಲಾಗುತ್ತಿದೆ. ಸರ್ವಶಕ್ತನಾದ ಅಲ್ಲಾಹನು ಶಿರ್ಕ್, ಮಹಾಪಾಪಗಳಲ್ಲಿ ಒಂದಾಗಿದೆ ಎಂದು ಹೇಳಿದ್ದಾನೆ. ಹೀಗಿದ್ದರೂ ಅನ್ಯರು ಆರಾಧಿಸುವವುಗಳ ವಿರುದ್ಧ ಮಾತನಾಡಬಾರದೆಂದು ಅಲ್ಲಾಹನು ಹೇಳುತ್ತಾನೆ.

ಪ್ರತಿಯೊಬ್ಬನು ತನ್ನ ಧರ್ಮದ ಬಗ್ಗೆ ಆದರ ಭಾವನೆಯನ್ನು ಹೊಂದಿರುತ್ತಾನೆ. ಆ ಭಾವನೆಗಳು ಸರಿಯೋ ತಪ್ಪೋ ಎಂದು ಪರಿಗಣಿಸದೆ ಒಬ್ಬನು ವಿವೇಕರಹಿತನಾಗಿ ಅವುಗಳ ವಿರುದ್ಧವಾಗಿ ಅಪಮಾನಕರವಾಗಿ ಮಾತನಾಡಿದರೆ ಅವುಗಳ ಆರಾಧಕರು ಪ್ರತಿಭಟಿಸಿ ಅಜ್ಞಾನದಿಂದ ಸರ್ವಶಕ್ತನಾದ ಅಲ್ಲಾಹನನ್ನು ಅಪಮಾನಿಸುವರು. ಈ ಕಾರಣದಿಂದ ಭಾವನೆಗಳು ಗಾಸಿಗೊಳ್ಳುವುವು ಮತ್ತು ಆ ಮೂಲಕ ಕಲಹಗಳೂ ಗಲಭೆ ಗೊಂದಲಗಳು ತಲೆದೋರುವುವು. ಇಂತಹ ಸ್ಥಿತಿಯುಂಟಾಗುವುದನ್ನು ತಡೆಗಟ್ಟಬೇಕು.

ಮೃತರಾದ ನಂತರ ನಾವೆಲ್ಲರೂ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲಿರುವೆವು. ಆಗ ಅಲ್ಲಾಹನು ತೀರ್ಪು ನೀಡುವನು – ನಮ್ಮ ಪಾಲಕ ಪೋಷಕನಾದ, ನಮ್ಮ ಆವಶ್ಯಕತೆಗಳನ್ನು ಈಡೇರಿಸುವ, ಶಿಕ್ಷೆ ಮತ್ತು ಪಾರಿತೋಷಿಕ ನೀಡುವ ಪ್ರಭು ಯಾರೆಂದು.

ಇದು ಎಂತಹ ಸುವರ್ಣ ತತ್ವವಾಗಿದೆ ಎಂದರೆ ಇದು ಅಸ್ತವ್ಯಸ್ತತೆಯನ್ನೂ ಅವ್ಯವಸ್ಥೆಯನ್ನೂ ನಿವಾರಿಸುತ್ತದೆಯಲ್ಲದೆ ಶಾಂತಿ ಸ್ಥಾಪಿಸುವಂತಹದ್ದೂ ಆಗಿದ್ದು ಮುಸ್ಲಿಮರ ನೈತಿಕ ಮಟ್ಟವನ್ನು ಉನ್ನತಗೊಳಿಸುವುದೂ ಆಗಿದೆ.

ಪವಿತ್ರ ಖುರ್‌ಆನಿನ ಈ ವಚನದ ಬಗ್ಗೆ ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ: "ಅನ್ಯರನ್ನು ಗೌರವಿಸಲು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಉಪದೇಶಿಸಿರುವನು. ಅವನು ಹೀಗೆ ಆಜ್ಞಾಪಿಸಿರುವನು: [illegible] ವಲಾ ತಸುಬ್ಬುಲ್ಲದೀನ

**ಯದ್‌ಊನ ಮಿನ್‌ದೂನಿಲ್ಲಾಹಿ ಫಯಸುಬ್ಬುಲ್ಲಾಹ ಅದ್‌ವನ್ ಬಿಗೈರಿ ಇಲ್‌ಮಿನ್** – ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳಿವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು. (6:109).

"ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ವಿಗ್ರಹಗಳಿಗೆ ಯಾವುದೇ ಸ್ಥಾನವಿಲ್ಲದಿದ್ದರೂ ಅವುಗಳನ್ನು ನಿಂದಿಸದೆ ಅವುಗಳನ್ನು ಆರಾಧಿಸುವವರೊಂದಿಗೆ ಸುಸ್ವಭಾವದೊಂದಿಗೆ ವರ್ತಿಸಬೇಕೆಂದು ಮುಸ್ಲಿಮರಿಗೆ ಅಲ್ಲಾಹನು ಆಜ್ಞಾಪಿಸಿರುವನು. ಹೀಗೆ ಮಾಡದಿದ್ದರೆ ಅವುಗಳ ಆರಾಧಕರು ಕೋಪಗೊಂಡು ಅಲ್ಲಾಹನನ್ನು ನಿಂದಿಸುವುದಕ್ಕೆ ನೀವು ಕಾರಣರಾಗುವಿರಿ ಎಂದು ಎಚ್ಚರಿಕೆ ನೀಡಿರುವನು." (ಪೈಗಾಮೆ ಸುಲ್‌ಹ್).

ಒಬ್ಬ ಮುಸ್ಲಿಮನು ಈ ಆಜ್ಞೆ ಪ್ರಕಾರ ವರ್ತಿಸದಿದ್ದರೆ ತಪ್ಪು ಕೃತ್ಯ ಅವನದಾಗಿರುವುದು. ಅದು ಇಸ್ಲಾಮ್‌ಧರ್ಮ ತತ್ವ ಪ್ರಕಾರವಾಗಿರುವುದಿಲ್ಲ. ಕೆಲವು ಮುಸ್ಲಿಮೇತರರು ಇಸ್ಲಾಮ್‌ಧರ್ಮ ತತ್ವಗಳು ತಪ್ಪಾಗಿವೆ ಎಂದು ಆರೋಪಿಸಿ ಇಸ್ಲಾಮನ್ನು ವಿವೇಕರಹಿತವಾಗಿ ಅಪಹಾಸ್ಯ ಮಾಡುತ್ತಾರೆ. ಇಂತಹ ಜನರೇ ಲೋಕದ ಶಾಂತಿಯನ್ನು ಕೆಡಿಸುತ್ತಿದ್ದಾರೆಯೇ ಹೊರತು ಇಸ್ಲಾಮ್‌ಧರ್ಮ ತತ್ವಗಳಲ್ಲ. ಇಸ್ಲಾಮ್‌ಧರ್ಮವನ್ನು ದೂಷಿಸಲು ಸಾಧ್ಯವೇ ಇಲ್ಲ. ಒಬ್ಬ ಮುಸ್ಲಿಮನು ಒಂದು ಅಪರಾಧ ಮಾಡಿದರೆ ಅದರ ಹೊಣೆಗಾರಿಕೆ ಅವನಿಗೆ ಮಾತ್ರ ಸೇರಿದೆ. ಅದರೊಂದಿಗೆ ಇಸ್ಲಾಮಿಗೆ ಯಾವ ಸಂಬಂಧವೂ ಇರುವುದಿಲ್ಲ. ಇದೇರೀತಿ ಒಬ್ಬ ಮುಸ್ಲಿಮೇತರನಿಗೆ ಇಸ್ಲಾಮಿನ ನೈಜ ತತ್ವಗಳು ತಿಳಿದಿದ್ದರೂ ಅವನು ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸಲು ಪ್ರಯತ್ನಿಸಿದರೆ ಮತ್ತು ಅದರ ಫಲಸ್ವರೂಪವಾಗಿ ಕಲಹ ಗೊಂದಲಗಳು ತಲೆದೋರುವುದಾದರೆ ಅದಕ್ಕೆ ಹೊಣೆಗಾರನಾಗುವುದು ಆ ಮುಸ್ಲಿಮೇತರನಾಗಿದ್ದಾನೆ.

ಬಲಾತ್ಕಾರವನ್ನಾಗಲಿ, ಕಲಹವನ್ನಾಗಲಿ ಪ್ರತಿಪಾದಿಸದ ಅನೇಕ ವಚನಗಳು ಪವಿತ್ರ ಖುರ್‌ಆನ್‌ನಲ್ಲಿವೆ. ಶಾಂತಿ, ಸಾಮರಸ್ಯ, ಸೌಹಾರ್ದ ಮತ್ತು ಸತ್ಯಪಾಲನೆ ಬಗ್ಗೆ ಇಸ್ಲಾಮ್ ಎಷ್ಟು ಪ್ರೋತ್ಸಾಹ ನೀಡುತ್ತಿದೆಯೋ ಬೇರೆ ಯಾವುದೇ ಧರ್ಮದಲ್ಲಿ ಅವು ಸಮಾನತೆ ಇಲ್ಲದವುಗಳಾಗಿವೆ.

ಉದಾಹರಣೆಗೆ, ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ನೋಡಿರಿ: **[illegible]**
**[illegible]**
**ವಲೌಶಾಅ ರಬ್ಬುಕ ಲಆಮನ ಮನ್‌ಫಿಲ್ ಅರ್‌ಝಿ ಕುಲ್ಲುಹುಮ್ ಜಮೀಅ. ಅಫಅಂತ ತುಕ್‌ರಿಹುನ್ನಾಸ ಹತ್ತಾ ಯಕೂನೂ ಮೂಮಿನೀನ್**. "ನಿನ್ನ ಪ್ರಭು ಇಚ್ಛೆಸಿದ್ದರೆ, ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. (ಆದರೆ ಅವನು ನಿರ್ಬಂಧಿಸುವುದಿಲ್ಲ.) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಯೋ?" (10:100)

ಲೋಕದ ಜನರು ಇಸ್ಲಾಮ್‌ಧರ್ಮವನ್ನು ಸೇರಲು ಮುಸ್ಲಿಮರು ಬಲಾತ್ಕಾರ ಮಾಡಬಹುದಾಗಿದ್ದರೆ ಮತ್ತು ತಮ್ಮ ಧಾರ್ಮಿಕ ನಂಬಿಕೆಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದವರ ಮೇಲೆ ಬಲಾತ್ಕಾರ ಮಾಡಿ ಶಾಂತಿಗೆ ಭಂಗವುಂಟುಮಾಡುವುದು ಅನುಮತಿಸಲ್ಪಟ್ಟಿದ್ದರೆ ಸರ್ವಶಕ್ತನಾದ ಅಲ್ಲಾಹನು, ಅನ್ಯರನ್ನು ಮುಸ್ಲಿಮರನ್ನಾಗಿ ಮಾಡಲು ಮುಸ್ಲಿಮರು ಬಲಪ್ರಯೋಗಿಸುವುದನ್ನು ನಿಷಿದ್ಧಗೊಳಿಸುತ್ತಿರಲಿಲ್ಲ. ಸರ್ವಶಕ್ತನಾದ ಅಲ್ಲಾಹನು ಹೇಳುವುದೇನೆಂದರೆ ತಾನು ಇಚ್ಛೆಸುತ್ತಿದ್ದರೆ – ಹಾಗೆ ಇಚ್ಛೆಸುವುದು ಅವನ ಅಧಿಕಾರಕ್ಕೆ ಸೇರಿದುದಾಗಿದೆ – ಅವನು ಸಮಸ್ತಲೋಕವನ್ನು ಇಸ್ಲಾಮಿಗೆ ಸೇರುವಂತೆ ಬಲಪ್ರಯೋಗ ಮಾಡುತ್ತಿದ್ದನು. ಆದರೆ ಅಲ್ಲಾಹನು ಬಲಾತ್ಕಾರ ಮಾಡಲು ಇಚ್ಛೆಸುವುದಿಲ್ಲ. ಅಲ್ಲಾಹನು ಬಲಾತ್ಕಾರ ಮಾಡಲು ಇಚ್ಛೆಸದೆ ಇದ್ದಾಗ ಅವನು ಪವಿತ್ರ ಪೈಗಂಬರರಿಗೆ(ಸ) ತಿಳಿಸಿದನು– ಅವರು ಸಹ ಮುಸ್ಲಿಮರನ್ನಾಗಿ ಮಾಡಲು ಜನರನ್ನು ಬಲಾತ್ಕಾರ ಮಾಡಬಾರದೆಂದು. ಅಲ್ಲಾಹನು ಪವಿತ್ರ ಪೈಗಂಬರರಿಗೆ(ಸ) ಕೂಡ ಬಲಾತ್ಕಾರ ಮಾಡುವ ಅಧಿಕಾರ ನೀಡದಿರುವಾಗ ಬೇರೆ ಯಾರಿಗಾದರೂ ಅಂತಹ ಅಧಿಕಾರ ಇರುವುದಾದರೂ ಹೇಗೆ? ಮತಪಂಡಿತರು ಮತ್ತು ಭೀಕರವಾದಿಗಳು ಅನ್ಯರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡಬಹುದೆಂದು ಹೇಳುತ್ತಾ ಇರುವುದು ಇಸ್ಲಾಮ್‌ಧರ್ಮ ತತ್ವಗಳಿಗೆ ವಿರುದ್ಧವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

**[illegible]**
**[illegible] ವ ಖುಲಿಲ್ ಹಖ್ಖು ಮಿನ್‌ರ್ರಬ್ಬಿಕುಮ್ ಫಮನ್‌ಶಾಅ ಫಲ್‌ಯೂಮಿನ್ ವಮನ್‌ಶಾಅ ಫಲ್‌ಯಕ್‌ಫುರ್** – "ಹೇಳು: 'ಇದು ನಿಮ್ಮ ಪ್ರಭುವಿನ ಕಂಡೆಯಿಂದಿರುವ ಸತ್ಯವಾಗಿದೆ. ಆದುದರಿಂದ ಯಾರು ಇಚ್ಛೆಸುತ್ತಾನೋ ಅವನು ನಂಬಲಿ. ಯಾರು ಇಚ್ಛೆಸುತ್ತಾನೋ ಅವನು ನಿರಾಕರಿಸಲಿ." (18:30).

ಆದುದರಿಂದ ನಮ್ಮ ಯುಜವಾನರಾದ ಪವಿತ್ರ ಪೈಗಂಬರರಿಗೆ(ಸ) ಅನ್ಯರನ್ನು ಬಲಾತ್ಕಾರ ಪೂರ್ವಕ ಮುಸ್ಲಿಮರನ್ನಾಗಿ ಮಾಡಲು ಅಲ್ಲಾಹನು ಅಧಿಕಾರ ನೀಡದಿರುವಾಗ ಇಂದಿನ ಕಾಲದ ಮತಪಂಡಿತರು ಮತ್ತು ಮುಸ್ಲಿಮ್ ನಾಮಧೇಯ ಸಂಘಟನೆಗಳು ಇಸ್ಲಾಮನ್ನು ಹರಡಲು ತಾವು ಅಧಿಕಾರ ಹೊಂದಿರುವುದಾಗಿ ವಾದಿಸಿ ಇಸ್ಲಾಮಿಗೆ ಅಪಕೀರ್ತಿ ಉಂಟುಮಾಡುವುದಾದರೂ ಸರಿಯಾಗುವುದು

ಹೇಗೆ? ಯಾರಾದರೂ ಇಸ್ಲಾಮಿನ ಹೆಸರಲ್ಲಿ ಏನಾದರೂ ತಪ್ಪು ಕೆಲಸ ಮಾಡಿದರೆ ಅಂತಹ ಜನರೇ ತಪ್ಪುಗಾರರಾಗಿದ್ದಾರೆ ಹೊರತು ಇಸ್ಲಾಮಿನ ಉಪದೇಶಗಳಲ್ಲ. ಇಸ್ಲಾಮ್ ಸಾಮರಸ್ಯ, ಶಾಂತಿ, ಪ್ರೀತಿ ಮತ್ತು ಸೌಹಾರ್ದ ಸ್ಥಾಪಿಸುವ ಧರ್ಮವಾಗಿದೆ.

ನಾನು ಇಷ್ಟರವರೆಗೆ ಪ್ರಸ್ತಾಪಿಸಿರುವುದು ಇಸ್ಲಾಮನ್ನು ತೀವ್ರವಾದಿ, ಗಲಭೆಗೊಂದಲಕಾರಕ ಧರ್ಮ ಎಂದು ಆಕ್ಷೇಪಿಸುವ ಮುಸ್ಲಿಮೇತರರ ಅಭಿಪ್ರಾಯಗಳನ್ನೂ ಇಸ್ಲಾಮಿನ ಹೆಸರಿನಲ್ಲಿ ಭಯೋತ್ಪಾದಕ ಕೃತ್ಯಗಳನ್ನು ಮಾಡಿ ಲೋಕದ ಶಾಂತಿಯನ್ನು ಕೆಡಿಸುವ ಮುಸ್ಲಿಮರ ಅಭಿಪ್ರಾಯಗಳನ್ನೂ ಖಂಡಿಸುತ್ತದೆ. ಇಸ್ಲಾಮ್ ಧರ್ಮ ಸುಂದರವಾದ ಉಪದೇಶಗಳನ್ನು ನಿಶ್ಚಯವಾಗಿಯೂ ಹೊಂದಿದ್ದರೂ ದುರದೃಷ್ಟಕರವಾಗಿ ಕೆಲವು ಮುಸ್ಲಿಮರು ಮಾಡುತ್ತಿರುವ ಕೃತ್ಯಗಳ ಕಾರಣದಿಂದ ಮುಸ್ಲಿಮೇತರರು ಇಸ್ಲಾಮನ್ನು ತಪ್ಪಾಗಿ ವಿಮರ್ಶಿಸಲು ಧೈರ್ಯಪಡುತ್ತಾರೆ. ಮುಸ್ಲಿಮ್ ಮತಪಂಡಿತರೆಂಬ ನಾಮಧೇಯವನ್ನು ಹೊಂದಿದವರು ಮಾಡುವ ವಿಧ್ವಂಸಕ ಕೃತ್ಯಗಳ ಕಾರಣದಿಂದ ಇಂತಹ ಅನಿವಾರ್ಯ ಪರಿಣಾಮ ಉಂಟಾಯಿತು.

ಈ ಕಾಲಘಟ್ಟದಲ್ಲಿ ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರ ಈ ತಪ್ಪು ನಂಬಿಕೆಗಳನ್ನು ಸುಧಾರಣೆ ಮಾಡಲು ತನ್ನ ವಾಗ್ದಾನ ಪ್ರಕಾರ ವಾಗ್ದತ್ತ ಮಸೀಹರನ್ನು ನಿಯೋಜಿಸಿರುವನು. ವಾಗ್ದತ್ತ ಮಸೀಹ್[ಅ] ಇಸ್ಲಾಮ್‌ಧರ್ಮ ತತ್ವಗಳ ಸೌಂದರ್ಯವನ್ನು ಪ್ರದರ್ಶಿಸಿದರು. ನಿಶ್ಚಯವಾಗಿಯೂ ಅವರು ಹಾಗೆ ಮಾಡಿದರು.

ಪವಿತ್ರ ಖುರ್‌ಆನ್ ಮುಸ್ಲಿಮರು ಗೌರವಿಸುವ ಧಾರ್ಮಿಕ ಗ್ರಂಥವಾಗಿದೆ. ಪವಿತ್ರ ಖುರ್‌ಆನಿನ ಉಪದೇಶಗಳ ಬೆಳಕಿನಲ್ಲಿ ಮಾತ್ರ ಸತ್ಯವೂ ಸೌಂದರ್ಯಭರಿತವೂ ಆಗಿರುವ ಇಸ್ಲಾಮಿನ ಉಪದೇಶಗಳನ್ನು ಪ್ರದರ್ಶಿಸಲು ಮತ್ತು ಅನುಷ್ಠಾನಕ್ಕೆ ತರಲು ಸಾಧ್ಯ. ಈ ಕಾಲಘಟ್ಟದಲ್ಲಿ ವಾಗ್ದತ್ತ ಮಸೀಹ್[ಅ] ಪವಿತ್ರ ಖುರ್‌ಆನಿನ ತತ್ವಗಳನ್ನು ನಮಗೆ ವಿವರಿಸಿಕೊಟ್ಟರು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತಂದು ತೋರಿಸಿದರು.

ಪವಿತ್ರ ಕಅ್‌ಬ ಅಥವಾ ಮಕ್ಕದ ಬಗ್ಗೆ ಪವಿತ್ರ ಖುರ್‌ಆನ್ ಹೇಳುತ್ತದೆ: **[illegible] ವ ಮನ್ ದಖಲಹೂ ಕಾನ ಆಮಿನ** – ಅದರೊಳಗೆ ಯಾರಾದರೂ ಪ್ರವೇಶಿಸಿದರೆ ಅವನು ನಿರ್ಭೀತನಾದನು.” (3:98)

ಈ ವಚನದಲ್ಲಿ ಬಳಸಲಾದ ಆಮನ ಎಂಬ ಅರಬಿ ಪದಕ್ಕೆ ಎರಡು ಅರ್ಥಗಳಿವೆ. ಎಂದರೆ ಅದನ್ನು ಪ್ರವೇಶಿಸುವವನು ಸಂರಕ್ಷಿಸಲ್ಪಟ್ಟು ನಿರ್ಭೀತನಾಗುವನು. ಈ ಪದದ ಇನ್ನೊಂದು ಅರ್ಥ – ಸ್ವತಃ ಸಂರಕ್ಷಿತನಾಗಿ ಅನ್ಯರಿಗೆ ಶಾಂತಿಯನ್ನು ನೀಡುವನು ಎಂದಾಗಿದೆ. ಇದು ಪ್ರಾಯೋಗಿಕವಾಗಿ ಪ್ರದರ್ಶಿಸಲ್ಪಟ್ಟದ್ದು ಮಕ್ಕವನ್ನು ಪವಿತ್ರ ಪೈಗಂಬರರು[ಸ] ಜಯಶಾಲಿಯಾಗಿ ಪ್ರವೇಶಿಸಿದ ಸಂದರ್ಭದಲ್ಲಾಗಿದೆ. ಆ ಸಂದರ್ಭದಲ್ಲಿ ಪವಿತ್ರ ಪೈಗಂಬರರು[ಸ] ತನ್ನ ಮತ್ತು ತನ್ನ ಶಿಷ್ಯರ ಕಡು ಶತ್ರುಗಳಾಗಿದ್ದವರನ್ನು ಕ್ಷಮಿಸಿದರು. ಅವರಿಗೆ ಕ್ಷಮಾದಾನವನ್ನೂ ಶಾಂತಿಯನ್ನೂ ನೀಡಿ ಅವರನ್ನು ಸಂರಕ್ಷಿಸಿದರು. ಆ ಸಂದರ್ಭದಲ್ಲಿ ಒಬ್ಬ ಅನ್‌ಸಾರಿ ಮುಖ್ಯಸ್ಥ ಹೇಳಿದ್ದರು– ನಾವು ಪ್ರತೀಕಾರ ಮಾಡಿ ಖುರೈಶಿಗಳನ್ನು ಅಪಮಾನಿಸುವೆವು ಎಂದು. ಅಬೂ ಸುಫ್‌ಯಾನ್ ಈ ಮಾತುಗಳನ್ನು ಮರೆಯಲ್ಲಿ ನಿಂತು ಆಲಿಸಿದ್ದರು. ಅವರು ಅನ್‌ಸಾರಿ ಮುಖ್ಯಸ್ಥ ಹೇಳಿದ ಮಾತನ್ನು ಹಝ್ರತ್ ಪೈಗಂಬರರಿಗೆ[ಸ] ತಿಳಿಸಿ ಕೇಳಿದರು: “ನಾವು ಹಿಂದೆ ಅತಿಕ್ರಮವಾಗಿ ವರ್ತಿಸಿದುದರಿಂದ ನೀವು ನಮಗೆ ಈ ದಿನ ಈ ನಗರದಲ್ಲಿ ಸಂರಕ್ಷಣೆ ನೀಡುವುದಿಲ್ಲವೇ?” ಪವಿತ್ರ ಪೈಗಂಬರ್[ಸ] ಹೇಳಿದರು: “ನೀವು ಹಿಂದೆ ಕ್ರೂರ ಕೃತ್ಯಗಳನ್ನು ಮಾಡಿದ್ದರೂ ನಾನು ನಿಮಗೆ ಕ್ಷಮೆಯನ್ನು ನೀಡುತ್ತೇನೆ. ಈ ನಗರವನ್ನು ಶಾಂತಿಧಾಮವೆಂದು ಘೋಷಿಸಲಾಗಿದೆ. ಕಅ್‌ಬ ಸಹ ಶಾಂತಿಧಾಮವಾಗಿ ಘೋಷಿಸಲ್ಪಟ್ಟಿದೆ.”

ಅನ್‌ಸಾರಿ ಮುಖ್ಯಸ್ಥ ಹೇಳಿದುದು ತಪ್ಪೆಂದು ಪವಿತ್ರ ಪೈಗಂಬರ್[ಸ] ಹೇಳಿದರು. ಅಂದಿನಿಂದ, ಆ ಪವಿತ್ರ ನಗರದಿಂದ ಮತ್ತು ಪವಿತ್ರ ಕಅ್‌ಬದಿಂದ ಕಾರುಣ್ಯ, ಶಾಂತಿ ಮತ್ತು ಸೌಹಾರ್ದದ ಉಪದೇಶಗಳು ಲೋಕದಾದ್ಯಂತ ವ್ಯಾಪಿಸುವಂತಾಯಿತು.

ಪವಿತ್ರ ಪೈಗಂಬರ್[ಸ] ಆ ಅನ್‌ಸಾರಿ ಮುಖ್ಯಸ್ಥನಿಂದ ಪತಾಕೆಯನ್ನು ಅವರು ಪ್ರಕಟಿಸಿದ ಅಭಿಪ್ರಾಯದ ಕಾರಣ ತೆಗೆದುಕೊಂಡು ಇನ್ನೊಬ್ಬ ಮುಖ್ಯಸ್ಥನಿಗೆ ಕೊಟ್ಟರು. ಈ ರೀತಿ ಪವಿತ್ರ ಪೈಗಂಬರ್[ಸ] ಮಕ್ಕ ನಗರದ ಶಾಂತಿ ಮತ್ತು ಭದ್ರತೆಯ ಸ್ಥಾನವನ್ನು ಕಾರ್ಯರೂಪದಲ್ಲಿ ಪ್ರಕಟಿಸಿದರು.

ಆದುದರಿಂದ, ಇಸ್ಲಾಮ್ ಧರ್ಮದ ತತ್ವಗಳು ಎಷ್ಟು ಶಾಂತಿ ಪ್ರತಿಪಾದಕವಾಗಿದೆ ಎಂದರೆ ಅದು ಹೀಗೆ ಉಪದೇಶಿಸುತ್ತದೆ: ಮುಸ್ಲಿಮರು ತಮ್ಮ ಶತ್ರುಗಳನ್ನು ಸೋಲಿಸಿದಾಗ ಕೂಡ ಅವರಿಗೆ ಕ್ಷಮೆಯನ್ನು ನೀಡಬೇಕು ಮತ್ತು ಅವರನ್ನು ಶಿಕ್ಷಿಸದೆ ಬಿಟ್ಟು ಕರುಣೆಯಿಂದ ವರ್ತಿಸಬೇಕು. ಇಂದಿನ ತಥಾಕಥಿತ ಸುಸಂಸ್ಕೃತ ಸಮಾಜದಲ್ಲಿ ಇಂತಹ ಸುಸಂಸ್ಕೃತಿ ಭರಿತ ವರ್ತನೆಯನ್ನು ಯಾರು ಪ್ರದರ್ಶಿಸುತ್ತಾರೆ?

ಜನರನ್ನು ಶಾಂತಿಯ ಕಡೆಗೆ ಆಹ್ವಾನಿಸುವುದಕ್ಕೆ ಸಂಬಂಧಿಸಿ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **[illegible] ವಲ್ಲಾಹು ಯದ್‌ಊ ಇಲಾ ದಾರಿಸ್ಸಲಾಮ್** – “ಅಲ್ಲಾಹನು ಶಾಂತಿಯ ನೆಲೆವೀಡಿಗೆ ಆಹ್ವಾನಿಸುತ್ತಾನೆ.” (10:26)

ಅಲ್ಲಾಹನು ನಮ್ಮನ್ನು ಶಾಂತಿಯ ಕಡೆಗೆ ಬರಲು ಮತ್ತು ಶಾಂತಿಯ ನೆಲೆವೀಡನ್ನು ಪ್ರವೇಶಿಸಲು ಆಹ್ವಾನಿಸುತ್ತಾನೆ. ಹೀಗೆ ಪ್ರವೇಶಿಸುವವರನ್ನು ಅಲ್ಲಾಹನು ಮುಸ್ಲಿಮರು ಎಂದು ಹೆಸರಿಡುತ್ತಾನೆ. ಈ ಶಬ್ದದ ಅರ್ಥ ಶಾಂತಿಯನ್ನು ಹರಡುವವರೂ ಶಾಂತಿಯನ್ನು ಸ್ಥಾಪಿಸುವವರೂ ಎಂದಾಗಿದೆ. ಒಬ್ಬ ವ್ಯಕ್ತಿ ಈ ಶಬ್ದದ ಪಾವಿತ್ರ್ಯವನ್ನು ಪರಿಗಣಿಸುವುದಿಲ್ಲವಾದರೆ ಅದು ಅವನ ಸ್ವಂತ ತಪ್ಪಾಗಿದೆ. ಇದಲ್ಲದೆ ಮುಸ್ಲಿಮರು ಒಬ್ಬರಿನ್ನೊಬ್ಬರನ್ನು ಕಾಣುವಾಗ ಅಸ್ಸಲಾಮು ಅಲೈಕುಮ್ (ನಿಮ್ಮ ಮೇಲೆ ಶಾಂತಿ ಇರಲಿ) ಎಂದು ಹೇಳಲು ಇಸ್ಲಾಮ್ ಉಪದೇಶಿಸುತ್ತಿದೆ. ಒಬ್ಬನು ಅಸ್ಸಲಾಮು ಅಲೈಕುಮ್ – ನಿಮ್ಮ ಮೇಲೆ ಶಾಂತಿ ಇರಲಿ ಎಂದು ಸತ್ಯವಾಗಿಯೂ ಹಾರೈಸುವವನಾಗಿದ್ದರೆ ಅವನು ಖಡ್ಗ ಹಿರಿದು ರಕ್ತಪಾತ ನಡೆಸಿ ಶಾಂತಿಗೆ ಭಂಗವುಂಟುಮಾಡಲು ಸಾಧ್ಯವೇ?

ಇದೇ ರೀತಿ ನಾವು ನಮಾಝುನ್ನು ಮುಕ್ತಾಯ ಗೊಳಿಸುವಾಗ – ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ಎಂದು ನಮ್ಮ ಬಲಭಾಗಕ್ಕೆ ತಲೆತಿರುಗಿಸಿ ಮತ್ತು ಅನಂತರ ಎಡಭಾಗಕ್ಕೆ ತಲೆತಿರುಗಿಸಿ ಹೇಳುತ್ತೇವೆ.

ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಒಬ್ಬನು ತನ್ನ ನಮಾಝುನ್ನು ಅನುಷ್ಠಿಸಿದ ನಂತರ ತನ್ನ ಬಲಭಾಗದಲ್ಲಿರುವವರಿಗೂ ಎಡಭಾಗದಲ್ಲಿರುವವರಿಗೂ ಮುಂದೆ ಇರುವವರಿಗೂ ಹಿಂದೆ ಇರುವವರಿಗೂ ಶಾಂತಿ ಮತ್ತು ದೇವಾನುಗ್ರಹವನ್ನು ಕೋರುವ ಸಂದೇಶ ನೀಡುತ್ತಾನೆ. ಇಸ್ಲಾಮ್ ಎಂದೂ ಶಾಂತಿಯನ್ನು ಭಂಗಪಡಿಸುವ ಮತ್ತು ಅನ್ಯರ ಮೇಲೆ ಬಲಾತ್ಕಾರ ಮಾಡುವ ಧರ್ಮವಾಗಲಾರದು. ಅದರ ತತ್ವಗಳು ಎಷ್ಟು ಸುಂದರವಾಗಿವೆ ಎಂದರೆ ಅದು ಇತರ ಎಲ್ಲ ಧರ್ಮಗಳಿಗಿಂತ ಮಿಗಿಲಾಗಿ ಶಾಂತಿ ಮತ್ತು ಸೌಹಾರ್ದವನ್ನು ಉಪದೇಶಿಸುತ್ತದೆ.

ಪವಿತ್ರ ಖುರ್‌ಆನ್ ನಮಗೆ ತಿಳಿಸುತ್ತದೆ– ಈ ಪವಿತ್ರ ಸ್ಥಳ (ಎಂದರೆ ಪವಿತ್ರ ಕಅ್‌ಬ) ಶಾಂತಿ ಮತ್ತು ಸೌಹಾರ್ದದ ಸತ್ಯವಾದ ಕೇಂದ್ರ ಎಂದು. ಅಲ್ಲಾಹನು ಹೇಳುತ್ತಾನೆ: [illegible] **ಅವಲಮ್ ಯರವ್ ಅನ್ನಾ ಜಅಲ್‌ನಾ ಹರಮನ್ ಆಮಿನನ್ ವ ಯುತಖತ್ತಫುನ್ನಾಸು ಮಿನ್ ಹೌಲಿಹಿಮ್ ಅಫಬಿಲ್‌ಬಾತಿಲಿ ಯೂಮಿನೂನ ವ ಬಿನಿಅ್‌ಮತಿಲ್ಲಾಹಿ ಯಕ್‌ಫುರೂನ್.**

"ಅದರ ಸುತ್ತು ಮುತ್ತಲಿನಿಂದೆಲ್ಲ ಮನುಷ್ಯರು ಕಿತ್ತೆಸೆಯಲ್ಪಡುತ್ತಿರುವಾಗ ಸುರಕ್ಷಿತವಾದ ಪುಣ್ಯ ಸ್ಥಳ (ಮಕ್ಕ, ಕಅ್‌ಬ)ವನ್ನು ನಾವು ಸ್ಥಾಪಿಸಿರುವುದು ಅವರು ಕಾಣುವುದಿಲ್ಲವೇ? ಏನು, ಅವರು ಸುಳ್ಳನ್ನು ನಂಬಿ ಅಲ್ಲಾಹನ ಅನುಗ್ರಹವನ್ನು ಅಲ್ಲಗಳೆಯುವರೇ?" (29:68).

ಪವಿತ್ರ ಕಅ್‌ಬದ ಸ್ಥಾಪನೆಯ ನಿಜವಾದ ಉದ್ದೇಶ ಲೋಕದಲ್ಲಿ ಶಾಂತಿಯನ್ನೂ ಭದ್ರತೆಯನ್ನೂ ಸ್ಥಾಪಿಸುವುದಾಗಿದೆ ಎಂದು ಈ ವಚನದಲ್ಲಿ ಘೋಷಿಸಲಾಗಿದೆ. ಇದನ್ನು ಶಾಂತಿಯ ಕೇಂದ್ರವಾಗಿ ಕಾಪಾಡುವುದು ಮುಸ್ಲಿಮರ ಬಹಳ ದೊಡ್ಡ ಹೊಣೆಗಾರಿಕೆಯಾಗಿದೆ. ಈ ಸ್ಥಳದೊಂದಿಗೆ ಸಂಬಂಧ ಜೋಡಿಸುವವನಿಗೆ ಶಾಂತಿಯ ಖಾತರಿಯನ್ನು ಅಲ್ಲಾಹನು ಘೋಷಿಸಿದ್ದಾನೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸರ್ವಶಕ್ತನಾದ ಅಲ್ಲಾಹನನ್ನು ನಂಬುವ ಮೂಲಕ ಮತ್ತು ಅಲ್ಲಾಹನ ಭವನವಾದ ಕಅ್‌ಬದೊಂದಿಗೆ ಸಂಬಂಧ ಜೋಡಿಸುವ ಮೂಲಕ ಮಾತ್ರ ನಿಜವಾದ ಸಂರಕ್ಷಣೆಯ ಖಾತರಿ ಲಭಿಸುವುದು.

ದುರ್ಭಾಗ್ಯವಶಾತ್ ಮುಸ್ಲಿಮರು – ವಿಶಿಷ್ಟವಾಗಿ ಮುಸ್ಲಿಮ್ ದೇಶಗಳ ದೊರೆಗಳು – ಅಲ್ಲಾಹನಿಂದ ಇಂತಹ ಖಾತರಿ ದೊರೆತ ನಂತರ ಕೂಡ ತಮ್ಮ ಶಕ್ತಿ ಮತ್ತು ಸಂಪತ್ತಿನಿಂದ ಬೀಗುತ್ತಾ ಏನು ಮಾಡುತ್ತಾರೆಂದರೆ ಶಾಂತಿಯನ್ನು ಸ್ಥಾಪಿಸಲು ಮತ್ತು ಭದ್ರತೆಗೆ ಏಕದೇವನ ಕಡೆಗೆ ಮತ್ತು ಪವಿತ್ರ ಕಅ್‌ಬದ ಸ್ಥಾಪನೆಯ ಉದ್ದೇಶವೇನೆಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಿದ ಕಡೆಗೆ ಗಮನ ಹರಿಸದೆ ದುಷ್ಕೃತ್ಯಗಳನ್ನು ಮಾಡಲು ಧೈರ್ಯಪಡುತ್ತಾರೆ. ಅವರ ಲೌಕಿಕ ಮಿತ್ರ ದೇಶಗಳು ಮತ್ತು ನಾಯಕರು ತಮ್ಮ ಭದ್ರತೆಗೆ ಖಾತರಿ ನೀಡುವವರಾಗಿದ್ದಾರೆ ಎಂದು ಅವರು ಭಾವಿಸುತ್ತಿದ್ದಾರೆ. ಈ ಪುಣ್ಯ ಸ್ಥಾನದಲ್ಲಿ ಶಾಂತಿಯನ್ನು ಸ್ಥಾಪಿಸಿರುವುದಾಗಿ ಅಲ್ಲಾಹನು ಘೋಷಿಸಿದ್ದಾನೆ. ಈ ಪುಣ್ಯ ಸ್ಥಳದೊಂದಿಗೆ ಸಂಬಂಧವಿರುವವರು ಅಲ್ಲಾಹನಿಂದ ವಾಸ್ತವಿಕವಾಗಿ ಸಂರಕ್ಷಣೆ ಪಡೆಯುವರು.

ಮಹಾಶಕ್ತಿ ರಾಷ್ಟ್ರಗಳು ಮತ್ತು ಅವರ ಯೋಜನೆಗಳು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಹಕಾರಿಯಾಗಿರುತ್ತಿದ್ದರೆ ಇಂದಿನ ಕಾಲದಲ್ಲಿ ಲೋಕದಲ್ಲಿ ಅಸ್ತವ್ಯಸ್ತತೆ ಮತ್ತು ಅಶಾಂತಿ ಇರುತ್ತಿರಲಿಲ್ಲ. ಇಂದಿನ ಕಾಲದಲ್ಲಿ ಲೋಕದಲ್ಲಿ ಅಶಾಂತಿಗೆ ಕಾರಣವೇನೆಂದರೆ, ಜನರು ದೇವನ ಕಡೆಗೆ ತಮ್ಮ ಶ್ರದ್ಧೆಯನ್ನು ಕೇಂದ್ರೀಕರಿಸುವುದಕ್ಕೆ ಬದಲಾಗಿ ಲೌಕಿಕ ವ್ಯವಹಾರಗಳಿಗೆ ಹೆಚ್ಚು ಗಮನ ಹರಿಸುತ್ತಾರೆ. ಏಕದೇವನನ್ನು ನಿರ್ಲಕ್ಷಿಸಿ ಧರ್ಮ ನಿರಪೇಕ್ಷನಾದ ವ್ಯಕ್ತಿ ತನ್ನ ವಿನಾಶಕ್ಕೆ ತಯಾರಾಗುತ್ತಿದ್ದಾನೆ.

ಮುಸ್ಲಿಮರು ಮನವರಿಕೆ ಮಾಡಿಕೊಳ್ಳಬೇಕಾದುದೇನೆಂದರೆ, ಈ ಕಾಲಘಟ್ಟದಲ್ಲಿ ಏಕದೇವ ವಿಶ್ವಾಸವು ಕಣ್ಮರೆಯಾಗುತ್ತಿರುವುದರಿಂದ ಏಕದೇವ ವಿಶ್ವಾಸವನ್ನು ಸ್ಥಾಪಿಸಲು ನಿರ್ಮಿಸಲ್ಪಟ್ಟ ಭವನದ ಉದ್ದೇಶ ಪವಿತ್ರ ಪೈಗಂಬರರ(ಸ) ನಿಷ್ಠಾವಂತ ಸೇವಕನಿಂದ ನಿರ್ವಹಿಸಲ್ಪಡಬೇಕು. ಅವರು (ಎಂದರೆ ಮುಸ್ಲಿಮರು) ಈ ನಿಷ್ಠಾವಂತ ಸೇವಕನನ್ನು ಅಂಗೀಕರಿಸಬೇಕು. ಆ ಮೂಲಕ ಅವರು ಈ ಶಾಂತಿಯ ನಿಲಯದಿಂದ ಲಾಭವನ್ನು ಪಡೆಯಬಹುದು. ಹಾಗೆ ಮಾಡದಿದ್ದರೆ ಅವರು ಸಹ ಅವರ ಸುತ್ತುಮುತ್ತಲಿನ ಇತರ ಜನಾಂಗಗಳ ಹಾಗೆ ನಾಶವಾಗುವರು.

ಶಾಂತಿ ನಿಲಯವಾಗಿರುವ ನಗರದ ಸ್ಥಾನ ಸದಾಕಾಲ ಹಾಗೆಯೇ ನೆಲೆನಿಲ್ಲುವುದು. ಆದರೆ ನಿರಂಕುಶ ಪ್ರಭುಗಳಿಗೂ ಆಧ್ಯಾತ್ಮಿಕ ಸ್ಥಾನ ರಹಿತ ನಾಯಕರಿಗೂ ಬದಲಾಗಿ ದೇವಭಕ್ತರಾದ ನಾಯಕರು ಅಲ್ಲಿ ಅಧಿಕಾರ ಪಡೆಯುವಂತೆ ಅಲ್ಲಾಹನು ಮಾಡುವನು. ಆಧ್ಯಾತ್ಮಿಕತೆ ಇಲ್ಲದೆ ನೈಜ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗದು. ಆದುದರಿಂದ ಎರಡು ಪುಣ್ಯ ಕ್ಷೇತ್ರಗಳ (ಮಕ್ಕ ಮತ್ತು ಮದೀನದ) ಸೇವಕರು ವಾಸ್ತವಿಕ ಆಧ್ಯಾತ್ಮಿಕತೆಯನ್ನು ಹುಡುಕುವುದು ಶಾಂತಿ ಸ್ಥಾಪನೆಗೆ ಆವಶ್ಯಕವಾಗಿದೆ. ಅದನ್ನು ಗಳಿಸಲು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯಸಂಧನಾದ ದಾಸನಿಗೆ ವಿಧೇಯರಾಗುವುದು ಆವಶ್ಯಕವಾಗಿದೆ. ಸತ್ಯ ಮತ್ತು ಶಾಂತಿಯ ಇಸ್ಲಾಮ್ ಧರ್ಮ ತತ್ವಗಳು ಮುಸ್ಲಿಮರೂ ಮುಸ್ಲಿಮೇತರರೂ ಒಳಗೊಂಡ ಸಂಪೂರ್ಣ ಲೋಕಕ್ಕೆ ಮನವರಿಕೆಯಾಗಲು ಇದು ಆವಶ್ಯಕವಾಗಿದೆ.

ಇಸ್ಲಾಮ್ ಧರ್ಮವನ್ನು ತಿರಸ್ಕರಿಸಿದವರ ಪ್ರತಿಕ್ರಿಯೆ ಹೇಗಿತ್ತೆಂದು ಪವಿತ್ರ ಖುರ್‌ಆನ್ ವಿವರಿಸಿದೆ: **[illegible]ವ ಖಾಲೂ ಇನ್ ನತ್ತಬಿಯಿಲ್ ಹುದಾ ಮಅಕ ನುತಖತ್ತಫ್ ಮಿನ್ ಅರ್‌ಝಿನಾ** – "ಅವರು ಹೇಳುತ್ತಾರೆ: 'ನಿನ್ನೊಂದಿಗೆ (ನೀನು ನಿರ್ದೇಶಿಸುವ) ಮಾರ್ಗದರ್ಶನವನ್ನು ನಾವು ಸ್ವೀಕರಿಸಿದರೆ ನಾವು ನಮ್ಮ ಊರಿನಿಂದ ಕಿತ್ತೆಸೆಯಲ್ಪಡುವೆವು.' (28:58)

ಇಸ್ಲಾಮ್ ಧರ್ಮ ಅತಿಕ್ರಮಣವನ್ನೂ ಬಲಾತ್ಕಾರವನ್ನೂ ತೀವ್ರವಾದವನ್ನೂ ಪ್ರತಿಪಾದಿಸುವ ಧರ್ಮವಾಗಿದ್ದರೆ ಮಕ್ಕದ ಜನರು ಪವಿತ್ರ ಪೈಗಂಬರರೊಂದಿಗೆ(ಸ) "ಊರಿನಿಂದ ನಾವು ಕಿತ್ತೆಸೆಯಲ್ಪಡುವೆವು" ಎಂದು ಹೇಳುತ್ತಿರಲಿಲ್ಲ. ಅನ್ಯಾಯಗಳನ್ನು ಅತಿಕ್ರಮಣಗಳನ್ನು ಮಾಡುವವರು ಮುಸ್ಲಿಮರಲ್ಲ. ಮುಸ್ಲಿಮೇತರರಾದ ಸರಕಾರಗಳೂ ದೊರೆಗಳೂ ಅನ್ಯಾಯದಿಂದಲೂ ಅತಿಕ್ರಮಣದಿಂದಲೂ ವರ್ತಿಸುತ್ತಾರೆ. ಆ ಅತಿಕ್ರಮಣಕಾರಿಗಳ ಭಯದಿಂದ ಜನರು ಇಸ್ಲಾಮನ್ನು ಅಂಗೀಕರಿಸಲು ಇಚ್ಛಿಸುವುದಿಲ್ಲ. ಇಸ್ಲಾಮಿನ ತತ್ವಗಳು ಅಹಿಂಸಾತ್ಮಕವೆಂದು ಮುಸ್ಲಿಮೇತರರು ಸಹ ಅಂಗೀಕರಿಸಿದರು. ಆದುದರಿಂದ ಅವರು ಹೇಳಿದರು– ನಾವು ಮುಸ್ಲಿಮರಾಗಿ ಇಸ್ಲಾಮ್ ಧರ್ಮ ತತ್ವಗಳ ಪ್ರಕಾರ ವರ್ತಿಸಲು ತೊಡಗಿದರೆ ನಮ್ಮನ್ನು ಅನ್ಯರು ಸ್ವಾಧೀನ ಪಡಿಸಿ ನಮ್ಮನ್ನು ನಮ್ಮ ದೇಶದಿಂದ ಗಡಿಪಾರು ಮಾಡುವರೆಂದು. ಇದು ಸ್ಪಷ್ಟಪಡಿಸುವುದೇನೆಂದರೆ ಪವಿತ್ರ ಪೈಗಂಬರರ(ಸ) ಕಾಲದಲ್ಲಿ ಸಹ ಮುಸ್ಲಿಮೇತರರು ಇಸ್ಲಾಮ್ ಅಹಿಂಸೆಯನ್ನು ಬೋಧಿಸುತ್ತಿದೆ ಎಂದು ಒಪ್ಪಿಕೊಂಡಿದ್ದರು. ಆದುದರಿಂದ ಅವರು ಪವಿತ್ರ ಪೈಗಂಬರರೊಂದಿಗೆ(ಸ) ಹೇಳಿದರು: "ನೀವು ಶಾಂತಿಯನ್ನೂ ಸೌಹಾರ್ದವನ್ನೂ ಹರಡಲು ನಮಗೆ ಕಲಿಸುತ್ತಿರುವಿರಿ. ಆದರೆ ನಾವು ಈ ಮಾರ್ಗವನ್ನು ಅನುಸರಿಸಿದರೆ ನಮ್ಮ ಸುತ್ತುಮುತ್ತಲಿನ ಜನಾಂಗಗಳು ನಮ್ಮನ್ನು ನಾಶಮಾಡುವರು."

ಇಂದಿನ ಕಾಲದಲ್ಲಿ ಆಯುಧಗಳನ್ನು ಸಂಗ್ರಹಿಸುವ ಜಾಗತಿಕ ಸ್ಪರ್ಧೆ ಮಹತ್ವಪೂರ್ಣವಾಗಿ ಜಾರಿಯಲ್ಲಿವೆ. ಅಣು ಆಯುಧಗಳು ಅನ್ಯ ದೇಶಗಳ ಆಕ್ರಮಣಗಳನ್ನು ತಡೆಗಟ್ಟುತ್ತವೆ ಎಂದು ಪ್ರತಿಪಾದಿಸಿ ಅಣುಬಾಂಬುಗಳನ್ನು ಉತ್ಪಾದಿಸಲಾಗುತ್ತಿವೆ. ಈಗ ಅಂದಾಜು ಒಂಬತ್ತು ಅಥವಾ ಹತ್ತು ದೇಶಗಳು ಅಣು ಆಯುಧಗಳನ್ನು ಹೊಂದಿವೆ. ಪಾಕಿಸ್ಥಾನದ ಹೊರತು ಬೇರೆ ಯಾವ ಮುಸ್ಲಿಮ್ ದೇಶವೂ ಅಣು ಆಯುಧಗಳನ್ನು ಹೊಂದಿಲ್ಲ. ಪಾಕಿಸ್ಥಾನದ ಅಣು ಆಯುಧಗಳ ಸಾಮರ್ಥ್ಯ ಎಷ್ಟೆಂದು ಕೂಡ ತಿಳಿದಿಲ್ಲ.

ಮುಂದೆ ನಡೆಯಲಿರುವ ಯುದ್ಧಗಳಲ್ಲಿ ಅತ್ಯಂತ ಅಪಾಯಕರವಾಗುವುದು ಈ ಅಣು ಆಯುಧಗಳಾಗಿವೆ. ಜಗತ್ತಿನಲ್ಲಿ ಅತ್ಯಾಧುನಿಕ ಆಯುಧಗಳು ಮುಸ್ಲಿಮೇತರರ ದೇಶಗಳಲ್ಲಿ ಮಾತ್ರ ಇವೆ ಮತ್ತು ಅವುಗಳು ಅಲ್ಲಿಯೇ ನಿರ್ಮಿಸಲ್ಪಡುತ್ತವೆ. ಮುಸ್ಲಿಮ್ ದೇಶಗಳು ಈ ಆಯುಧಗಳನ್ನು ಬಳಸುವುದು ಈ ಮುಸ್ಲಿಮೇತರ ದೇಶಗಳಿಂದ ಪಡೆದಾಗಿದೆ. ಇದೇ ರೀತಿ ಭೀಕರವಾದಿ ಸಂಘಟನೆಗಳು ಇಸ್ಲಾಮಿನ ಹೆಸರಿನಲ್ಲಿ ಕ್ರೂರ ಕೃತ್ಯಗಳನ್ನು ನಡೆಸುತ್ತಾ ಇರುವುದು ಆಯುಧಗಳನ್ನು ಮುಸ್ಲಿಮೇತರರ ದೇಶಗಳಿಂದ ಪಡೆದಾಗಿದೆ. ಮುಸ್ಲಿಮೇತರ ದೇಶಗಳು ಆಯುಧ ವ್ಯಾಪಾರದಲ್ಲಿ ಲಾಭ ಪಡೆಯಲು ಈ ಆಯುಧಗಳನ್ನು ಮಾರಾಟ ಮಾಡುತ್ತಿವೆ. ಇಸ್ಲಾಮ್ ತೀವ್ರವಾದಿ ಧರ್ಮವಾಗಿದೆ; ಅದು ಹಿಂಸೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಆಕ್ಷೇಪಿಸುವವರ ಇಂದಿನ ಸ್ಥಿತಿ ಹೀಗಿದೆ. ಆಯುಧ ನಿರ್ಮಾಣದ ಸ್ಪರ್ಧೆಯಲ್ಲಿ ಮುಂದೆ ಸಾಗುವವರು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ವರ್ತಿಸುವವರಿಗೆ ಆಯುಧಗಳನ್ನು ಪೂರೈಕೆ ಮಾಡುವವರಾಗಿದ್ದಾರೆ. ಜಾಗತಿಕ ಶಾಂತಿಗೆ ಇಸ್ಲಾಮ್ ಬೆದರಿಕೆ ಒಡ್ಡುತ್ತಿದೆ ಎಂದು ಆಪಾದಿಸುವವರಲ್ಲಿ ಮುಂಚೂಣಿಯಲ್ಲಿರುವ ದೇಶಗಳು ಎಂತಹವು ಎಂದರೆ ಅವುಗಳಿಂದಲೇ ಆಯುಧಗಳು ಹಂಚಲ್ಪಡುತ್ತಿವೆ ಮತ್ತು ಅವು ಶಾಂತಿಯನ್ನು ಕೆಡಿಸುವವುಗಳಾಗಿವೆ.

ಇಸ್ಲಾಮ್ ಧರ್ಮ ತತ್ವಗಳು ಎಷ್ಟು ಶಾಂತಿಯುತವಾಗಿವೆ ಎಂದರೆ ಇಂದಿನ ಕಾಲದಲ್ಲಿ ಸಹ ಜನರು ಯೋಚಿಸುತ್ತಾರೆ – ನಾವು ಆ ತತ್ವಗಳನ್ನು ಅನುಷ್ಠಾನಕ್ಕೆ ತಂದು ಶಾಂತಿ ಮತ್ತು ಸಂರಕ್ಷಣೆಯ ಸಂದೇಶ ನೀಡಿದರೆ ನಾವು ಕೊಲ್ಲಲ್ಪಡುವೆವು ಎಂದು. ಇಂದಿನ ಕಾಲದಲ್ಲಿ ತಾವು ಮುಸ್ಲಿಮರೆಂದು ಹೇಳಿಕೊಳ್ಳುವವರು ಇಸ್ಲಾಮನ್ನು ಅಪಮಾನಿಸುವ ಮತ್ತು ದೂಷಿಸುವ ದೇಶಗಳಿಂದ ಆಯುಧಗಳನ್ನು ಪಡೆಯುತ್ತಿರುವುದು ದುರ್ಭಾಗ್ಯಕರವಾಗಿದೆ. ಅನಂತರ ಅವರು ಅವುಗಳನ್ನು ಸಹಧರ್ಮೀಯರಾದ ಮುಸ್ಲಿಮರ ವಿರುದ್ಧವೂ ಅನ್ಯರ ವಿರುದ್ಧವೂ ಬಳಸುತ್ತಾರೆ. ಅದರ

ಪರಿಣಾಮವಾಗಿ ಅವರು ಜಾಗತಿಕ ಶಾಂತಿಗೆ ಭಂಗವುಂಟು ಮಾಡುತ್ತಿದ್ದಾರೆ.

ಕೆಲವು ದಶಕಗಳ ಹಿಂದೆ ಒಬ್ಬ ಸತ್ಯನಿಷ್ಠ ಮುಸ್ಲಿಮೇತರ ವಿದ್ವಾಂಸರು ಒಂದು ಪುಸ್ತಕ ಬರೆದಿದ್ದರು. ಕೆಲವು ಮುಸ್ಲಿಮೇತರ ದೇಶಗಳ ನೈಜ ಸ್ವರೂಪವನ್ನು ಬಹಿರಂಗಪಡಿಸಿ ಅವರು ಬರೆದರು: ಮುಹಮ್ಮದ್ ಪೈಗಂಬರರು(ಸ) ತನ್ನ ಜೀವಿತದಲ್ಲಿ ಯುದ್ಧಗಳಲ್ಲಿ ಕೊಂದವರನ್ನು ಅಂದಾಜಿಸುವುದಾದರೆ, ಅತ್ಯಂತ ಕಠಿಣ ಶತ್ರುಗಳಾದವರನ್ನು ಅವರು ಕೊಂದ ಗರಿಷ್ಠ ಸಂಖ್ಯೆ ಕೆಲವು ನೂರುಗಳಷ್ಟಿರಬಹುದು. ಆದರೆ ಕೇವಲ ಒಂದು ಜಾಗತಿಕ ಮಹಾಯುದ್ಧದಲ್ಲಿ ಲಕ್ಷಗಟ್ಟಲೆ ಜನರು ಕೊಲ್ಲಲ್ಪಟ್ಟಿದ್ದಾರೆ. ಹೀಗಿದ್ದರೂ ಪವಿತ್ರ ಪ್ರವಾದಿಯನ್ನು(ಸ) ಲೋಕದಲ್ಲಿ ಸಂಘರ್ಷವನ್ನು ಹರಡುವವರನ್ನಾಗಿ ಚಿತ್ರಿಸಲಾಗುತ್ತಿದೆ. ಲೋಕದಲ್ಲಿ ಶಾಂತಿಯನ್ನೂ ಸೌಹಾರ್ದವನ್ನೂ ಕೆಡಿಸಿದುದು ಅವರು ಉಪದೇಶಿಸಿದ ಧರ್ಮವೆಂದೂ ಆ ಧರ್ಮ ತೀವ್ರವಾದವನ್ನೂ ಹಿಂಸೆಯನ್ನೂ ಪ್ರೋತ್ಸಾಹಿಸುತ್ತದೆ ಎಂದೂ ಆಕ್ಷೇಪಿಸಲಾಗುತ್ತಿದೆ.

ಇಸ್ಲಾಮ್ ಧರ್ಮ ಶಾಂತಿ ಪ್ರತಿಪಾದಕ ತತ್ವಗಳನ್ನೊಳಗೊಂಡಿದೆ ಎಂಬುದನ್ನು ಅರಬಿ ಗೋತ್ರಗಳು ಪವಿತ್ರ ಪೈಗಂಬರರಿಗೆ(ಸ) ನೀಡಿದ ಉತ್ತರದಿಂದ ಸಾಬೀತಾಗುತ್ತದೆ. ಅವರು ಹೀಗೆ ಭಯಪಟ್ಟರು: ನಾವು ಇಸ್ಲಾಮ್ ಧರ್ಮ ತತ್ವಗಳನ್ನು ಅನುಷ್ಠಾನಕ್ಕೆ ತಂದರೆ ಶಾಂತಿ ಮತ್ತು ಸೌಹಾರ್ದವನ್ನು ಪ್ರತಿಪಾದಿಸುವ ಅದರ ತತ್ವಗಳು ತಮಗೆ ವಿನಾಶಕರವಾಗುವುವು; ಏಕೆಂದರೆ ಇಸ್ಲಾಮ್ ಅನಾವಶ್ಯಕ ಯುದ್ಧಗಳಿಂದ ದೂರಸರಿಯಲು ಉಪದೇಶಿಸುತ್ತಿದೆ. ಆ ಗೋತ್ರಗಳು ಹೀಗೆ ಭಾವಿಸಿದರು: ನಾವು ಇಸ್ಲಾಮ್ ಧರ್ಮ ತತ್ವಗಳನ್ನು ನಂಬಿ ಅನುಷ್ಠಾನಕ್ಕೆ ತಂದರೆ ನಿರಂಕುಶರಾದ ಅನ್ಯ ಜನರು ತಮ್ಮನ್ನು ಹಿಂಸಾಚಾರಕ್ಕೆ ಗುರಿಪಡಿಸುವರು; ಏಕೆಂದರೆ ಅನ್ಯಾಯದಿಂದ ವರ್ತಿಸುವ ಜನರು ಅನ್ಯರನ್ನು ಯುದ್ಧಕ್ಕೆ ಗುರಿಪಡಿಸುತ್ತಾರೆ. ಅವರು ತಮ್ಮ ಜೀವಗಳಿಗೆ ಹಾನಿಯುಂಟುಮಾಡಲು ಇಚ್ಛಿಸಲಿಲ್ಲ ಮತ್ತು ಹಿಂದೆ ಇದ್ದ ಸ್ಥಿತಿಯಲ್ಲಿಯೇ ಮುಂದುವರಿದರು. ಮುಸ್ಲಿಮರೊಂದಿಗೆ ಸೇರಿಕೊಂಡರೆ ತಾವು ಅನ್ಯಾಯಭರಿತ ಆಕ್ರಮಣಗಳಿಗೆ ಅನ್ಯರಿಂದ ಗುರಿಪಡಿಸಲ್ಪಡುವೆವು ಎಂದು ಅವರು ಯೋಚಿಸಿದರು.

ನಾವು ಚರಿತ್ರೆಯ ಕಡೆಗೆ ನೋಡುವುದಾದರೆ ಅರೇಬಿಯಾ ದೇಶದಲ್ಲಿದ್ದ ಅವ್ಯವಸ್ಥೆಯನ್ನು ಇಸ್ಲಾಮ್ ನಿವಾರಿಸಿದುದಾಗಿ ನಾವು ಸ್ಪಷ್ಟವಾಗಿ ಕಾಣುತ್ತೇವೆ. ಇಸ್ಲಾಮ್ ಧರ್ಮವನ್ನು ಅವಲಂಬಿಸಿದರೆ ತಾವು ಕಷ್ಟಕ್ಕೊಳಗಾಗುವೆವು ಎಂಬ ಅರಬಿ ಗೋತ್ರಗಳ ಪ್ರತಿಕ್ರಿಯೆ ಅವರಿಗೆ ದೇವನ ಅನುಗ್ರಹಗಳ ಬಗ್ಗೆ ಅವರಿಗಿದ್ದ ಅಜ್ಞಾನವನ್ನು ಪ್ರತಿಬಿಂಬಿಸುತ್ತದೆ. ಏಕೆಂದರೆ ಅವರಿಗೆ ವಿಶ್ವಾಸವಿರಲಿಲ್ಲ. ಅವರು ಕೇವಲ ಬಾಹ್ಯ ಸ್ಥಿತಿಯನ್ನು ಮಾತ್ರ ಪರಿಗಣಿಸಿದ್ದರು. ತಮ್ಮ ಸುತ್ತಲೂ ಕೆಡುಕು ಮತ್ತು ಅಸ್ತವ್ಯಸ್ತತೆ ಹರಡಿರುವಾಗ ಇಸ್ಲಾಮ್ ಧರ್ಮದ ಶಾಂತಮಯ ತತ್ವಗಳನ್ನು ಅನುಷ್ಠಾನಕ್ಕೆ ತರುವುದು ಮೃತ್ಯುವಿಗೆ ಸಮವಾಗುವುದೆಂದು ಅವರು ಭಾವಿಸುತ್ತಿದ್ದರು. ಆದರೆ ಮಕ್ಕವನ್ನು ಜಯಿಸಿದ ನಂತರ ಇಸ್ಲಾಮ್ ಅಭಿವೃದ್ಧಿಯನ್ನು ಗಳಿಸಿತು. ಮಕ್ಕದ ಜನರ ಮತ್ತು ಮುಸ್ಲಿಮರ ಮಧ್ಯೆ ಶಾಂತಿಯ ಒಪ್ಪಂದವಾದ ಬಗ್ಗೆ ಸುತ್ತುಮುತ್ತಲಿನ ಗೋತ್ರಗಳು ತಿಳಿದಾಗ ಅವರು ಮನವರಿಕೆ ಮಾಡಿಕೊಂಡರು – ಇಸ್ಲಾಮ್ ಅವರನ್ನು ಲೌಕಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಜಯಶಾಲಿಯನ್ನಾಗಿ ಮಾಡುವುದೆಂದು. ಕೆಲವರು ದೃಷ್ಟಾಂತಗಳನ್ನು ಕಂಡು ಇಸ್ಲಾಮ್ ಧರ್ಮವಲಂಬಿಗಳಾದರು. ಯಾರೂ ಅವರನ್ನು ಬಲಾತ್ಕಾರ ಮಾಡಲಿಲ್ಲ. ಆ ಜನರು ಸಂಪತ್ತನ್ನು ಗಳಿಸುವ ಹಂಬಲದಲ್ಲಿದ್ದಾಗ ಅವರು ಇಸ್ಲಾಮನ್ನು ತಿರಸ್ಕರಿಸುತ್ತಿದ್ದರು. ಅವರನ್ನು ಬಲಾತ್ಕಾರಕ್ಕೆ ಗುರಿಪಡಿಸಿ ಮುಸ್ಲಿಮರನ್ನಾಗಿ ಮಾಡಿದ್ದರೆ ಅಲ್ಲಾಹನು ಪವಿತ್ರ ಪೈಗಂಬರರ(ಸ) ಬಗ್ಗೆ ಹೀಗೆ ಹೇಳುತಿರಲಿಲ್ಲ: **[illegible] ವ ಖೀಲಿಹೀ ಯಾರಬ್ಬಿ ಇನ್ನ ಹಾಉಲಾಯಿ ಖೌಮುನ್ ಲಾ ಯೂಮಿನೂನ್ ಫಸ್‌ಫಹ್ ಅನ್‌ಹುಮ್ ವ ಖುಲ್ ಸಲಾಮುನ್ ಫಸೌಫ ಯಅ್‌ಲಮೂನ್**. ಪೈಗಂಬರ್ ಹೇಳಿದ ಸಂದರ್ಭ ನೆನಪಿಸಿರಿ: "ಹೇ ನನ್ನ ಪ್ರಭೂ, ಈ ಜನರು ಸತ್ಯವನ್ನು ನಂಬುವುದಿಲ್ಲ." (ಸರ್ವಶಕ್ತನಾದ ಅಲ್ಲಾಹನು ಹೇಳಿದನು:) "ಅವರಿಂದ ವಿಮುಖನಾಗು ಮತ್ತು 'ಶಾಂತಿ' ಎಂದು ಮಾತ್ರ ಹೇಳು ಅವರು ಬೇಗನೆ ಮನವರಿಕೆ ಮಾಡುವರು." (43:89,90).

ಪವಿತ್ರ ಖುರ್‌ಆನಿನ ಈ ವಚನಗಳು ಹೀಗೆ ಸೂಚಿಸುತ್ತವೆ: ಪವಿತ್ರ ಪೈಗಂಬರರು(ಸ) ಅಲ್ಲಾಹನನ್ನು ಸಂಬೋಧಿಸಿ, ತಾನು ಅಲ್ಲಾಹನಿಂದ ತಂದ ಶಾಂತಿ ಮತ್ತು ಸಂರಕ್ಷಣೆಯ ಉಪದೇಶವನ್ನು ಜನರು ಮನವರಿಕೆ ಮಾಡುವುದಿಲ್ಲ; ಜನರು ಅವುಗಳನ್ನು ನಂಬುವುದಿಲ್ಲ; ಅವರು ತಮ್ಮ ಜಗಳಗಳಲ್ಲಿಯೂ ಯುದ್ಧಗಳಲ್ಲಿಯೂ ಮಗ್ನರಾಗಿ ಶಾಂತಿಗೆ ಭಂಗವುಂಟು ಮಾಡುತ್ತಾರೆ ಎಂದು ಹೇಳಿದರು. ಪವಿತ್ರ ಪೈಗಂಬರರು(ಸ) ಹದಿಮೂರು ವರ್ಷಗಳ ಕಾಲ ಹಿಂಸಾಚಾರಗಳಿಗೆ ಗುರಿಯಾಗಿದ್ದರು. ಪವಿತ್ರ ಪೈಗಂಬರರು(ಸ) ಮದೀನಕ್ಕೆ ಹೋದ ನಂತರ ಸಹ ಮಕ್ಕದ ಸೈನ್ಯ ಮದೀನವನ್ನು ಆಕ್ರಮಿಸಲು ಪ್ರಯತ್ನಿಸಿತು.

ಪವಿತ್ರ ಪೈಗಂಬರರು(ಸ) ಹೇಳುತ್ತಾರೆ: ಯಾರಿಗೆ ಶಾಂತಿಯ ಸಂದೇಶವನ್ನು ನಾನು ತಂದೆನೋ ಅವರು ನನ್ನನ್ನು ಶಾಂತಿಯಿಂದ ಜೀವಿಸಲು ಬಿಡುವುದಿಲ್ಲ. ಅವರು ದೌರ್ಜನ್ಯದಿಂದಲೂ ಅನ್ಯಾಯದಿಂದಲೂ ವರ್ತಿಸುತ್ತಿದ್ದಾರೆ. ಪವಿತ್ರ ಪೈಗಂಬರರು(ಸ) ವಿರೋಧಿಗಳೊಂದಿಗೆ ಅವರು ವರ್ತಿಸುವ ರೀತಿಯಲ್ಲಿ ವರ್ತಿಸಿ ಯುದ್ಧ ಮಾಡಬೇಕೆಂದಾಗಲಿ ಅವರೊಂದಿಗೆ ಕಟುವಾಗಿ ವರ್ತಿಸಬೇಕೆಂದಾಗಲಿ ಸರ್ವಶಕ್ತನಾದ ಅಲ್ಲಾಹನು ಹೇಳಲಿಲ್ಲ. ಸರ್ವಶಕ್ತನಾದ ಅಲ್ಲಾಹನು ಹೇಳಿದನು: **ಫಸ್‌ಫಹ್ ಅನ್‌ಹುಮ್**.

"ಅವರ ಕಡೆಗೆ ಕ್ಷಮೆಯೊಂದಿಗೆ ತಿರುಗು." ಏಕೆಂದರೆ ಅವರು ಈ ಉಪದೇಶಗಳ ಮಹತ್ವವನ್ನೂ ಪ್ರಾಮುಖ್ಯತೆಯನ್ನೂ ಅರಿತುಕೊಂಡಿಲ್ಲ. ಆದುದರಿಂದ ಅವರು ಆ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಅವರಿಗೆ "ಶಾಂತಿ" ಎಂದು ಅಭಿವಾದಿಸಲು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಪೈಗಂಬರರಿಗೆ(ಸ) ಉಪದೇಶ ನೀಡುತ್ತಾನೆ. ಪವಿತ್ರ ಪೈಗಂಬರರು(ಸ) ಶಾಂತಿಯ ಸಂದೇಶದೊಂದಿಗೆ ಆಗಮಿಸಿದ ಕಾರಣ ಅವರು ಶಾಂತಿಯ ಸಂದೇಶ ನೀಡುತ್ತಾ ಮುಂದುವರಿದರು. ಪವಿತ್ರ ಪೈಗಂಬರರು(ಸ) ಶಾಂತಿ ಮತ್ತು ಸಂರಕ್ಷಣೆಯ ಸಂದೇಶ ತಂದಿರುವರೆಂದು ಲೋಕ ಬೇಗನೆ ಅರಿತುಕೊಂಡಿತು. ಸ್ವಲ್ಪಕಾಲದ ನಂತರ ಅರಬ್ ಲೋಕ ಸ್ವತಃ ಅದಕ್ಕೆ ಸಾಕ್ಷಿಯಾಯಿತು.

ಶಾಂತಿ ಮತ್ತು ಸಂರಕ್ಷಣೆಯ ಸಂದೇಶ ಪವಿತ್ರ ಪೈಗಂಬರರನ್ನು(ಸ) ನಂಬಿದವರಿಗೆ ಮಾತ್ರ ಅನ್ವಯಿಸುವುದಾಗಿರಲಿಲ್ಲ. ಅವರನ್ನು ನಂಬದವರಿಗೂ ಅದು ಅನ್ವಯಿಸುತ್ತಿತ್ತು.

ಮುಸ್ಲಿಮೇತರರು ಹೀಗೆ ಪ್ರಶ್ನಿಸುತ್ತಾರೆ: ಪೈಗಂಬರರು ಶಾಂತಿಯ ಸಂದೇಶ ನೀಡಲು ಕಲಿಸಿರುವರಾದರೆ ಯುದ್ಧಗಳು ಸಂಭವಿಸುದುದಾದರೂ ಏಕೆ? ಇದಕ್ಕೆ ಉತ್ತರ ಹೀಗೆ: ಅವಿಶ್ವಾಸಿಗಳು ಇಸ್ಲಾಮನ್ನು ಸಂಪೂರ್ಣವಾಗಿ ಅಳಿಸಿಬಿಡಲು ಮದೀನವನ್ನು ಆಕ್ರಮಣ ಮಾಡಲು ಮುಂದಾದಾಗ ಸರ್ವಶಕ್ತನಾದ ಅಲ್ಲಾಹನು ಹೇಳಿದನು: [illegible] ಉಧಿನ **ಲಿಲ್ಲಧೀನ ಯುಖಾತಲೂನ ಬಿ ಅನ್ನಹುಮ್ ಝುಲಿಮೂ –** "ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. (22:40).

ಅವರು ಆಕ್ರಮಣಕ್ಕೊಳಗಾದುದು ಅವರು ಸರ್ವಶಕ್ತನಾದ ಅಲ್ಲಾಹನನ್ನು ತಮ್ಮ ಪ್ರಭುವೆಂದು ಘೋಷಿಸಿದ ಕಾರಣದಿಂದಾಗಿದೆ. ಅವರನ್ನು ಅವರ ಮನೆಗಳಿಂದ ಹೊರಹಾಕಲಾಯಿತು.

ಪವಿತ್ರ ಖುರ್‌ಆನಿನಲ್ಲಿ ಮೇಲಿನ ವಚನದ ನಂತರ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ: ಆಕ್ರಮಣಗಾರರನ್ನು ಶಕ್ತಿಯುತವಾಗಿ ತಡೆಗಟ್ಟದಿದ್ದಲ್ಲಿ ಧರ್ಮವನ್ನು ವಿರೋಧಿಸುವವರು ಮಿತಿಮೀರಿ ವರ್ತಿಸಿ ಚರ್ಚ್‌ಗಳನ್ನು, ಯಹೂದಿ ದೇವಾಲಯಗಳನ್ನು ಮತ್ತು ಇತರ ಧರ್ಮಗಳ ಆರಾಧಾನಾಲಯಗಳನ್ನೂ ಮಸ್‌ಜಿದ್‌ಗಳನ್ನೂ ನಾಶಪಡಿಸುತ್ತಿದ್ದರು. ಆದುದರಿಂದ ಯುದ್ಧ ಮಾಡಲು ಅನುಮತಿ ನೀಡಿದುದು ಶಾಂತಿಯನ್ನು ಸ್ಥಾಪಿಸಲಿಕ್ಕಾಗಿದೆ. ಜಿಹಾದ್ ಎಂಬ ಶಬ್ದದ ಅರ್ಥ ಕ್ರೂರವಾಗಿ ವರ್ತಿಸುವುದು ಎಂದಾಗಲಿ, ಅನ್ಯಾಯ ಮಾಡುವುದಾಗಲಿ ಅಲ್ಲ. ವಾಗ್ದತ್ತ ಮಸೀಹರು ನಮಗೆ ಈ ವಿಷಯಕ್ಕೆ ಸಂಬಂಧಿಸಿ ಎಲ್ಲ ವಿಷಯಗಳ ವಿವರಣೆ ನೀಡಿದುದು ನಮ್ಮ ಭಾಗ್ಯವಾಗಿದೆ. ಪವಿತ್ರ ಖುರ್‌ಆನಿನ ಈ ವಚನಗಳನ್ನು ವ್ಯಾಖ್ಯಾನಿಸುತ್ತಾ ವಾಗ್ದತ್ತ ಮಸೀಹರು ಹೀಗೆ ಹೇಳಿದರು:

"ಇಸ್ಲಾಮ್ ಖಡ್ಗವನ್ನು ಮೊದಲು ಎತ್ತಲಿಲ್ಲ. ಆಯುಧ ಎತ್ತಿಕೊಳ್ಳಲು ಇಸ್ಲಾಮ್ ಅನುಮತಿ ನೀಡಿದುದು ವಿಶಿಷ್ಟ ಸಂದರ್ಭದಲ್ಲಾಗಿದೆ ಮತ್ತು ಶಾಂತಿಯನ್ನು ಸ್ಥಾಪಿಸಲಿಕ್ಕೋಸ್ಕರವಾಗಿದೆ. ಮಹಿಳೆಯರನ್ನೂ ಮಕ್ಕಳನ್ನೂ ಸನ್ಯಾಸಿಗಳನ್ನೂ ಕೊಲ್ಲಲು ಇಸ್ಲಾಮ್ ಎಂದೂ ಅನುಮತಿ ನೀಡಲಿಲ್ಲ. ಇಸ್ಲಾಮಿಗೆ ವಿರುದ್ಧವಾಗಿ ಖಡ್ಗಯೆತ್ತಿದವರು ಮಾತ್ರ ಖಡ್ಗದಿಂದ ಕೊಲ್ಲಲ್ಪಟ್ಟರು.

"ತೌರಾತ್‌ನಲ್ಲಿ ಸಹ ಖಡ್ಗವನ್ನು ಬಳಸಿ ಹೋರಾಡುವ ಬಗ್ಗೆ ಉಪದೇಶಗಳಿವೆ. ಅದರ ಪರಿಣಾಮವಾಗಿ ಅಸಂಖ್ಯಾತ ಮಹಿಳೆಯರೂ ಮಕ್ಕಳೂ ಕೊಲ್ಲಲ್ಪಟ್ಟಿದ್ದರು. ಅಂತಹ ಕ್ರೂರ, ನಿರ್ದಯ ಯುದ್ಧಗಳು ದೇವನ ದೃಷ್ಟಿಯಲ್ಲಿ ಅಂಗೀಕಾರಾರ್ಹವಾಗಿದ್ದರೆ ಮತ್ತು ಅವು ಅವನ ಆಜ್ಞೆ ಪ್ರಕಾರವೇ ನಡೆದಿದ್ದರೆ ಆಕ್ರಮಕ್ಕೊಳಗಾದ ಪವಿತ್ರ ಪೈಗಂಬರರು(ಸ) ಶಾಂತಿ ಸ್ಥಾಪನೆಗೋಸ್ಕರ ಹೂಡಿದ ಯುದ್ಧಗಳು ಅದೇ ದೇವನ ದೃಷ್ಟಿಯಲ್ಲಿ ಅತೃಪ್ತಿಕರವಾಗಿದೆ ಎಂದು ಗಣಿಸುವುದು ಅನ್ಯಾಯಕರವಾಗಿದೆ." (ಹುಜ್ಜತುಲ್ ಇಸ್ಲಾಮ್ – ರೂಹಾನೀ ಖಝಾಇನ್: ಸಂಪುಟ 6 ಪುಟ 46–47).

ವಾಗ್ದತ್ತ ಮಸೀಹರು ಪುನಃ ಹೇಳುತ್ತಾರೆ: "ಕೆಲವು ಜನರನ್ನು ಬೇರೆ ಕೆಲವರ ಮೂಲಕ ಹಿಮ್ಮೆಟ್ಟಿಸುವ ಕ್ರಮವನ್ನು ಅಲ್ಲಾಹನು ಕೈಗೊಳ್ಳುತ್ತಾನೆ. ಅಲ್ಲಾಹನು ಹೀಗೆ ಮಾಡದಿರುತ್ತಿದ್ದರೆ ಕ್ರೌರ್ಯಕೃತ್ಯಗಳೂ ಅನ್ಯಾಯಗಳೂ ಎಷ್ಟು ವರ್ಧಿಸುತ್ತಿದ್ದವೆಂದರೆ ಏಕಾಂತದಲ್ಲಿ ಆರಾಧಿಸುವ ಸ್ಥಳಗಳೂ ಕ್ರೈಸ್ತರ ಚರ್ಚ್‌ಗಳೂ ಯಹೂದಿಯರ ದೇವಾಲಯಗಳೂ ಅಲ್ಲಾಹನ ಹೆಸರು ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುವ ಮುಸ್ಲಿಮರ ಮಸ್‌ಜಿದ್‌ಗಳೂ ಧ್ವಂಸಗೊಳಿಸಲ್ಪಡುತ್ತಿದ್ದುವು. ಅಲ್ಲಾಹನು ವಿವರಿಸುವುದೇನೆಂದರೆ ಅವನು ಮಾತ್ರ ಈ ಆರಾಧನಾಲಯಗಳ ಸಂರಕ್ಷಕನು. ಆದುದರಿಂದ ಮುಸ್ಲಿಮರಿಗೆ ಕಡ್ಡಾಯವಾಗಿರುವುದೇನೆಂದರೆ – ಉದಾಹರಣೆಗೆ, ಅವರು ಕ್ರೈಸ್ತ ಧರ್ಮೀಯರು ವಾಸಿಸುವ ಒಂದು ದೇಶವನ್ನು ಸ್ವಾಧೀನ ಪಡಿಸಿಕೊಂಡರೆ ಮುಸ್ಲಿಮರು ಕ್ರೈಸ್ತರ ಆರಾಧನಾಲಯಗಳಿಗೆ ಸಂಬಂಧಿಸಿ ಹಸ್ತಕ್ಷೇಪ ಮಾಡಬಾರದು ಮತ್ತು ಕ್ರೈಸ್ತರ ಚರ್ಚ್‌ಗಳನ್ನು ಧ್ವಂಸ ಮಾಡುವುದರಿಂದ ತಡೆಯಬೇಕು. ಹದೀಸು ಗ್ರಂಥಗಳಲ್ಲಿ ಇದಕ್ಕೆ ಸಂಬಂಧಿಸಿದ ಉಪದೇಶಗಳು ಅಡಕವಾಗಿವೆ. ಅವುಗಳಲ್ಲಿ ಹೀಗೆ ವರದಿಯಾಗಿದೆ: ಯಾವುದಾದರೂ ಸೇನಾಧಿಪತಿಯನ್ನು ಯುದ್ಧಕ್ಕೆ ಕಳುಹಿಸುವಾಗ ಹೀಗೆ ಆಜ್ಞಾಪಿಸಲಾಗುತ್ತಿತ್ತು– ಕ್ರೈಸ್ತರ ಆರಾಧನಾಲಯಗಳನ್ನೂ ಯಹೂದಿಯರ ದೇವಾಲಯಗಳನ್ನೂ ಏಕಾಂತದಲ್ಲಿ ಆರಾಧನೆ ನಡೆಸಲಾಗುತ್ತಿದ್ದ ಸನ್ಯಾಸಿ ಮಠಗಳನ್ನೂ ಆಕ್ರಮಿಸಬಾರದು.

ಇಸ್ಲಾಮ್ ಯಾವುದೇ ರೀತಿಯ ಅಸಹಿಷ್ಣುತೆಯಿಂದಲೂ ಪೂರ್ವಗ್ರಹದಿಂದಲೂ ಎಷ್ಟು ದೂರವಿದೆ ಎಂದೂ ಅದು ಕ್ರೈಸ್ತ ಚರ್ಚ್‌ಗಳಿಗೂ ಯಹೂದಿ ದೇವಾಲಯಗಳಿಗೂ ಮಸ್‌ಜಿದ್‌ಗಳಿಗೆ ನೀಡುವಷ್ಟು ಸಂರಕ್ಷಣೆಯನ್ನು ನೀಡುತ್ತವೆ ಎಂದೂ ಸ್ಪಷ್ಟವಾಗುತ್ತದೆ. ಇಸ್ಲಾಮನ್ನು ಅವತೀರ್ಣಗೊಳಿಸಿದ ಅಲ್ಲಾಹನು ಅದು ಶತ್ರುಗಳಿಂದ ನಾಶಗೊಳಿಸಲ್ಪಡುವುದನ್ನು ಇಷ್ಟಪಡಲಿಲ್ಲ. ಆದುದರಿಂದ ಅವನು ಮುಸ್ಲಿಮರಿಗೆ ಪ್ರತಿರೋಧನಾತ್ಮಕ ಯುದ್ಧ ಮಾಡಲು ಅನುಮತಿಸಿದನು ಮತ್ತು ಆತ್ಮ ರಕ್ಷಣೆಗೋಸ್ಕರ ಪ್ರತೀಕಾರ ಮಾಡಲು ಅನುಮತಿಸಿದನು." (ಚಶ್ಮಯೆ ಮಅರಿಫತ್ – ರೂಹಾನೀ ಖಝಾಇನ್: ಸಂಪುಟ 23 ಪುಟ 393–394).

ಇಸ್ಲಾಮ್ ಧರ್ಮ ಶಾಂತಿಗೆ ಭಂಗವುಂಟು ಮಾಡುತ್ತದೆ ಎಂದಾಗಲೀ ಅನ್ಯ ಧರ್ಮಗಳ ಆರಾಧನಾಲಯಗಳನ್ನು ಧ್ವಂಸ ಮಾಡುವುದನ್ನು ಅನುಮತಿಸುತ್ತದೆ ಎಂದಾಗಲೀ ಸಾಬೀತುಗೊಳಿಸುವುದು ಎಲ್ಲಿಯೂ ಸಾಧ್ಯವಿಲ್ಲ. ಹಾಗೆ ವಿಧ್ವಂಸಕ ಕೃತ್ಯ ನಡೆಸುವವರು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ವರ್ತಿಸುವವರಾಗಿದ್ದಾರೆ. ಸಿರಿಯಾದಲ್ಲಿ, ಇರಾಖ್‌ನಲ್ಲಿ ಅನ್ಯ ಧರ್ಮದವರ ಆರಾಧನಾಲಯಗಳನ್ನು ನಾಶಮಾಡಲಾಗಿದೆ. ಇಲ್ಲಿ ಎಂದರೆ ಪಶ್ಚಿಮದ ದೇಶಗಳಲ್ಲಿಯೂ ಚರ್ಚ್‌ಗಳನ್ನು ಸುಟ್ಟು ಹಾಕಲಾಗಿದೆ. ಇಂತಹ ಕೃತ್ಯ ನಡೆಸುವವರಿಗೆ ಪರಲೋಕದಲ್ಲಿ ನರಕದ ಶಿಕ್ಷೆ ಲಭಿಸಲಿದೆ. ಅವರು ಸ್ವರ್ಗದ ಯಾವುದೇ ಪಾರಿತೋಷಕಗಳಿಸಲಾರರು.

ಜಾಗತಿಕ ಶಾಂತಿಯನ್ನು ಕೆಡಿಸುವ ಇನ್ನೊಂದು ಘಟಕವೂ ಇದೆ. ಶಾಂತಿಯನ್ನು ಕೆಡಿಸುವ ಪ್ರತಿಯೊಂದು ಕೆಡುಕನ್ನು ಎದುರಿಸಲು ಇಸ್ಲಾಮ್ ಹೇಳುತ್ತಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: [illegible] **ಅಲ್‌ಫಿತ್‌ನತು ಅಶದ್ದು ಮಿನಲ್ ಖತ್‌ಲ್** – "ಫಿತ್ನ (ಪಿತೂರಿ, ಗಲಭೆ) ಕೊಲೆಗಿಂತ ಕಠಿಣ (ಕೆಡುಕು ಮಾಡುತ್ತದೆ)." (2:192). ನಿಸ್ಸಂಶಯವಾಗಿಯೂ ಒಬ್ಬನನ್ನು ಕೊಲ್ಲುವುದು ಬಹಳ ಗಂಭೀರವಾದ ವಿಷಯವೇ ಆಗಿದೆ ಮತ್ತು ಕೊಲೆಗಾರನನ್ನು ತಿರಸ್ಕಾರ ದೃಷ್ಟಿಯಿಂದಲೇ ಕಾಣಬೇಕಾಗುತ್ತವೆ.

ಪವಿತ್ರ ಖುರ್‌ಆನ್ ಹೇಳುವುದೇನೆಂದರೆ ಯಾರನ್ನಾದರೂ ಹತ್ಯೆ ಮಾಡುವುದು ಹೇಯ ಕೃತ್ಯವಾಗಿದೆ ಮತ್ತು ಅದು ಗಂಭೀರ ಅಪರಾಧವೂ ಆಗಿದೆ. ಆದರೆ ಗಲಭೆ ಗೊಂದಲಗಳನ್ನು ಸೃಷ್ಟಿಸುವುದು ಅದಕ್ಕಿಂತಲೂ ಹೇಯಕೃತ್ಯವಾಗಿದೆ. ಇದು ಹೀಗೆ ಆಗುವುದು ಹೇಗೆ? ಹೀಗೆ ಹೇಳಲು ಕಾರಣವೇನೆಂದರೆ, ಗಲಭೆ ಗೊಂದಲಗಳನ್ನು ಸೃಷ್ಟಿಸುವುದರಿಂದ ಮಿಲಿಯಗಟ್ಟಲೆ ಜೀವನಾಶವಾಗಲು ಸಾಧ್ಯವಿದೆ. ವಾಸ್ತವಿಕವಾಗಿ ನಾವು ವೀಕ್ಷಿಸಿದುದೇನೆಂದರೆ ಲಕ್ಷಾಂತರ ಜನರು ಕೆಲವರ ಕಿಡಿಗೇಡಿ ಕೃತ್ಯಗಳ ಕಾರಣದಿಂದ ಜೀವಹಾನಿ ಅನುಭವಿಸಿರುವರು. ಇಂತಹ ಕೃತ್ಯಗಳು ಜನರು ಪರಸ್ಪರ ಹೋರಾಡಲು ಮತ್ತು ದೇಶಗಳು ಪರಸ್ಪರ ಹೋರಾಡಲು ಕಾರಣವಾಗುವುವು. ಆದುದರಿಂದ ಇಸ್ಲಾಮ್ ಮುಸ್ಲಿಮರಿಗೆ ಉಪದೇಶಿಸಿದೆ – ಅಸ್ತವ್ಯಸ್ತತೆಯನ್ನು ಹರಡುವವರನ್ನೂ ಕಿಡಿಗೇಡಿತನದಿಂದ ವರ್ತಿಸುವವರನ್ನೂ ಶಿಕ್ಷಿಸಬೇಕೆಂದು. ಕಿಡಿಗೇಡಿತನದಿಂದ ವರ್ತಿಸುವವರು ಮನೆಗಳಲ್ಲಿಯೂ ಶಾಂತಿ ಸಮಾಧಾನಗಳನ್ನು ಕೆಡಿಸುತ್ತಾರಲ್ಲದೆ ದೇಶಗಳ ಮಧ್ಯೆ ಇರುವ ಸೌಹಾರ್ದವನ್ನೂ ಭಂಗಪಡಿಸುತ್ತಾರೆ.

ಇಂದಿನ ಕಾಲದ ರಾಜಕೀಯ ಮತ್ತು ಗೂಢಾಲೋಚನೆಗಳು ಇಂತಹವುಗಳೇ ಆಗಿವೆ. ಒಂದು ದೇಶ ಇನ್ನೊಂದು ದೇಶದೊಂದಿಗೆ ಜಗಳ ಮಾಡುವಾಗ ಅದು ಬೇರೆ ದೇಶಗಳ ಸಹಾಯವನ್ನು ಪಡೆಯಲು ಕೃತ್ರಿಮ ವರದಿಗಳನ್ನು ತಯಾರಿಸುತ್ತವೆ ಅಥವಾ ಧನ ಬಲವನ್ನು ಬಳಸಿ ಅನ್ಯ ದೇಶಗಳ ನಾಯಕರನ್ನು ವಶೀಕರಿಸಿ ತಮ್ಮ ಮಿತ್ರರನ್ನಾಗಿ ಮಾಡಿಕೊಂಡು ತಮ್ಮ ಉದ್ದೇಶ ಲಕ್ಷ್ಯವನ್ನು ಗಳಿಸಲು ಪ್ರಯತ್ನ ಮಾಡುತ್ತಾರೆ. ಇಂದಿನ ಕಾಲದಲ್ಲಿ ಇಂತಹ ಜನರು ಒಗ್ಗೂಡಿ ಅನ್ಯರ ಮೇಲೆ ಪ್ರಭಾವ ಬೀರುತ್ತಾರೆ ಮತ್ತು ಎಷ್ಟು ವಿಶಾಲವಾಗಿ ಪ್ರಭಾವ ಬೀರುತ್ತಾರೆಂದರೆ ಅವರು ಯಾವ ದೇಶದ ವಿರುದ್ಧ ಸಂಚು ಹೂಡುತ್ತಾರೋ ಆ ದೇಶವನ್ನು ಸಂಪೂರ್ಣವಾಗಿ ಧ್ವಂಸ ಮಾಡುತ್ತಾರೆ. ಇಸ್ಲಾಮ್ ಹೇಳುವುದೇನೆಂದರೆ ಒಂದು ದೇಶವನ್ನು ನಾಶ ಮಾಡಲು ಕುತಂತ್ರಗಳಿಂದಲೂ ಅಸ್ತವ್ಯಸ್ತತೆ ಮೂಲಕವೂ ಶಾಂತಿ ಸ್ಥಾಪನೆಯ ಹೆಸರಿನಲ್ಲಿ ಪ್ರಯತ್ನಿಸುವವರು ವಾಸ್ತವಿಕವಾಗಿ ಹತ್ಯೆ ಮಾಡುವವರಾಗಿದ್ದಾರೆ ಮತ್ತು ಅವರನ್ನು ಅವರ ಅಪರಾದಕ್ಕೆ ಶಿಕ್ಷಿಸಬೇಕಾಗಿದೆ. ಇಂತಹ ಜನರು ಖಂಡಿತವಾಗಿಯೂ ಶಿಕ್ಷಿಸಲ್ಪಡಬೇಕಾದವರೇ ಆಗಿದ್ದಾರೆ. ಆದರೆ ಅವರು ಎಷ್ಟು ಪ್ರಭಾವಶಾಲಿಗಳೂ ಶಕ್ತಿಶಾಲಿಗಳೂ ಆಗಿದ್ದಾರೆಂದರೆ ಅವರಿಗೆ ಶಿಕ್ಷೆ ನೀಡುವ ಧೈರ್ಯ ಯಾರಿಗಿದೆ! ಆದರೆ ಇಸ್ಲಾಮ್ ಆಜ್ಞಾಪಿಸುವುದೇನೆಂದರೆ ಅಂತಹ ಜನರನ್ನು ಶಿಕ್ಷಿಸಬೇಕು.

ಪವಿತ್ರ ಪೈಗಂಬರರು[ಸ] ನಮಗೆ ಹೀಗೆ ಕಲಿಸಿದ್ದಾರೆ: ಯಾರ ಕೈಗಳಿಂದಲೂ ನಾಲಗೆಯಿಂದಲೂ ಇತರರು ಸುರಕ್ಷಿತರಾಗಿರುವರೋ ಅವನೇ ನೈಜ ಮುಸ್ಲಿಮನಾಗಿದ್ದಾನೆ. (ಬುಖಾರಿ). ಇನ್ನೊಂದು ಸಂದರ್ಭದಲ್ಲಿ ಪವಿತ್ರ ಪೈಗಂಬರರು[ಸ] ಹೇಳಿದರು: ಇತರರು ಸುರಕ್ಷಿತರಾಗಿರುವರು ಎಂದರೆ ಮುಸ್ಲಿಮರು ಮಾತ್ರವಲ್ಲ ಅನ್ಯರು ಸಹ ಅವುಗಳ ಆಕ್ರಮಣದಿಂದ ಸುರಕ್ಷಿತರಾಗಿರಬೇಕು. (ಸುನನ್ ನಸಾಯಿ).

ಈ ರೀತಿ ಇಸ್ಲಾಮ್ ಧರ್ಮದ ಉಪದೇಶಗಳು ಮುಸ್ಲಿಮರಿಗೆ ಶಾಂತಿಯ ಖಾತರಿ ನೀಡುತ್ತದೆ. ಮಾತ್ರವಲ್ಲ ಲೋಕದಲ್ಲಿ ಅನ್ಯ ಜನರ ಮಧ್ಯೆ ಮತ್ತು ದೇಶಗಳ ಮಧ್ಯೆ ಶಾಂತಿಸ್ಥಾಪನೆಯ ಖಾತರಿ ನೀಡುತ್ತದೆ.

ಧರ್ಮನಿರಪೇಕ್ಷ ಲೋಕವು ಎಲ್ಲ ರೀತಿಯ ಮಾನವ ನಿರ್ಮಿತ ವ್ಯವಸ್ಥೆಗಳನ್ನೂ ಸಂಘಟನೆಗಳನ್ನೂ ನಿಯಮ ನಿರ್ಮಾಣಗಳನ್ನೂ ಕಂಡಿದೆ. ಈ ನಿಯಮಗಳಿಗೆ ಬದ್ಧರಾಗಿದ್ದುಕೊಂಡು ಸಹ ಅವರಿಗೆ ಲೋಕದ ಅವ್ಯವಸ್ಥೆಯನ್ನು ಕೊನೆಗೊಳಿಸಲು ಸಾಧ್ಯವಾಗಿಲ್ಲ. ನೈಜ ಇಸ್ಲಾಮ್ ಧರ್ಮ ತತ್ವಗಳಿಗೆ ಅನುಸಾರವಾಗಿರುವ ಒಂದು ವ್ಯವಸ್ಥೆಯನ್ನು ಸ್ಥಾಪಿಸುವ ತನಕ ಅವರಿಗೆ ಲೋಕದಲ್ಲಿ ಶಾಂತಿ ಸ್ಥಾಪಿಸಲು ಸಾಧ್ಯವಾಗದು.

ಇಸ್ಲಾಮ್ ಧರ್ಮ ತತ್ವಗಳು ಅವುಗಳ ಮೂಲ ಸ್ವರೂಪದಲ್ಲಿ ಅನುಷ್ಠಾನಕ್ಕೆ ತಂದಿದ್ದಾಗ ಲೋಕದಲ್ಲಿ ಶಾಂತಿ ಮತ್ತು ನೆಮ್ಮದಿ ನೆಲಸಿತ್ತು. ಆದರೆ ದುರ್ಭಾಗ್ಯವಶಾತ್ ಮುಸ್ಲಿಮರು ತಮ್ಮ ಮೂಲ ತತ್ವಗಳನ್ನು ಮರೆತಾಗ ಅವರು ಅತ್ಯಂತ ಕೆಟ್ಟ ದೌರ್ಜನ್ಯಗಾರರಾದರು. ಇಸ್ಲಾಮ್ ಶಾಂತಿ ಮತ್ತು ಸೌಹಾರ್ದ ಸ್ಥಾಪಿಸುವ ಬಗ್ಗೆ ನೀಡಿದ ಉಪದೇಶಗಳನ್ನು ನಾನು ನಿನ್ನೆಯ ಸಭೆಯಲ್ಲಿ ಈಗಾಗಲೇ ಪ್ರಸ್ತಾಪಿಸಿದ್ದೇನೆ. ಆ ಸಭೆಯಲ್ಲಿ ಪ್ರೆಸ್ ಮತ್ತು ಮೀಡಿಯಾ ಪ್ರತಿನಿಧಿಗಳು ಭಾಗವಹಿಸಿದ್ದರು. ಮುಸ್ಲಿಮೇತರರೂ ಭಾಗವಹಿಸಿದ್ದರು. ಅವರು ನನ್ನೊಂದಿಗೆ ಖಾಸಗಿ ಸಂದರ್ಶನದಲ್ಲಿ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರ ಪ್ರಶ್ನೆಗಳಿಗೆ ತಕ್ಕಮಟ್ಟಿಗೆ ಉತ್ತರ ದೊರಕಿದೆ ಎಂದು ನಾನು ಭಾವಿಸುತ್ತೇನೆ.

ಲೋಕದ ಇಂದಿನ ಸ್ಥಿತಿ ಹೇಗಿದೆ ಎಂದರೆ ಅಸ್ತವ್ಯಸ್ತತೆ ಮತ್ತು ಅವ್ಯವಸ್ಥೆ ದಿನಂಪ್ರತಿ ವರ್ಧಿಸುತ್ತಾ ಇದೆ. ಈ ದಿನ ನಾನು ಅವುಗಳ ಬಗ್ಗೆ ಮಾತನಾಡಲು ನಿರ್ಧರಿಸಿದೆ. ನನ್ನ ಮಾತನ್ನು ಆಲಿಸಿದವರು ಲೋಕದಲ್ಲಿ ಅನ್ಯರಿಗೆ ಪ್ರಾಯಶಃ ಅವುಗಳ ಬಗ್ಗೆ ತಿಳಿಸುವರು. ವಿವಿಧ ಧಾರ್ಮಿಕ ಹಿನ್ನಲೆಯುಳ್ಳವರು ಒಬ್ಬರಿನ್ನೊಬ್ಬರೊಂದಿಗೆ ಶಾಂತಿ ಮತ್ತು ಸೌಹಾರ್ದದಿಂದ ಜೀವಿಸಬಹುದೆಂದು ಇಸ್ಲಾಮ್ ಧರ್ಮದ ಉಪದೇಶಗಳು ಮಾತ್ರ ಪ್ರತಿಪಾದಿಸುತ್ತವೆ. ಅದು ವಿವಿಧ ದೇಶಗಳ ಮಧ್ಯೆ ಶಾಂತಿ ಸ್ಥಾಪನೆ ಬಗ್ಗೆ ಒತ್ತಿ ಹೇಳುತ್ತದೆ. ಈ ತತ್ವಗಳೇ ಜನರಿಗೆ ಎಲ್ಲ ಮಟ್ಟದಲ್ಲಿಯೂ ಹೇಗೆ ಶಾಂತಿಯುತವಾಗಿ ಜೀವಿಸಬಹುದೆಂದು ಮಾರ್ಗದರ್ಶನ ನೀಡುತ್ತವೆ. ಜ್ಞಾನದ ಕೊರತೆಯಿಂದ ಅಥವಾ ಅಜ್ಞಾನದಿಂದ ಇಸ್ಲಾಮ್ ಧರ್ಮ ತತ್ವಗಳನ್ನು ಮನವರಿಕೆ ಮಾಡದವರು ಮತ್ತು ಅವುಗಳನ್ನು ಆಕ್ಷೇಪಿಸಿ ಅವು ಪ್ರೀತಿ, ಶಾಂತಿ, ಭ್ರಾತೃತ್ವ ರಹಿತವೂ ಆಗಿವೆ ಎಂದು ಹೇಳುವವರ ಬಗ್ಗೆ ನಾನು ಹೇಳಲು ಬಯಸುವುದೇನೆಂದರೆ, ಅವರು ತಮ್ಮ ಕರ್ಮಗಳನ್ನು ಸುಧಾರಣೆ ಮಾಡಬೇಕು, ಅವರು ಅಸೂಯೆಯ ಪರದೆಯನ್ನು ತಮ್ಮ ಕಣ್ಣುಗಳಿಂದ ದೂರಸರಿಸಬೇಕು ಮತ್ತು ಅದಕ್ಕೆ ಬದಲಾಗಿ ಬೆಳಕನ್ನು ಹೊಂದಬೇಕು. ದೇವನಿಗೆ ಸಾಮೀಪ್ಯ ಗಳಿಸುವ ಮೂಲಕ ಆ ಬೆಳಕು ದೊರಕುವುದು.

ಲೋಕದ ಪರಿಸ್ಥಿತಿಯನ್ನು ಸುಧಾರಣೆ ಮಾಡಲು ಮತ್ತು ಅದು ವಿನಾಶದ ಕಡೆಗೆ ಸಾಗುತ್ತಿರುವುದರ ವೇಗವನ್ನು ಬದಲಾಯಿಸಲು ಒಂದೇ ಮಾರ್ಗವಿದೆ. ಅದು ತಮ್ಮ ಸೃಷ್ಟಿಕರ್ತನಾದ ಪ್ರಭುವನ್ನು ಗುರುತಿಸುವುದಾಗಿದೆ. ಮಾನವರನ್ನು ವಿನಾಶದಿಂದ ರಕ್ಷಿಸಲು ಅವನು ಮಾನವರನ್ನು ತನ್ನ ಕರುಣೆ ಮತ್ತು ಶಾಂತಿಯ ನೆರಳಿನಡಿಗೆ ಬರಲು ಆಮಂತ್ರಿಸುತ್ತಿದ್ದಾನೆ. ಜನರು ಎಷ್ಟು ವ್ಯವಸ್ಥೆಗಳನ್ನು ಲೋಕದಲ್ಲಿ ಸ್ಥಾಪಿಸಲು ಬಯಸಿದರೂ ಯಾವುದೇ ನಿಯಮ, ಸಂವಿಧಾನ, ಒಪ್ಪಂದ ಅಥವಾ ಪ್ರಯತ್ನ ಲೋಕವನ್ನು ವಿನಾಶದ ಹೊಂಡಕ್ಕೆ ಬೀಳುವುದರಿಂದ ರಕ್ಷಿಸಲಾರದು.

ಆದುದರಿಂದ ನಾನು ಲೋಕದ ಜನರೊಂದಿಗೆ ಹೇಳಲು ಬಯಸುತ್ತೇನೆ: ಶಾಂತಿ ಮತ್ತು ಸಮಾಧಾನವನ್ನು ಆಶಿಸುವ ಎಲೈ ಜನರೇ, ನೀವು ಇಸ್ಲಾಮೀ ತತ್ವಗಳಿಗೆ ವಿರುದ್ಧವಾಗಿ ಆಕ್ಷೇಪಣೆಗಳನ್ನು ಮಾಡುವುದಕ್ಕೆ ಬದಲಾಗಿ ನೀವು ಬನ್ನಿರಿ ಮತ್ತು ಪವಿತ್ರ ಪೈಗಂಬರರ(ಸ) ಸತ್ಯಸಂಧನಾದ ದಾಸನ ಮಾತುಗಳಿಗೆ ಕಿವಿಗೊಡಿರಿ. ಈ ಸತ್ಯಸಂಧನಾದ ಸೇವಕನನ್ನು ಸರ್ವಶಕ್ತನಾದ ಅಲ್ಲಾಹನು ಮಾನವರನ್ನು ನಾಶದಿಂದ ರಕ್ಷಿಸಲು ಮತ್ತು ತನ್ನ ಕೋಪದಿಂದ ರಕ್ಷಿಸಲು ಈ ಕಾಲಘಟ್ಟದಲ್ಲಿ ಕಳುಹಿಸಿರುವನು. ಆ ಸತ್ಯಸಂಧನಾದ ಸೇವಕ ಹೇಳಿದರು:

"ಎಲೈ ಯುರೋಪಿನ ನಿವಾಸಿಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನರೇ, ನೀವು ಸುರಕ್ಷಿತರಲ್ಲ. ಎಲೈ ವಿವಿಧ ದ್ವೀಪಗಳ ನಿವಾಸಿಗಳೇ, ಯಾವುದೇ ಮಿಥ್ಯ ದೈವ ನಿಮ್ಮ ರಕ್ಷಣೆಗೆ ಬರಲಾರದು. ನಗರಗಳು ಕುಸಿದು ಬೀಳುವುದನ್ನು ನಾನು ಕಾಣುತ್ತಿದ್ದೇನೆ. ಜನವಾಸ ಪ್ರದೇಶಗಳು ಜನಶೂನ್ಯವಾಗುವುದನ್ನು ನಾನು ಕಾಣುತ್ತಿದ್ದೇನೆ. ಲೋಕವು ಏಕಮಾತ್ರನಾದ ದೇವನ ಕಡೆಗೆ ಅಭಿಮುಖೀಕರಿಸಬೇಕು. ಹಾಗೆ ಮಾಡದಿದ್ದರೆ ಮೇಲಿನಂತೆ ಸಂಭವಿಸುವುದು." (ಹಖೀಖತುಲ್ ವಹೀ – ರೂಹಾನೀ ಖಝಾಇನ್: ಸಂಪುಟ 22 ಪುಟ 269).

ವಾಗ್ದತ್ತ ಮಸೀಹರು(ಅ) ಹೀಗೆ ಸಹ ಹೇಳಿದ್ದಾರೆ: "ಸತ್ಯದ ಸೂರ್ಯ ಪಶ್ಚಿಮದಿಂದ ಉದಿಸುವ ದಿನಗಳು ಬರಲಿವೆ. ಪಶ್ಚಿಮದ ದೇಶಗಳು ಮತ್ತು ಯುರೋಪು ಸತ್ಯ ದೇವನನ್ನು ಗುರುತಿಸುವುವು. ಅನಂತರ ಪಶ್ಚಾತ್ತಾಪಪಡುವ ಬಾಗಿಲು ಮುಚ್ಚಲ್ಪಡುವುದು. ಪ್ರವೇಶಿಸಲು ಆಶಿಸಿದವರು ಆಗ ಉತ್ಸಾಹಭರಿತರಾಗಿ ಪ್ರವೇಶಗಳಿಸಿದವರಾಗುವರು. ಹೊರಗೆ ಉಳಿಯುವವರು ಹೃದಯಗಳು ಮುದ್ರೆಯೊತ್ತಲ್ಪಟ್ಟವರಾಗಿರುವರು. ಅವರು ಬೆಳಕನ್ನು ಪ್ರೀತಿಸದವರೂ ಅಂಧಕಾರವನ್ನು ಪ್ರೀತಿಸುವವರೂ ಆಗಿರುವರು..... ಇಸ್ಲಾಮಿನ ಅಸ್ತ್ರವು ದಜ್ಜಾಲೀ (ದುಷ್ಟ) ಶಕ್ತಿಗಳನ್ನು ಮುರಿದು ಹಾಕುವ ತನಕ ಮುರಿದು ಹೋಗಲಾರದು, ಮೊಂಡಾಗಲಾರದು. ಆ ಸಮಯ ಬರಲಿದೆ. ನೈಜ ಏಕದೇವ ವಿಶ್ವಾಸವು ಅದು ಮರುಭೂಮಿ ನಿವಾಸಿಗಳಲ್ಲಿಯೂ ಯಾವುದೇ ಧಾರ್ಮಿಕ ಉಪದೇಶಗಳ ಬಗ್ಗೆ ತೀರಾ ಅರಿವಿಲ್ಲದವರಲ್ಲಿಯೂ ಪ್ರಕೃತಿ

ಸಹಜವಾಗಿ ಕಂಡುಬರುವಂತಹದ್ದಾಗಿದೆ – ಅದು ಲೋಕದಾದ್ಯಂತೆ ಹರಡಲಿದೆ. ಆಗ ಯಾವುದೇ ಕೃತಕ ಪಾಪ ಪರಿಹಾರವಿರಲಾರದು. ಯಾವುದೇ ಕೃತಕ ದೇವನೂ ಇರಲಾರನು. ಅಲ್ಲಾಹನ ಒಂದು ಹೊಡೆತ ಅವಿಶ್ವಾಸದ ಎಲ್ಲ ಯೋಜನೆಗಳನ್ನು ನಿಷ್ಫಲಗೊಳಿಸುವುದು – ಆದರೆ ಅದು ಯಾವುದೇ ಖಡ್ಗದಿಂದಲ್ಲ, ಯಾವುದೇ ಬಂದೂಕಿನಿಂದಲ್ಲ. ಅದು ಅತ್ಯಾಸಕ್ತಿ ಹೊಂದಿದ ಆತ್ಮಗಳಿಗೆ ಬೆಳಕು ನೀಡಿ ಮತ್ತು ಪರಿಶುದ್ಧ ಹೃದಯಗಳನ್ನು ಬೆಳಗಿಸುವ ಮೂಲಕವಾಗಿರುವುದು. ಆಗ ನಾನು ಹೇಳುವುದೆಲ್ಲವೂ ಮನವರಿಕೆ ಆಗುವುದು." (ಮಜ್‌ಮೂಅ ಇಶ್ತಿಹಾರಾತ್: ಸಂಪುಟ2 ಪುಟ 304–305).

ತೌಹೀದ್ (ಏಕದೇವ ವಿಶ್ವಾಸ) ಇದರ ವಾಸ್ತವಿಕ ಅರ್ಥವನ್ನು ತಿಳಿದುಕೊಳ್ಳುವ ಪ್ರಾಮಾಣಿಕತೆಯನ್ನು ನಾವು ಹೊಂದುವಂತೆ ಅಲ್ಲಾಹನು ನಮ್ಮನ್ನು ಮಾಡಲಿ. ನಾವು ನೈಜ ಆಬಿದ್ ಆಗಿ (ಸರ್ವಶಕ್ತನಾದ ಅಲ್ಲಾಹನನ್ನು ಆರಾಧಿಸುವವರನ್ನಾಗಿ) ಅಲ್ಲಾಹನು ಮಾಡಲಿ. ನಾವು ಸರ್ವಶಕ್ತನಾದ ಅಲ್ಲಾಹನ ಕಾರುಣ್ಯವನ್ನೂ ಅನುಗ್ರಹವನ್ನೂ ಗಳಿಸುವವರಾಗಿ ಲೋಕಕ್ಕೆ ಹೀಗೆ ತಿಳಿಸುವವರಾಗೋಣ– ಅವರಿಗೆ ಬದುಕಿ ಬಾಳಲು ನೈಜ ಆಶೆ ಇದ್ದಲ್ಲಿ ಅವರು ತಮ್ಮ ಏಕನಾದ ನೈಜ ಸೃಷ್ಟಿಕರ್ತನನ್ನು ನಂಬಬೇಕು. ಸರ್ವಶಕ್ತನಾದ ಅಲ್ಲಾಹನು ನಮಗೆ ಇದು ಸಾಧ್ಯವಾಗುವಂತೆ ಮಾಡುವವನಾಗಲಿ.

ಇನ್ನು ಮುಂದೆ ನಾವು ಪ್ರಾರ್ಥಿಸೋಣ. ಪಾಕಿಸ್ಥಾನದಲ್ಲಿರುವ ಅಹ್ಮದಿಯರಿಗೋಸ್ಕರವೂ ಅಲ್‌ಜೀರಿಯಾ ದೇಶದಲ್ಲಿ ಕಷ್ಟವನ್ನನುಭವಿಸುವ ಅಹ್ಮದಿಯರಿಗೋಸ್ಕರವೂ ಪ್ರಾರ್ಥಿಸಿರಿ. ನೀವು ಮುಸ್ಲಿಮ್ ಸಮುದಾಯವನ್ನೂ ನಿಮ್ಮ ಪ್ರಾರ್ಥನೆಯಲ್ಲಿ ನೆನಪಿನಲ್ಲಿಟ್ಟು ಪ್ರಾರ್ಥಿಸಿರಿ. ಅವರು ತಮ್ಮ ಅಜ್ಞಾನದ ಕಾರಣದಿಂದ ಅಲ್ಲಾಹನ ಕೋಪವನ್ನು ತಮ್ಮ ಮೇಲೆರಗುವಂತೆ ಆಹ್ವಾನಿಸುತ್ತಿದ್ದಾರೆ. ಜಗತ್ತಿನ ಪರಿಸ್ಥಿತಿ ಕೆಟ್ಟು ಹೋಗುತ್ತಾ ಇದೆ. ಆದುದರಿಂದ ನಾನು ಇದರ ಮೊದಲು ಹೇಳಿದ ಹಾಗೆ ಲೋಕದ ಜನರೆಲ್ಲರನ್ನೂ ಪ್ರಾರ್ಥಿಸುವಾಗ ನೆನಪಿನಲ್ಲಿರಿಸಿರಿ. ಅಲ್ಲಾಹನು ತನ್ನ ಕಾರುಣ್ಯವನ್ನೂ ಅನುಗ್ರಹವನ್ನೂ ಇಳಿಸಿ ಕೊಡಲಿ. ನಾವು ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವ ಶಕ್ತಿಯನ್ನು ಅವನು ನಮಗೆ ನೀಡಲಿ. ನಾವು ಪ್ರಾರ್ಥಿಸೋಣ.

ಕೊನೆಯದಾಗಿ, ಲಂಡನ್ ಜಲ್ಸದಲ್ಲಿ ಭಾಗವಹಿಸಿದ ಜನ ಸಂಖ್ಯೆ ಎಷ್ಟೆಂದು ಆಲಿಸಿರಿ. ಈ ವರ್ಷ 37,393 ಜನರು ಜಲ್ಸದಲ್ಲಿ ಭಾಗವಹಿಸಿದರು. 114 ದೇಶಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು.

(**Review of Religions – OCT 2017 ಸಂಚಿಕೆಯಿಂದ**).

ಕವನ

## ಅಲ್‌ಅಮೀನ್

*** ಕೆ.ಎಂ. ಉಮರ್, ಮಡಿಕೇರಿ**

ಮುಹಮ್ಮದ್ ನಬಿಯ ಜನ್ಮವು ಮಕ್ಕದಿ ಅಲ್ ಅಮೀನ್ ಎಂಬ ಬಿರುದಲ್ಲಿ
ಮಾನವ ವಂಶಕೆ ಉಜ್ವಲ ಬೆಳಕನು ತೋರುತ ಮೊಳಗಿತು ಭರದಲ್ಲಿ
ಮಾನವ ವಂಶದಿ ಮಾನವೀಯತೆಯು ಮಾಯವಾಗಿರೋ ಕಾಲದಲ್ಲಿ
ಮಾನವ ರಾಶಿಗೆ ಕರುಣೆಯ ತೋರುತ ದೇವನ ಕೃಪೆಯು ಪ್ರವಾದಿಯಲ್ಲಿ
ಮುಹಮ್ಮದ್ ನಬಿಯರು ಧರೆಯಲಿ ಸಾರಿದ ಶಾಂತಿಯ ಬೀಜವು ಮೊಳಗುತಲಿ
ಮಾದರಿಯಾದರು ಮಾನವಕುಲಕೆ ಉತ್ತಮ ಸಂದೇಶ ನೀಡುತಲಿ
ಜಿಹಾದ್ ಎಂದರೆ ಯುದ್ಧವು ಅಲ್ಲ ಧರ್ಮವ ಜನರೆಡೆ ಬಿತ್ತುವುದು
ಶಾಂತಿ ಸೌಹಾರ್ದದಿ ಎಲ್ಲರ ಧರ್ಮವ ಗೌರವದಿಂದಲಿ ಕಾಣುವುದು
ಮುಹಮ್ಮದ್ ನಬಿಯರು ಪ್ರಾರ್ಥನೆಗೈಯ್ಯಲು ನಿತ್ಯವು ಹೋಗುವ ದಾರಿಯಲಿ
ಮನೆಯೊಳಗಿರುವ ಕಸವನು ನಿತ್ಯವು ನಾರಿಯು ಸಂಗ್ರಹ ಮಾಡುತಲಿ
ನಬಿಯವರ ತಲೆಯಲಿ ಹಾಕುತ ಮನದಲಿ ನೆಮ್ಮದಿಯೊಂದಿಗೆ ಇರುತಿರಲು
ನಾರಿಯು ಹಾಕಿದ ಕೊಡಹುತ ನಬಿಯರು ನಾರಿಗೆ ಪ್ರಾರ್ಥಿಸುತ
ಸರ್ವಾದಿನಾಥನೆ ನಾರಿಗೆ ಸದ್ಬುದ್ಧಿ ಕರುಣಿಸಿ ಕಾಪಾಡು ನೀನೆಂದು
ಸತ್ಯವನರಿತು ಶಾಂತಿಲಿ ಬಾಳಲು ಶಾಶ್ವತ ಅವರಿಗೆ ಅನುಗ್ರಹಿಸು
ನಿತ್ಯವು ಕಸವನು ನಬಿಯರ ತಲೆಯಲಿ ಹಾಕುತಲಿದ್ದ ಮಹಿಳೆಯನು
ನಿಶ್ಚಿತ ದಿನದಲಿ ಕಾಣದೆ ನಾರಿಯ ಹುಡುಕುತ ಹೋದರು ಮನೆತನಕ
ರೋಗವು ಬಾಧಿಸಿ ಮಲಗಿದ ನಾರಿಯ ಮನೆಯೊಳಗ್ಹೋಗಿ ನೋಡುತಲಿ
ರೋಧಿಸಬೇಡನೀ ದೇವನು ನಿನ್ನಯ ರೋಗವ ಗುಣಮುಖನಾಗಿಸಲಿ
ಪ್ರವಾದಿ ಗಣ್ಯರ ಘನತೆಯ ನುಡಿಯನು ಆಲಿಸಿ ನಾಚುತ ಕಣ್ತುಂಬಿ
ಪಶ್ಚಾತ್ತಾಪದಿ ನಬಿಯಲಿ ಕ್ಷಮೆಯನು ಯಾಚಿಸಿ ಅವರಾ ಮನತುಂಬಿ
ಕ್ರೂರತೆ ಅವರಲಿ ತೋರಿದ ಜನರಿಗೆ ಕೂಡಲೆ ಕ್ಷಮೆಯನು ನೀಡುತಲಿ
ಕೋಪದಿ ಅವರನು ಕೊಲ್ಲಲು ಬಂದವ ಖಡ್ಗವ ತ್ಯಜಿಸಿದ ಶಾಂತಿಯಲಿ
ಪುಣ್ಯ ಪ್ರವಾದಿಯ ಜೀವನ ಕಾಲದಿ ಒಳಿತಿನ ಬೀಜವು ಬಿತ್ತುತಲಿ
ಪಾವನ ದೀನಿಸ್ಲಾಮಿನ ರೂಪದಿ ಬೆಳೆಯಿತು ಹೆಮ್ಮರವಾಗುತಲಿ
ಸದ್ಗುಣ ಮಾತ್ರವ ಜೀವನದುದ್ದಕೂ ಸಾಧಿಸಿ ಜನರಿಗೆ ತೋರಿಸುತ
ಸತ್ಯಪ್ರವಾದಿ ಮುಹಮ್ಮದ್ ನಬಿಯ ಮಾರ್ಗದಿ ನಡೆಯುವ ಬೋಧಿಸುತ

# ಮೂರನೇ ಜಾಗತಿಕ ಯುದ್ಧಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರ ಮುನ್ನೆಚ್ಚರಿಕೆ

ಇಂದು ಲೋಕ ಬಹಳ ಸಂಕಷ್ಟಮಯ ಸ್ಥಿತಿಯಲ್ಲಿದೆ. ಜಾಗತಿಕ ಆರ್ಥಿಕ ಬಿಕ್ಕಟ್ಟು ಹೊಸ ಮತ್ತು ತೀವ್ರ ಅಪಾಯಕರ ಪರಿಸ್ಥಿತಿಗಳನ್ನು ಪ್ರತಿ ವಾರ ಪ್ರಕಟಿಸುತ್ತಿದೆ. ಈಗಿನ ಪರಿಸ್ಥಿತಿ ದ್ವಿತೀಯ ಲೋಕ ಮಹಾಯುದ್ಧಕ್ಕೆ ತುಸು ಮುಂಚಿನ ದಿನಗಳಿಗೆ ಸಮಾನವಾಗಿದೆ ಎಂದು ಹೇಳಲಾಗುತ್ತಿದೆ. ಜಾಗತಿಕ ಶಕ್ತಿಗಳ ದೌರ್ಜನ್ಯ, ಶಾಂತಿ ಸ್ಥಾಪನೆಯ ನೆಪದಲ್ಲಿ ಒಳಜಗಳಗಳಲ್ಲಿ ದೊಡ್ಡ ಶಕ್ತಿಗಳ ಅನಗತ್ಯ ಮಧ್ಯೆ ಪ್ರವೇಶ, ಐ.ಎಸ್.ನಂತಹ ನಾಮಧಾರಿ ಸಂಘಟನೆಗಳ ಪಿತೂರಿಗಳು ಮುಂತಾದ ಎಲ್ಲ ಸಂಗತಿಗಳು ಲೋಕವು ಅಸಾಧಾರಣವಾದ ವೇಗದೊಂದಿಗೆ ಒಂದು ಭಯಾನಕವಾದ ತೃತೀಯ ಮಹಾಯುದ್ಧದ ಕಡೆಗೆ ಸಾಗುತ್ತಿದೆ ಎಂದು ಸ್ಪಷ್ಟಪಡಿಸುತ್ತಿವೆ.

ಜಾಗತಿಕ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು(ಅಯ್ಯದಹುಲ್ಲಾಹ್) ಕಳೆದ ಹಲವು ವರ್ಷಗಳಿಂದ ಲೋಕಕ್ಕೆ ಬಂದಿರುವ ಅಪಾಯಗಳ ಬಗ್ಗೆ ಎಲ್ಲರನ್ನು ಎಚ್ಚರಿಸುತ್ತಿದ್ದಾರೆ. ಇದು ಅಶಾಂತಿ ಹರಡುವ ಉದ್ದೇಶದಿಂದ ಅಲ್ಲ, ಲೋಕವು ಈ ಸ್ಥಿತಿಗೆ ಹೇಗೆ ತಲುಪಿತು ಮತ್ತು ಈಗ ಹೇಗೆ ಈ ವಿನಾಶದಿಂದ ಪಾರಾಗಬಹುದು ಎಂದು ಹೇಳಿಕೊಡಲಿಕ್ಕಾಗಿದೆ.

ಲೋಕದಲ್ಲಿ ಶಾಂತಿ ಸ್ಥಾಪನೆಗಿರುವ ಏಕಮಾತ್ರ ಮಾರ್ಗ ನ್ಯಾಯಪಾಲನೆ ಅವಲಂಬಿಸಿ ವಿನಯ ಮತ್ತು ಅನುಸರಣೆಯಿಂದ ದೇವನಿಗೆ ಶರಣಾಗುವುದಾಗಿದೆ ಎಂದು ಜಾಗತಿಕ ಅಹ್ಮದಿಯಾ ಜಮಾಅತಿನ ಸರ್ವೋನ್ನತ ನೇತಾರ ಬಹಳ ಸ್ಪಷ್ಟವಾಗಿ ಘೋಷಿಸಿದ್ದಾರೆ. ಅದೇ ರೀತಿಯಲ್ಲಿ ಮನುಕುಲದೊಂದಿಗೆ ಸಹಾನುಭೂತಿ ತೋರಿಸಿ, ದುರ್ಬಲರಿಗೆ ನೆರವು ನೀಡಿ, ಅವರನ್ನು ಗೌರವಿಸಿ ಅವರಿಗೆ ಸಾಂತ್ವನ ನೀಡಿ, ಸತ್ಯ ಮತ್ತು ದೇವಭಕ್ತಿಯ ಮಾರ್ಗದಲ್ಲಿ ನಡೆಯುತ್ತಾ ನಿಷ್ಠೆಯಿಂದ ತಮ್ಮ ಸೃಷ್ಟಿಕರ್ತನ ಕಡೆಗೆ ಮರಳಬೇಕಾಗಿದೆ.

**ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಯುದ್ಧಕ್ಕೆ ಕಾರಣವಾಗುತ್ತಿವೆ**

ಅಮೇರಿಕದ ಅಧ್ಯಕ್ಷ ಒಬಾಮರಿಗೆ ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರ ಪತ್ರ ಮೂಲಕ ಹೀಗೆ ಗಮನ ಹರಿಸಿದರು: "ನಮಗೆಲ್ಲರಿಗೂ ತಿಳಿದಿರುವಂತೆ ಎರಡನೇ ಜಾಗತಿಕ ಮಹಾ ಯುದ್ಧವು ಪ್ರಾರಂಭವಾಗಲು ಮುಖ್ಯ ಕಾರಣ ಲೀಗ್ ಆಫ್ ನೇಶನ್ಸ್ ತನ್ನ ಸ್ಥಾಪನೆಯ ಉದ್ದೇಶವನ್ನು ಸಾಧಿಸಲು ವಿಫಲವಾದುದು ಮತ್ತು 1932ರ ಆರ್ಥಿಕ ಮುಗ್ಗಟ್ಟು ಆಗಿತ್ತು. ಈಗಿನ ಆರ್ಥಿಕ ಬಿಕ್ಕಟ್ಟು 1932ರ ಆರ್ಥಿಕ ಮುಗ್ಗಟ್ಟಿಗೆ ಹಲವಾರು ವಿಷಯಗಳಲ್ಲಿ ಸಮಾನತೆ ಹೊಂದಿವೆ ಎಂದು ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಈಗ ಹೇಳುತ್ತಿದ್ದಾರೆ. ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಚಿಕ್ಕ ದೇಶಗಳನ್ನು ಪುನಃ ಯುದ್ಧಕ್ಕೆ ತಳ್ಳಿವೆ. ಕೆಲವು ದೇಶಗಳು ಆಂತರಿಕ ಅಶಾಂತಿ ಮತ್ತು ಅಸಮಾಧಾನಕ್ಕೆ ಬಲಿಯಾಗಿವೆ. ಈ ಎಲ್ಲ ಸಂಗತಿಗಳು ಜಾಗತಿಕ ಯುದ್ಧಕ್ಕೆ ಕಾರಣವಾಗುವುವು. ಚಿಕ್ಕ ದೇಶಗಳ ಸಂಘರ್ಷಗಳನ್ನು ರಾಜಕೀಯವಾಗಿ ಮತ್ತು ರಾಜತಂತ್ರಗಳ ಮೂಲಕ ಪರಿಹರಿಸದಿದ್ದರೆ ಲೋಕದಲ್ಲಿ ದೇಶಗಳು ಒಗ್ಗೂಡಿದ ಹೊಸ ಗುಂಪುಗಳು ಸ್ಥಾಪಿಸಲ್ಪಡುವುವು. ಇದು ಮೂರನೆಯ ಜಾಗತಿಕ ಮಹಾಯುದ್ಧವು ತೊಡಗಲು ಮುನ್ನುಡಿಯಾಗುವುದು. ಇಂತಹ ಸ್ಥಿತಿಯಲ್ಲಿ ಲೋಕವನ್ನು ಆರ್ಥಿಕ ಅಭಿವೃದ್ಧಿಗೊಯ್ಯುವ ಬಗ್ಗೆ ನಮ್ಮ ಗಮನವನ್ನು ಕೇಂದ್ರೀಕರಿಸುವುದಕ್ಕೆ ಬದಲಾಗಿ ಲೋಕವನ್ನು ನಾಶದಿಂದ ರಕ್ಷಿಸಲು  ಪ್ರಯತ್ನಿಸುವುದು ಅನಿವಾರ್ಯವಾಗಿದೆ. ಮನುಕುಲ ತನ್ನ ಸೃಷ್ಟಿಕರ್ತನಾದ ಏಕದೇವನನ್ನು ಗುರುತಿಸುವುದು ಅತ್ಯಾವಶ್ಯಕವಾಗಿದೆ. ಹೀಗೆ ಮಾಡಿದರೆ ಮಾತ್ರ ಮಾನವತೆಯ ರಕ್ಷೆ ಖಾತರಿಗೊಳಿಸಲ್ಪಡುವುದು. ಇಲ್ಲದಿದ್ದರೆ ಲೋಕವು ವೇಗವಾಗಿ ಸ್ವಯಂನಾಶದ ಕಡೆಗೆ ಸಾಗುತ್ತಾ ಹೋಗುವುದು."

**ಇನ್ನೊಂದು ಜಾಗತಿಕ ಮಹಾ ಯುದ್ಧಕ್ಕೆ ಅಸ್ತಿಭಾರ ಹಾಕಲಾಗಿದೆ**

ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಅಧ್ಯಕ್ಷರ ಗಮನಹರಿಸುತ್ತಾ ಜಾಗತಿಕ ಅಹ್ಮದಿಯಾ ಜಮಾಅತಿನ ಇಮಾಮ್ ಹೇಳಿದರು: ಇಂದು ಲೋಕದ ಪ್ರತಿಯೊಂದು ದೇಶ ಇತರ ದೇಶಗಳಿಗೆ ನೆರವು ನೀಡಲು ಅಥವಾ ವಿರೋಧಿಸಲು ಕಾರ್ಯನಿರತವಾಗಿದೆ. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುತ್ತಾ ಇಲ್ಲ. ಲೋಕದಲ್ಲಿ ಈಗಿರುವ ಸ್ಥಿತಿಗತಿಗಳನ್ನು ನೋಡುವುದಾದರೆ, ಇನ್ನೊಂದು ಜಾಗತಿಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಈಗಾಗಲೇ ಹಾಕಲಾಗಿದೆ ಎಂದು ಖೇದಪೂರ್ವಕವಾಗಿ ಹೇಳಬೇಕಾಗುವುದು.

"ಈಗ ಲೋಕದಲ್ಲಿ ಬಹಳ ಆತಂಕ ಮತ್ತು ಅಸಮಾಧಾನ ವ್ಯಾಪಿಸಿದೆ. ಲೋಕದ ಕೆಲವು ಪ್ರದೇಶಗಳಲ್ಲಿ ಚಿಕ್ಕಮಟ್ಟದಲ್ಲಿ ಯುದ್ಧಗಳು ಪ್ರಾರಂಭವಾಗಿವೆ. ಬೇರೆ ಕೆಲವು ಪ್ರದೇಶಗಳಲ್ಲಿ ಪ್ರಬಲ ರಾಷ್ಟ್ರಗಳು ಶಾಂತಿ ಸ್ಥಾಪಿಸುವ ನೆವನದಲ್ಲಿ ಮಧ್ಯೆ ಪ್ರವೇಶಿಸುತ್ತಿವೆ. ಇಂದು ಲೋಕದ ಪ್ರತಿಯೊಂದು ದೇಶ ಇತರ ದೇಶಗಳಿಗೆ ನೆರವು ನೀಡಲು ಅಥವಾ ವಿರೋಧಿಸಲು ಕಾರ್ಯನಿರತವಾಗಿದೆ. ಆದರೆ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುತ್ತಾ ಇಲ್ಲ. ಲೋಕದಲ್ಲಿ ಈಗಿರುವ

ಸ್ಥಿತಿಗತಿಗಳನ್ನು ನೋಡುವುದಾದರೆ, ಇನ್ನೊಂದು ಜಾಗತಿಕ ಮಹಾಯುದ್ಧಕ್ಕೆ ಅಸ್ತಿಭಾರವನ್ನು ಈಗಾಗಲೇ ಹಾಕಲಾಗಿದೆ ಎಂದು ಖೇದಪೂರ್ವಕವಾಗಿ ಹೇಳಬೇಕಾಗುವುದು."

ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರ ತನ್ನ ಒಂದು ಭಾಷಣದಲ್ಲಿ ಹೇಳಿದರು: "...ಇದರ ಮೊದಲು ನಡೆದ ಎರಡು ಜಾಗತಿಕ ಮಹಾಯುದ್ಧಗಳ ಭೀಕರ ನಾಶದ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ಕೆಲವು ದೇಶಗಳ ವರ್ತನೆಗಳ ಕಾರಣದಿಂದ ಇನ್ನೊಂದು ಮಹಾಯುದ್ಧದ ಚಿಹ್ನೆಗಳು ದಿಗಂತದಲ್ಲಿ ಕಾಣಿಸುತ್ತಿವೆ... ಲೋಕವು ಮುಂದೆ ಸಾಗುತ್ತಿರುವ ರೀತಿಯನ್ನು ನೋಡುವಾಗ, ಅಣ್ವಸ್ತ್ರ ಬಳಸಲ್ಪಡುವ ಯುದ್ಧವು ಸಂಭವಿಸುವ ಅಪಾಯವಿದೆ. ಇಂತಹ ಭಯಾನಕ ಪರಿಣಾಮಗಳನ್ನು ತಡೆಗಟ್ಟಲು ನಾವು ನ್ಯಾಯ, ಭಾವೈಕ್ಯತೆ, ಪ್ರಾಮಾಣಿಕತೆಯನ್ನು ಅವಲಂಬಿಸಬೇಕು. ದ್ವೇಷವನ್ನು ಹರಡಿ ಲೋಕದ ಶಾಂತಿ ಕೆಡಿಸುವ ಗುಂಪುಗಳನ್ನು ತಡೆಯಲು ನಾವು ಒಗ್ಗೂಡಬೇಕು." (ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್ ಮಾಡಿದ ಭಾಷಣ, 2013)

**ನಾವು ನಮ್ಮ ಮುಂದಿನ ಪೀಳಿಗೆಗಳಿಗೆ ಅಂಗವೈಕಲ್ಯದ ಕೊಡುಗೆ ನೀಡುವವರಾಗದಿರಲಿ**

ಇಸ್ರಾಯೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹೂರಿಗೆ ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರ ಹೀಗೆ ಪತ್ರ ಬರೆದರು: "ಪ್ರವಾದಿ ಮುಹಮ್ಮದ್‌ರ(ಸ) ದಾಸನಾಗಿ ದೇವನಿಂದ ನೇಮಿಸಲ್ಪಟ್ಟ ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯ ಖಲೀಫ ಎಂಬ ನೆಲೆಯಲ್ಲಿ ನಾನು ನಿಮ್ಮನ್ನು ಸಂಬೋಧಿಸುತ್ತಿದ್ದೇನೆ.... ದೇವಸಂದೇಶದ ಬಗ್ಗೆ ನಿಮಗೆ ಮುನ್ನೆಚ್ಚರಿಕೆ ನೀಡುವುದು ನನ್ನ ಕರ್ತವ್ಯವಾಗಿದೆ. ನೀವು ದೇವನ ಕರೆಗೆ ಓಗೊಡುವವರೂ ನೇರಮಾರ್ಗವನ್ನು ಕಂಡುಕೊಳ್ಳುವುದರಲ್ಲಿ ಜಯಶಾಲಿಗಳೂ ಆಗಿರುವವರ ಗುಂಪಿಗೆ ಸೇರಿದವರು ಆಗಿರುವಿರಿ ಎಂದು ನಾನು ಪ್ರತೀಕ್ಷಿಸುತ್ತೇನೆ... ನಾನು ನಿಮ್ಮೊಂದಿಗೆ ಅಪೇಕ್ಷಿಸುವುದೇನೆಂದರೆ, ಲೋಕವನ್ನು ಜಾಗತಿಕ ಮಹಾಯುದ್ಧದ ಮುಷ್ಟಿಯು ಹಿಡಿತಕ್ಕೊಳಪಡಿಸಲು ಕೊಂಡೊಯ್ಯುವುದಕ್ಕೆ ಪ್ರತಿಯಾಗಿ ಲೋಕವನ್ನು ಈ ಜಾಗತಿಕ ಅನಾಹುತದಿಂದ ರಕ್ಷಿಸಲು ಗರಿಷ್ಠ ಪ್ರಯತ್ನ ಮಾಡಬೇಕು. ಒಳಜಗಳಗಳನ್ನು ಬಲಪ್ರಯೋಗಿಸಿ ಪರಿಹರಿಸುವುದಕ್ಕೆ ಬದಲಾಗಿ ಮಾತುಕತೆ ಮತ್ತು ಚರ್ಚೆಯ ಮಾರ್ಗವನ್ನು ಅವಲಂಬಿಸಬೇಕು. ಹಾಗೆ ಮಾಡಿದರೆ ನಾವು ನಮ್ಮ ಮುಂದಿನ ಪೀಳಿಗೆಗಳಿಗೆ ಅಂಗವಿಕಲತೆ ಮತ್ತು ಅಂಗಹೀನತೆಯ "ಕೊಡುಗೆ"ಯ ಬದಲಾಗಿ ಪ್ರಕಾಶಮಾನವಾದ ಭಾವೀ ಜೀವಿತವನ್ನು ನೀಡುವವರಾಗುವೆವು."

ಬ್ರಿಟಿಷ್ ಪ್ರಧಾನ ಮಂತ್ರಿಗೆ ಅವರು ಹೀಗೆ ಪತ್ರ ಬರೆದರು: "ನನ್ನ ಕೋರಿಕೆ ಏನೆಂದರೆ, ಪ್ರತಿಯೊಂದು ಹಂತದಲ್ಲಿಯೂ ಪ್ರತಿಯೊಂದು ದಿಸೆಯಲ್ಲಿಯೂ ದ್ವೇಷಾಗ್ನಿಯನ್ನು ನಂದಿಸಲು ನಾವು ಸಾಧ್ಯವಿರುವಷ್ಟು ಉತ್ತಮವಾಗಿ ಪ್ರಯತ್ನಿಸಬೇಕು. ನಾವು ನಮ್ಮ ಪ್ರಯತ್ನದಲ್ಲಿ ಜಯಶಾಲಿಗಳಾದರೆ ಮಾತ್ರ ನಾವು ಮುಂದಿನ ನಮ್ಮ ಪೀಳಿಗೆಗಳಿಗೆ ಪ್ರಕಾಶಮಾನವಾದ ಭವಿಷ್ಯವನ್ನು ಖಾತರಿ ನೀಡಲು ಶಕ್ತರಾಗುವೆವು. ನಾವು ನಮ್ಮ ಈ ಪ್ರಯತ್ನದಲ್ಲಿ ಸೋತು ಹೋಗುವುದಾದರೆ, ಮುಂದೆ ಸಂಭವಿಸುವ ಅಣ್ವಸ್ತ್ರಗಳು ಬಳಸಲ್ಪಡುವ ಯುದ್ಧದ ಕಾರಣದಿಂದ ನಮ್ಮ ಮುಂದಿನ ಪೀಳಿಗೆಗಳು ಎಲ್ಲ ಸ್ಥಳಗಳಲ್ಲೂ ನಮ್ಮ ಕೃತ್ಯಗಳ ಭಯಾನಕ ಪರಿಣಾಮಗಳನ್ನು ಅನುಭವಿಸುವರು ಮತ್ತು ಜಾಗತಿಕ ವಿನಾಶಕ್ಕೊಯ್ದ ತಮ್ಮ ಹಿರಿಯರನ್ನು ಅವರು ಎಂದೂ ಕ್ಷಮಿಸಲಾರರು."

**ದೇಶದ್ರೋಹ ಮತ್ತು ಸರ್ಕಾರದ ವಿರುದ್ಧ ವರ್ತಿಸುವುದು ದೇಶದ ಶಾಂತಿ ಮತ್ತು ಭದ್ರತೆಗೆ ಅಪಾಯಕಾರಿ**

"ಇಸ್ಲಾಮಿನ ಅಧ್ಯಾಪನೆ ಪ್ರಕಾರ ದೇವನು ಎಲ್ಲ ರೀತಿಯ ಮೋಸಗಾರಿಕೆ, ದೇಶದ ವಿರುದ್ಧ ಅಥವಾ ಸರಕಾರದ ವಿರುದ್ಧ ಮಾಡುವ ವಿದ್ರೋಹಕರ ಕೃತ್ಯಗಳನ್ನು ನಿಷಿದ್ಧಗೊಳಿಸಿದ್ದಾನೆ. ಏಕೆಂದರೆ ದೇಶದ್ರೋಹ ಮತ್ತು ಸರ್ಕಾರದ ವಿರುದ್ಧ ವರ್ತಿಸುವುದು ದೇಶದ ಶಾಂತಿ ಮತ್ತು ಭದ್ರತೆಗೆ ಅಪಾಯ ಉಂಟುಮಾಡುತ್ತದೆ. ಆಂತರಿಕ ಗಲಭೆಗಳು ಮತ್ತು ವಿದ್ರೋಹಕರ ಕೃತ್ಯಗಳು ಯಾವಾಗಲೂ ಬಾಹ್ಯ ಜಗಳಗಳನ್ನು ಆಮಂತ್ರಿಸುತ್ತವೆ ಮತ್ತು ಆಂತರಿಕ ಗಲಭೆಗಳಿಂದ ಬಾಹ್ಯ ಶತ್ರುಗಳು ಧೈರ್ಯಗೊಂಡು ಹಸ್ತಕ್ಷೇಪ ನಡೆಸಲು ಮುಂದಾಗುತ್ತಾರೆ. ತನ್ನ ದೇಶದ ವಿರುದ್ಧ ಮಾಡುವ ವಿದ್ರೋಹಗಳಿಂದ ಅತ್ಯಂತ ತೀವ್ರ ಅಪಾಯಕರ ಪರಿಣಾಮಗಳು ತಲೆದೋರಬಹುದು. ಒಂದು ದೇಶದ ಬಗ್ಗೆ ನಿಷ್ಠೆ ಮತ್ತು ಭಕ್ತಿ ತೋರಿಸಬೇಕಾದುದು ಸಹನೆದೋರುವುದರ ಮೂಲಕ, ಉನ್ನತ ನೈತಿಕಗುಣಗಳನ್ನು ತೋರಿಸುವುದರ ಮತ್ತು ದೇಶದ ನಿಯಮಗಳನ್ನು ಅನುಸರಿಸುವ ಮೂಲಕವಾಗಿದೆ."

(ಮಿಲಿಟರಿ ಹೆಡ್‌ಕ್ವಾರ್ಟರ್, ಕೋಬ್ಲೆನ್ಸ್, ಜರ್ಮನಿಯಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್ ಮಾಡಿದ ಭಾಷಣ, 2012)

**ಸತ್ಯ ಮತ್ತು ನ್ಯಾಯಪಾಲನೆಯ ವಾತಾವರಣ ಸೃಷ್ಟಿಯಾಗಲಿ**

"ಇಂದು ಲೋಕವು ಒಂದು ಜಾಗತಿಕ ಗ್ರಾಮವಾಗಿರುವುದಾಗಿ ನಾವು ಕಾಣುತ್ತೇವೆ. ಮಾನವರೆಲ್ಲರೂ ಪರಸ್ಪರ ಬಹಳ ಹತ್ತಿರವಾಗಿರುವರು. ಎಲ್ಲ ದೇಶಗಳಲ್ಲೂ ಎಲ್ಲ ಜನಾಂಗಗಳ, ಎಲ್ಲ ಧರ್ಮಗಳ ಮತ್ತು ಎಲ್ಲ ಸಂಸ್ಕೃತಿಗಳ ಜನರನ್ನು ಕಾಣಬಹುದಾಗಿದೆ. ಆದ್ದರಿಂದ ಪ್ರತಿ ದೇಶದ ನಾಯಕರು ತಮ್ಮ

ದೇಶದ ನಿವಾಸಿಗಳಾದ ಎಲ್ಲರ ಭಾವನೆಗಳನ್ನು ಗೌರವಿಸಬೇಕು. ರಾಜಕಾರಣಿಗಳು ಮತ್ತು ಸರಕಾರಗಳು ಸತ್ಯ ಮತ್ತು ನ್ಯಾಯಪಾಲನೆಯ ವಾತಾವರಣ ಸೃಷ್ಟಿಯಾಗುವಂತಹ ನಿಯಮಗಳನ್ನು ರಚಿಸಲು ಕಠಿಣ ಪ್ರಯತ್ನಮಾಡಬೇಕು. ಜನರಿಗೆ ಕಷ್ಟಕರವಾದ ಮತ್ತು ನಿರಾಶದಾಯಕ ನಿಯಮಗಳನ್ನು ರಚಿಸಬಾರದು. ಅನ್ಯಾಯ ಮತ್ತು ದೌರ್ಜನ್ಯವನ್ನು ಅಳಿಸಿಬಿಡಬೇಕು ಮತ್ತು ನಿಜವಾದ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಬೇಕು. ಇದಕ್ಕೆ ಇರುವ ಉತ್ತಮ ಮಾರ್ಗ ಸೃಷ್ಟಿಕರ್ತನಾದ ದೇವನನ್ನು ಲೋಕವು ಗುರುತಿಸಬೇಕು ಎಂಬುದಾಗಿದೆ. ಎಲ್ಲ ರೀತಿಯ ನಿಷ್ಠೆಗಳು ದೇವನೊಂದಿಗೆ ಇರುವ ನಿಷ್ಠೆಯ ಬುನಾದಿಯನ್ನು ಹೊಂದಿರಬೇಕು. ಹೀಗೆ ಮಾಡಲು ಸಾಧ್ಯವಾದರೆ ಅತ್ಯುನ್ನತ ಮಟ್ಟದ ದೇಶನಿಷ್ಠೆಯು ಎಲ್ಲ ದೇಶಗಳಲ್ಲಿ ಸ್ಥಾಪಿತವಾಗುವುದನ್ನು ನಾವು ಕಾಣುವೆವು. ಲೋಕದಾದ್ಯಂತ ಶಾಂತಿ ಮತ್ತು ಭದ್ರತೆ ಸ್ಥಾಪನೆಯಾಗುವ ಮಾರ್ಗಗಳು ತೆರೆದುಕೊಳ್ಳುವುವು." (2012ರಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಮಿಲಿಟರಿ ಹೆಡ್‌ಕ್ವಾರ್ಟರ್ಸ್ ಕೋಬ್ಲೆನ್ಸ್, ಜರ್ಮನಿಯಲ್ಲಿ ಮಾಡಿದ ಭಾಷಣ)

ಸಾಮರಸ್ಯ, ನೀತಿ – ನ್ಯಾಯ ಮತ್ತು ಜಾಗತಿಕ ಶಾಂತಿ ಸ್ಥಾಪನೆಗೆ ಸಂಬಂಧಿಸಿ ಜಾಗತಿಕ ಅಹ್ಮದಿಯಾ ಜಮಾಅತಿನ ನೇತಾರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರ(ಅಯ್ಯದಹುಲ್ಲಾಹ್) ಪ್ರಾಮಾಣಿಕ ಪ್ರಯತ್ನಗಳ ಮತ್ತು ಪ್ರಭಾವಶಾಲಿ ಉಪದೇಶಗಳ ಸಂಕ್ಷಿಪ್ತವಾದ ಪ್ರಸ್ತಾಪದೊಂದಿಗೆ ಕೊನೆಯದಾಗಿ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರ (ವಾಗ್ದತ್ತ ಸುಧಾರಕ) ಮುನ್ನೆಚ್ಚರಿಕೆಯನ್ನು ಪ್ರಸ್ತಾಪಿಸುವುದು ಕೂಡ ಆವಶ್ಯಕ. ಅವರು ಹೇಳುತ್ತಾರೆ:

"ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ, ಎಲೈ ಏಷ್ಯಾದ ಜನಾಂಗಗಳೇ ನೀವೂ ಸುರಕ್ಷಿತರಲ್ಲ. ಎಲೈ ದ್ವೀಪನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದ ವರೆಗೆ ಮೌನಾವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ ಹೇಯವಾದ ಅನೇಕ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮನಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವನ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ ನಿಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ದೇವನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ."

(ಹಕೀಖತುಲ್ ವಹ್ಯ್ – ರೂಹಾನೀ ಖಝಾಇನ್: ಭಾಗ 22, ಪುಟ 269)

ಲೋಕವನ್ನು ನಾಶದಿಂದ ರಕ್ಷಿಸಲು ತಮ್ಮ ಸ್ವಾರ್ಥ ಮತ್ತು ವೈಯಕ್ತಿಕ ಇಚ್ಛೆಗಳನ್ನು ಹಿಂದೆ ಹಾಕಿಕೊಂಡು ತಮ್ಮ ಕರ್ತವ್ಯಗಳನ್ನು ಉತ್ತಮ ರೀತಿಯಲ್ಲಿ ನಿಭಾಯಿಸಲು ಅಲ್ಲಾಹನು ಎಲ್ಲರಿಗೂ ಸೌಭಾಗ್ಯ ನೀಡಲಿ ಮತ್ತು ಅಲ್ಲಾಹನು ನಮ್ಮೆಲ್ಲರನ್ನು ಜಾಗತಿಕ ಮಹಾ ಯುದ್ಧದ ವಿನಾಶಕಾರಿ ದುಷ್ಪರಿಣಾಮಗಳಿಂದ ರಕ್ಷಿಸಲಿ ಎಂದು ಪ್ರಾರ್ಥಿಸೋಣ.

**ಮುಖ್ಯವಾದ ಮನವಿ:** ಈ ಮುಖ್ಯವಾದ ವಿಷಯಕ್ಕೆ ಸಂಬಂಧಿಸಿ ಆವಶ್ಯಕ ವಿವರಗಳಿಗೆ ಜಾಗತಿಕ ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನೇತಾರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರ(ಅಯ್ಯದಹುಲ್ಲಾಹ್) **"World Crisis And Pathway to Peace"** ಎಂಬ ಪುಸ್ತಕವನ್ನು ಓದಿರಿ. ಅದರ ತರ್ಜುಮೆ **"ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ"** ಎಂಬ ಹೆಸರಲ್ಲಿ ಕನ್ನಡದಲ್ಲಿ ಪ್ರಕಟವಾಗಿದೆ. ಆನ್‌ಲೈನ್‌ನಲ್ಲಿ ಕೂಡ ಓದಬಹುದಾಗಿದೆ.

http://www.alislam.org/library/books/ world crisis & the pathway to peace.pdf

http://www.alislam.org/urdu/pdf/Urdu-World-Crisis-and-the-Pathway-to-Peace.pdf

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ – ಯಾರೊಂದಿಗೂ ದ್ವೇಷವಿಲ್ಲ**

ಇಸ್ಲಾಮಿನ ಸಂದೇಶ–2

# ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಂಕ್ಷಿಪ್ತ ಜೀವನ ಚರಿತ್ರೆ

* ಸರ್ ಮುಹಮ್ಮದ್ ಝಫರುಲ್ಲಾ ಖಾನ್

ಅಂತರ್‍ರಾಷ್ಟ್ರೀಯ ನ್ಯಾಯಾಲಯದ ಮಾಜಿ ಅಧ್ಯಕ್ಷರು.

ಪವಿತ್ರ ಖುರ್‌ಆನ್ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ವಚನ ರೂಪದಲ್ಲಿ ಇಪ್ಪತ್ತಮೂರು ವರ್ಷಗಳ ಕಾಲ ಅವತೀರ್ಣಗೊಂಡಿತು. ಹಝ್ರತ್ ಪೈಗಂಬರರು(ಸ) ಪವಿತ್ರ ಖುರ್‌ಆನಿನ ಉಪದೇಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿದರು. ಅವರನ್ನು "ಉತ್ತಮ ಮಾದರಿ" ಎಂದು ಪವಿತ್ರ ಖುರ್‌ಆನ್ ಹೇಳಿದೆ. ಅವರಿಗೆ ಹೀಗೆ ಹೇಳಲು ಆಜ್ಞಾಪಿಸಲಾಗಿತ್ತು:

"ಹೇಳು: ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು. ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ" (ಪವಿತ್ರ ಖುರ್‌ಆನ್ 3:32).

ಇದಕ್ಕೋಸ್ಕರ ಹಝ್ರತ್ ಪೈಗಂಬರರ(ಸ) ಜೀವಿತದ ಬಗ್ಗೆ ಪರಿಪೂರ್ಣ ದಾಖಲೆಗಳು ಲಭಿಸಬೇಕಾಗಿತ್ತು. ಅವರು ತನ್ನ ಜೀವಿತದಲ್ಲಿ ಅನೇಕ ವಿಧದ ಪಾತ್ರಗಳನ್ನು ವಹಿಸಿದ್ದರು. ಅವರು ಅದರಲ್ಲಿ ಪರಿಪೂರ್ಣವಾಗಿ ತನ್ನ ವ್ಯಕ್ತಿತ್ವವನ್ನು ಪ್ರಕಟಿಸಿದರು. ಹಝ್ರತ್ ಪೈಗಂಬರರು(ಸ) ಮಕ್ಕದಲ್ಲಿ ಕ್ರಿಸ್ತಶಕ 570ರಲ್ಲಿ ಜನಿಸಿದರು. ಅವರು ಏಳನೆಯ ಶತಮಾನದ ಪ್ರಥಮ ಮೂರು ದಶಕಗಳಿಗಿಂತ ಹೆಚ್ಚು ಕಾಲ ಜೀವಿಸಿದರು. ಅವರ ಜೀವಿತದ ಬಗ್ಗೆ ಪರಿಪೂರ್ಣ ದಾಖಲೆಗಳು ಲಭಿಸಿದ್ದು ಅವು ಸತ್ಯಾನ್ವೇಷಿಗಳಿಗೆ ಅಧ್ಯಯನ ಮಾಡಲು ಸಹಕಾರಿಯಾಗಿವೆ. ಇದು ಹಝ್ರತ್ ಪೈಗಂಬರರ(ಸ) ಸ್ವಂತ ಪ್ರಯತ್ನದ ಮೂಲಕ ಸಾಧಿಸಲು ಸಾಧ್ಯವಿರಲಿಲ್ಲ. ಹಝ್ರತ್ ಪೈಗಂಬರರ(ಸ) ಜೀವಿತದ ಪ್ರತಿಯೊಂದು ಹೆಜ್ಜೆಯಲ್ಲೂ ದೇವನ ಕೈ ಸಂರಕ್ಷಕ, ಮಾರ್ಗದರ್ಶಕ ಮತ್ತು ಸಹಾಯಕನ ರೂಪದಲ್ಲಿ ಸ್ಪಷ್ಟವಾಗಿ ಕಾರ್ಯ ಪ್ರವೃತ್ತವಾದುದು ಕಾಣಿಸುತ್ತಿತ್ತು.

ಹಝ್ರತ್ ಪೈಗಂಬರರ(ಸ) ಪಿತ ಹಝ್ರತ್ ಪೈಗಂಬರರ(ಸ) ಜನನಕ್ಕೆ ಕೆಲವು ತಿಂಗಳು ಮೊದಲು ಮೃತಪಟ್ಟ ಕಾರಣ ಅವರು ಅನಾಥರಾಗಿ ಜನಿಸಿದರು. ಅವರು ಆರು ವರ್ಷ ಪ್ರಾಯದವರಾಗಿದ್ದಾಗ ಅವರ ತಾಯಿ ಸಹ ಮೃತರಾದರು. ಅವರನ್ನು ಪ್ರೀತಿಯಿಂದ ಸಂರಕ್ಷಿಸಿದ ಅವರ ಪಿತಾಮಹ ಅವರು ಎಂಟು ವರ್ಷ ಪ್ರಾಯದವರಾದಾಗ ಮೃತರಾದರು. ಅನಂತರ ಅವರ ಪಿತೃ ಸಹೋದರ ಅಬೂ ತಾಲಿಬ್ ಅವರ ಸಂರಕ್ಷಕರಾದರು. ಈ ಕಾಲಘಟ್ಟದಲ್ಲೂ ದೇವನೇ ಅವರ ನಿಜವಾದ ಸಂರಕ್ಷಕನೆಂದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಅವರ ಶೈಶವಕಾಲ, ಬಾಲ್ಯಕಾಲ, ತಾರುಣ್ಯಕಾಲ ಮಕ್ಕದ ಭ್ರಷ್ಟ ಮತ್ತು ಕೀಳ್ಮಟ್ಟದ ಸಮಾಜದಲ್ಲಿ ಕಳೆದರೂ ಅವರ ಸ್ವಭಾವಕ್ಕೆ ಯಾವುದೇ ಕಳಂಕ ತಟ್ಟಲಿಲ್ಲ. ದೇವನಿಂದ ಸಂದೇಶವಾಣಿ ಲಭಿಸುವ ಮೊದಲು ಅವರಿಗೆ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ಅರಿವಿಲ್ಲದಿದ್ದರೂ ದೈವಿಕ ಬುದ್ಧಿ ಅವರನ್ನು ಎಲ್ಲ ವಿಧಗಳ ತಪ್ಪು ಕೆಲಸಗಳಿಂದ ರಕ್ಷಿಸಿತು. ಅವರು ಯಾವುದೇ ವಿಗ್ರಹವನ್ನು ಪೂಜಿಸಲಿಲ್ಲ, ವಿಗ್ರಹಕ್ಕೆ ಅರ್ಪಿಸಲ್ಪಟ್ಟ ನೈವೇದ್ಯವನ್ನು ಅವರು ಎಂದೂ ತಿನ್ನಲಿಲ್ಲ, ಮದ್ಯವನ್ನು ಎಂದೂ ಸ್ಪರ್ಶಿಸಲಿಲ್ಲ, ಜುಗಾರಿ ಆಡಲಿಲ್ಲ. ತನ್ನ ಸಮಕಾಲೀನರಾದ ಯುವಕರ ನಿರರ್ಥಕ ಚಟುವಟಿಕೆಗಳಲ್ಲಿ ಎಂದೂ ಭಾಗವಹಿಸಲಿಲ್ಲ.

ಹಝ್ರತ್ ಪೈಗಂಬರರ(ಸ) ತಾರುಣ್ಯ ಕಾಲದಲ್ಲಿ ಅವರು ಕೆಲವು ಸಾರಿ ಮಕ್ಕದ ಸುತ್ತುಮುತ್ತಲಿನ ಗುಡ್ಡಗಾಡುಗಳಲ್ಲಿ ಆಡುಗಳನ್ನೂ ಕುರಿಗಳನ್ನೂ ಮೇಯಿಸುವ ಕೆಲಸಕ್ಕೆ ನಿಯುಕ್ತರಾಗಿದ್ದರು. ಅವರು ಈ ಕೆಲಸ ಮಾಡುತ್ತಿದ್ದಾಗ ಒಮ್ಮೆ ತನ್ನೊಂದಿಗೆ ಕೆಲಸ ಮಾಡುತ್ತಿದ್ದ ಯುವಕನಿಗೆ ಕುರಿ ಮಂದೆಯನ್ನು ವಹಿಸಿಕೊಟ್ಟು ಮಕ್ಕ ನಗರದಲ್ಲಿ ಇತರ ಯುವಕರೊಂದಿಗೆ ರಾತ್ರಿಯನ್ನು ಕಳೆಯಲು ಮಕ್ಕವನ್ನು ತಲಪಿದಾಗ ಅವರು ಒಂದು ವಿವಾಹ ಸಮಾರಂಭದಲ್ಲಿ ಭಾಗವಹಿಸಿ ಕೂಡಲೇ ನಿದ್ರಿಸಲು ತೊಡಗಿದರು. ಇನ್ನೊಂದು ಸಂದರ್ಭದಲ್ಲಿ ಸಹ ಅವರು ನಗರಕ್ಕೆ ಪ್ರಯಾಣ ಮಾಡುವಾಗ ದಾರಿಯಲ್ಲಿಯೇ ಒಂದು ಕಡೆ ತಂಗಿ ಬೆಳಗ್ಗಿನ ತನಕ ನಿದ್ರಿಸಿದರು. ಈ ರೀತಿ ಅವರು ನಗರ ಜೀವಿತದ ಆಕರ್ಷಣೆಗಳಿಂದ ಮುಕ್ತರಾದರು. ಅವರು ಅನಂತರ ಎಂದೂ ನಗರ ಜೀವಿತದ ಆಕರ್ಷಣೆಗೆ ಈಡಾಗಲಿಲ್ಲ. ಎಲ್ಲ ಅಧಿಕೃತ ದಾಖಲೆಗಳು ಸಾಬೀತುಗೊಳಿಸುವುದೇನೆಂದರೆ, ಅವರು ಗಂಭೀರ ವ್ಯಕ್ತಿತ್ವ ಮತ್ತು ಪರಿಶುದ್ಧ ಸ್ವಭಾವ ಗುಣಗಳನ್ನು ಹೊಂದಿದವರಾಗಿದ್ದರು. ಅವರು ಮಕ್ಕದ ಯುವಕರ ಅನಿಯಂತ್ರಿತ ಜೀವಿತ ರೀತಿಯಿಂದ ತನ್ನನ್ನು ದೂರಸರಿಸಿಟ್ಟಿದ್ದು ಅವರ ಸ್ವಭಾವಕ್ಕೆ ಅನುಯೋಜ್ಯವಾಗಿತ್ತು. ಅವರು ಪರಿಷ್ಕೃತ ಮನಸ್ಸನ್ನು ಹೊಂದಿದ್ದು, ಸೂಕ್ಷ್ಮ ಆಸಕ್ತಿಗಳನ್ನೂ ಚಿಂತನೆಯ ಶೀಲವನ್ನೂ ಗಳಿಸಿ ಅವರು

ಬಿಡುವು ಕಾಲಗಳನ್ನು ಹೃದಯದಲ್ಲಿ ಮರುಗುತ್ತಾ ಕಳೆಯುತ್ತಾ ಇದ್ದಾಗ ಇತರ ಯುವಕರು ಒರಟು ಆಟೋಟಗಳಲ್ಲೂ ಅಶ್ಲೀಲ ಪ್ರವೃತ್ತಿಗಳಲ್ಲೂ ಮುಳುಗಿರುತ್ತಿದ್ದರು. ಅವರ ಸುಂದರ ಸ್ವಭಾವಗುಣಗಳು ಮತ್ತು ಗೌರವಾನ್ವಿತ ವ್ಯಕ್ತಿತ್ವವು ಜನರ ಗಮನವನ್ನು ಸೆಳೆಯಿತು. ಅವರನ್ನು ಅಲ್ ಅಮೀನ್ – ಪ್ರಾಮಾಣಿಕನೆಂದು ಜನರು ಕರೆಯತೊಡಗಿದರು. ದೇವನ ಸಂದೇಶವಾಣಿ ಲಭಿಸಿದ ನಂತರ ಅವರು ಜನರಿಗೆ ನೀಡಿದ ಸಂದೇಶವನ್ನು ಜನರು ಪರಿಹಾಸ ಮಾಡಿದಾಗ ದೇವನು ವಿರೋಧಿಗಳೊಂದಿಗೆ ಹೀಗೆ ಹೇಳಲು ಆದೇಶಿಸಿದನು:

"ಇದಕ್ಕೆ ಮುಂಚೆ ಒಂದು ದೀರ್ಘಕಾಲ ನಾನು ನಿಮ್ಮ ಮಧ್ಯೆ ಜೀವಿಸಿದ್ದೆನಲ್ಲವೇ? ಆದರೂ ನೀವು ಮನವರಿಕೆ ಮಾಡುವುದಿಲ್ಲವೇ?" (ಪವಿತ್ರ ಖುರ್‌ಆನ್ 10:17).

ಹಝ್ರತ್ ಪೈಗಂಬರರ(ಸ) ಅತ್ಯಂತ ದೊಡ್ಡ ಶತ್ರುವಿಗೆ ಕೂಡ ಅವರ ಹಿಂದಿನ ಜೀವಿತದ ಬಗ್ಗೆ ಯಾವುದೇ ಆಕ್ಷೇಪವನ್ನು ಪ್ರಕಟಿಸಲು ಸಾಧ್ಯವಿರಲಿಲ್ಲ. ಅವರು ಪ್ರಾಪ್ತ ವಯಸ್ಕರಾದಾಗ ಅವರ ಪಿತೃ ಸಹೋದರ ಖುರೈಶ್ ಗೋತ್ರದ ಖದೀಜ ಎಂಬ ಐಶ್ವರ್ಯವಂತೆ ಮತ್ತು ಗೌರವಾನ್ವಿತೆಯಾದ ವಿಧವೆ ತನ್ನ ವ್ಯಾಪಾರದ ಕೆಲಸಗಳಲ್ಲಿ ಅವರನ್ನು ನೇಮಿಸಲು ಅಪೇಕ್ಷಿಸಿದರು. ಅವರ ವ್ಯಾಪಾರ ಸಂಘಗಳು ಮಕ್ಕದಿಂದ ದಕ್ಷಿಣದ ಯಮನಿಗೂ ಉತ್ತರದ ಸಿರಿಯಾ ದೇಶಕ್ಕೂ ಪ್ರಯಾಣ ಬೆಳೆಸುತ್ತಿದ್ದುವು. ಸಿರಿಯಾಕ್ಕೆ ಪ್ರಯಾಣ ಹೊರಟ ವ್ಯಾಪಾರ ಸಂಘದ ಮೇಲ್ವಿಚಾರಕರನ್ನಾಗಿ ಹಝ್ರತ್ ಮುಹಮ್ಮದರನ್ನು(ಸ) ನೇಮಿಸಲಾಯಿತು. ಅವರು ಬಹಳ ಚೆನ್ನಾಗಿ ಪ್ರಾಮಾಣಿಕತೆಯಿಂದಲೂ ವಿಶ್ವಾಸಾರ್ಹವಾಗಿಯೂ ತನ್ನ ಹೊಣೆಗಾರಿಕೆಯನ್ನು ಈಡೇರಿಸಿದರು. ಅವರಿಗೆ ವ್ಯಾಪಾರದ ಬಗ್ಗೆ ಇದ್ದ ನಿಪುಣತೆಯೂ ಅವರ ಮನೋಹರ ವ್ಯಕ್ತಿತ್ವವೂ ಖದೀಜರನ್ನು ಆಕರ್ಷಿಸಿತು. ಖದೀಜ ಮೊದಲು ಎರಡು ಸಲ ಮದುವೆಯಾಗಿದ್ದು, ಎರಡರಲ್ಲೂ ಮಕ್ಕಳಿದ್ದರು. ಖದೀಜ ನಲ್ವತ್ತನೇ ವಯಸ್ಸನ್ನು ತಲಪಿದ್ದು ಅವರ ದ್ವಿತೀಯ ಪತಿಯು ಮೃತರಾದ ನಂತರ ಅವರಿಗೆ ವಿವಾಹದ ಪ್ರಸ್ತಾಪಗಳು ಲಭಿಸಿದ್ದರೂ ಅವರು ಅವುಗಳನ್ನು ನಿರಾಕರಿಸಿದ್ದರು. ಹಝ್ರತ್ ಮುಹಮ್ಮದ್(ಸ) ತನ್ನನ್ನು ವಿವಾಹವಾಗಲು ಸಿದ್ಧರಾಗುವರೇ ಎಂದು ವಿಚಾರಿಸಲು ತನ್ನ ದಾಸಿಯನ್ನು ಅವರು ಕಳುಹಿಸಿದರು. ಹಝ್ರತ್ ಮುಹಮ್ಮದ್‌ರಿಗೆ(ಸ) ಈ ವಿವಾಹ ಪ್ರಸ್ತಾಪವನ್ನು ಆಲಿಸಿ ಆಶ್ಚರ್ಯವಾಯಿತು. ಅವರು ತನ್ನ ಪಿತೃಸಹೋದರರ ಸಲಹೆ ಕೇಳಿದರು. ಅಬೂ ತಾಲಿಬ್ ತನ್ನ ಸಮ್ಮತಿಯನ್ನು ಸೂಚಿಸಿ ವಿವಾಹವನ್ನು ನಿಶ್ಚಯಿಸಿದರು. ಆಗ ಹಝ್ರತ್ ಮುಹಮ್ಮದ್‌ರಿಗೆ(ಸ) ಇಪ್ಪತ್ತೈದು ವರ್ಷ ಪ್ರಾಯವಾಗಿದ್ದು ಖದೀಜರಿಗಿಂತ ಅವರು ಹದಿನೈದು ವರ್ಷ ಚಿಕ್ಕವರಾಗಿದ್ದರು. ಈ ವಧು–ವರರ ಪ್ರಾಯದಲ್ಲಿ ವ್ಯತ್ಯಾಸವಿದ್ದರೂ ಅವರ ಆರ್ಥಿಕ ಸ್ಥಿತಿ ಸಹ ವ್ಯತ್ಯಾಸವಾಗಿದ್ದರೂ ಈ ವಿವಾಹ ಅತ್ಯಂತ ಸಂತೋಷಕರವಾಗಿತ್ತು. ಖದೀಜ ಅನೇಕ ಮಕ್ಕಳನ್ನು ಹೆತ್ತರು. ಅವರ ಪೈಕಿ ಗಂಡು ಮಕ್ಕಳು ಶೈಶವದಲ್ಲಿ ಮೃತರಾದರು. ಆದರೆ ಹೆಣ್ಣು ಮಕ್ಕಳು ತರುಣಿಯರಾಗಿ ವಿವಾಹಿತೆಯರಾದರು. ಅವರ ಪುತ್ರಿ ಫಾತಿಮ, ಅಬೂ ತಾಲಿಬರ ಪುತ್ರ ಅಲಿಯವರನ್ನು ವಿವಾಹವಾದರು. ಹಝ್ರತ್ ಪೈಗಂಬರರ(ಸ) ವಂಶದವರೆಂದು ಇಂದು ಹೇಳುವವರು ವಾಸ್ತವಿಕವಾಗಿ ಫಾತಿಮರ ಇಬ್ಬರು ಪುತ್ರರಾದ ಹಸನ್ ಮತ್ತು ಹುಸೈನರ ಸಂತಾನಕ್ಕೆ ಸೇರಿದವರಾಗಿದ್ದಾರೆ.

ಹಝ್ರತ್ ಮುಹಮ್ಮದ್(ಸ) ತನ್ನ ಪತ್ನಿ ಖದೀಜರನ್ನು ಬಹಳ ಪ್ರೀತಿಸುವ ಪತಿಯಾಗಿದ್ದರು. ಅವರು ಮನೆಯಲ್ಲಿದ್ದಾಗ ತನ್ನ ಪತ್ನಿಗೆ ಮನೆಗೆಲಸಗಳಲ್ಲಿ ಸಹಾಯ ಮಾಡುತ್ತಿದ್ದರು. ಅವರು ಮಕ್ಕಳ ಪಾಲನೆ ಪೋಷಣೆಯಲ್ಲೂ ಪತ್ನಿಗೆ ಸಹಾಯ ಮಾಡುತ್ತಿದ್ದರು. ಅವರು ತನ್ನ ಪತ್ನಿ ಖದೀಜರೊಂದಿಗೆ ಅವರ ಸಂಪತ್ತಿನ ಬಹುಭಾಗ ಬಡವರಿಗೆ ದಾನವಾಗಿ ನೀಡಲು ಪ್ರೇರಿಸಿದರು. ಖದೀಜ ಸರಳ ಜೀವನವನ್ನು ಮಾಡಲು ಸಮ್ಮತಿಸಿ ತನ್ನ ಸಂಪತ್ತನ್ನು ಬಡವರಿಗೆ ಹಂಚಿದರು. ಅವರು ತನ್ನ ಪತಿಯನ್ನು ಎಷ್ಟು ಆದರ ಭಾವದಿಂದ ಕಾಣುತ್ತಾ ಇದ್ದರೆಂದರೆ, ಹಝ್ರತ್ ಪೈಗಂಬರರಿಗೆ(ಸ) ದೈವಿಕ ಸಂದೇಶ ಲಭಿಸಿದ ಕೂಡಲೇ ಅವರು ತನ್ನ ಪತಿಯನ್ನು ಬೆಂಬಲಿಸಿ ಮುಂದೆ ಆಕೆ ಜೀವಿಸಿದ್ದ ಹತ್ತು ವರ್ಷಗಳಲ್ಲಿ ಅವರಿಗೆ ಸಾಂತ್ವನ ನೀಡುವವರಾಗಿದ್ದರು.

ವಿವಾಹದ ನಂತರ ಕಾಲಕಳೆದಂತೆ ಹಝ್ರತ್ ಮುಹಮ್ಮದ್(ಸ) ದೈವಿಕ ಧ್ಯಾನದಲ್ಲಿ ಮಗ್ನರಾಗಲು ತೊಡಗಿದರು. ಅವರು ಸೂಕ್ಷ್ಮ ಮನಸ್ಸನ್ನೂ ಗಂಭೀರ ಪ್ರಕೃತಿಯನ್ನೂ ಹೊಂದಿದ್ದರು. ಅವರು ಜನರ ಕಷ್ಟಗಳ ಬಗ್ಗೆ ಸಂವೇದನೆವುಳ್ಳವರಾಗಿದ್ದರು. ಅವರು ಬಡಜನರ ಸಹಾಯಕ್ಕೆ ಧಾವಿಸುತ್ತಿದ್ದರು ಮತ್ತು ತನಗೆ ಸಾಧ್ಯವಿರುವ ನೆರವು ನೀಡುತ್ತಿದ್ದರು. ಒಂದು ಸಂದರ್ಭದಲ್ಲಿ ಒಬ್ಬ ವೃದ್ಧ ಗುಲಾಮನು ಭಾರವಾದ ನೀರು ಸೇದುವ ಪಾತ್ರೆಯಿಂದ ನೀರು ಸೇದಿ ತನ್ನ ಯಜಮಾನನ ತೋಟಕ್ಕೆ ನೀರು ಹಾಕುವುದನ್ನು ಕಂಡರು. ಹಝ್ರತ್ ಮುಹಮ್ಮದ್(ಸ) ಆ ವೃದ್ಧನ ಸಮೀಪಕ್ಕೆ ಹೋಗಿ ಸಾಕಷ್ಟು ನೀರನ್ನು ಬಾವಿಯಿಂದ ಸೇದಿ ವೃದ್ಧನಿಗೆ ಸಹಾಯ ಮಾಡಿದರು. ಆತನಿಗೆ ಸಮಾಧಾನದ ಮಾತು ಹೇಳಿ ಸಂತೈಸಿದರು. ವೃದ್ಧನಿಗೆ ಹೀಗೆ ಹೇಳಿದರು: ನಿಮಗೆ ಯಾವಾಗಲಾದರೂ ಸಹಾಯದ ಆವಶ್ಯಕತೆ ಉಂಟಾದರೆ ನನ್ನನ್ನು ಕರೆಯಬಹುದು. ಇಂತಹ ಅನೇಕ ಘಟನೆಗಳು ವರದಿಯಾಗಿವೆ.

ಹಝ್ರತ್ ಮುಹಮ್ಮದರ(ಸ) ಮನಸ್ಸಿಗೆ ಅತ್ಯಂತ ನೋವುಂಟು ಮಾಡಿದುದು ತನ್ನ ಜನರ ಆಧ್ಯಾತ್ಮಿಕ ಮತ್ತು ನೈತಿಕ

ಅಧಃಪತನವಾಗಿತ್ತು. ದೈವಿಕ ಮಾರ್ಗದರ್ಶನ ದೊರಕದೆ ಅವರನ್ನು ರಕ್ಷಿಸಲು ಸಾಧ್ಯವಿಲ್ಲವೆಂದು ಅವರು ಯೋಚಿಸಿದರು. ಆದುದರಿಂದ ಅವರು ಯಾವಾಗಲೂ ದೇವನನ್ನು ಬೇಡಿಕೊಳ್ಳುತ್ತಾ ಇದ್ದರು. ಅವರು ಮಕ್ಕದಿಂದ ದೂರವಿದ್ದ ಬೆಟ್ಟದ ಗುಹೆಗೆ ಹೋಗಿ ಹಲವಾರು ದಿನಗಳ ಕಾಲ ಧ್ಯಾನ ಮತ್ತು ಪ್ರಾರ್ಥನೆಗಳಲ್ಲಿ ಮಗ್ನರಾಗಿರುತ್ತಿದ್ದರು. ಸ್ವಲ್ಪ ಖರ್ಜೂರ ಮತ್ತು ನೀರನ್ನು ತೆಗೆದುಕೊಂಡು ಹೋಗಿ ಅವರು ಬೆಟ್ಟದ ಗುಹೆಯಲ್ಲಿ ಕುಳಿತು ತನ್ನ ಬಗ್ಗೆ ಮತ್ತು ತನ್ನನ್ನು ಬಾಧಿಸುತ್ತಿದ್ದ ಸಮಸ್ಯೆಗಳ ಬಗ್ಗೆ ಚಿಂತಿಸುತ್ತಾ ರಾತ್ರಿ ಹಗಲು ದೇವನೊಂದಿಗೆ ಬೇಡಿಕೊಳ್ಳುತ್ತಿದ್ದರು. ಅವರು ಏಕಾಂತವಾಗಿ ಧ್ಯಾನಿಸುತ್ತಿದ್ದ ಕಾಲದಲ್ಲಿ ಅವರ ಆತ್ಮದಲ್ಲಿದ್ದ ಸಂಘರ್ಷದ ಬಗ್ಗೆ ಹೆಚ್ಚು ತಿಳಿದಿಲ್ಲ. ಅನ್ಯರ ಆತ್ಮ ರಹಸ್ಯಗಳ ಬಗ್ಗೆ ಮನುಷ್ಯರಲ್ಲಿ ಯಾರಿಗೂ ತಿಳಿಯಲು ಸಾಧ್ಯವಿಲ್ಲ. ಅದು ವ್ಯಕ್ತಿ ಮತ್ತು ಸೃಷ್ಟಿಕರ್ತನ ಮಧ್ಯೆ ಇರುವ ಪವಿತ್ರ ರಹಸ್ಯವಾಗಿದೆ. ಆ ಕಾಲಘಟ್ಟವು ಹಝ್ರತ್ ಮುಹಮ್ಮದರನ್ನು(ಸ) ಪ್ರವಾದಿತ್ವಕ್ಕೆ ಸಿದ್ಧಪಡಿಸುವ ಕಾಲಘಟ್ಟವಾಗಿತ್ತು. ಪ್ರವಾದಿ ಮೂಸಾರ(ಅ) ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

"ನನ್ನ ಪ್ರೀತಿಯಿಂದ ನಾನು ನಿನ್ನನ್ನು ಆವರಿಸಿಕೊಂಡೆನು. ನೀನು ನನ್ನ ಕಣ್ಣಮುಂದೆ ಪೋಷಿಸಲ್ಪಡಲಿಕ್ಕಾಗಿ ಹೀಗೆ ಮಾಡಲಾಯಿತು...... ನಿನ್ನನ್ನು ನಾವು ನಾನಾ ತರದಲ್ಲಿ ಪರೀಕ್ಷಿಸಿದೆವು...... ಎಲೈ ಮೂಸಾ, ಆ ಬಳಿಕ ನೀನು (ನಮ್ಮ ಸಂದೇಶ ಪಡೆಯಲು ಪ್ರಾಪ್ತನಾಗುವ) ಸಮುಚಿತ ಮಟ್ಟಕ್ಕೆ ತಲಪಿದೆ. ಹಾಗೆ ನಾನು ನಿನ್ನನ್ನು ನನಗೋಸ್ಕರ ಆಯ್ಕೆಮಾಡಿದೆ." (20: 40–42).

ಹೀಗೆಯೇ ಹಝ್ರತ್ ಮುಹಮ್ಮದರೊಂದಿಗೆ(ಸ) ದೇವನು ವರ್ತಿಸಿದನು. ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳನ್ನು ನೋಡಿರಿ:

"ಅವನು (ಅಲ್ಲಾಹನು) ನಿನ್ನನ್ನು ಅನಾಥನಾಗಿ ಕಂಡು ನಿನಗೆ ಆಶ್ರಯ ನೀಡಲಿಲ್ಲವೇ? (ತನ್ನನ್ನು) ಹುಡುಕುತ್ತಾ ಅಲೆದಾಡುವವನಾಗಿ ಅವನು (ಅಲ್ಲಾಹನು) ನಿನ್ನನ್ನು ಕಂಡನು. ಆಗ ಅವನು (ತನ್ನೆಡೆಗೆ) ಮಾರ್ಗದರ್ಶನ ನೀಡಿದನು. ಅವನು ನಿನ್ನನ್ನು ನಿರ್ಗತಿಕನಾಗಿ ಕಂಡಾಗ ಐಶ್ವರ್ಯವಂತನಾಗಿ ಮಾಡಿದನು." (93: 7–9).

**ದೇವ ಸಂದೇಶವಾಣಿಯ ಆರಂಭ**

ಹಝ್ರತ್ ಮುಹಮ್ಮದರಿಗೆ(ಸ) ನಲ್ವತ್ತು ವರ್ಷ ಪ್ರಾಯವಾದಾಗ ಅವರು ಪ್ರಾರ್ಥಿಸುತ್ತಾ ಕುಳಿತುಕೊಳ್ಳುತ್ತಿದ್ದ ಹಿರಾ ಗುಹೆಯಲ್ಲಿ ಅವರಿಗೆ ಪ್ರಥಮ ದೇವ ಸಂದೇಶವಾಣಿ ಲಭಿಸಿತು. ಅವರು ದೇವದೂತನನ್ನು ಕಂಡರು. ದೇವದೂತ "ಪಠಿಸು" ಎಂದಾಗ ಹಝ್ರತ್ ಮುಹಮ್ಮದ್(ಸ) "ನನಗೆ ಪಠಿಸಲು ತಿಳಿದಿಲ್ಲ" ಎಂದರು. ಆಗ ಆ ದೇವದೂತ ಈ ಕೆಳಗಿನ ವಚನಗಳನ್ನು ಉಚ್ಚರಿಸುವಂತೆ ಒತ್ತಾಯಿಸಿದರು: "(ಸರ್ವವನ್ನೂ) ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ ಪಠಿಸು. ಅವನು ಮನುಷ್ಯನನ್ನು (ಗರ್ಭಾಶಯದಲ್ಲಿ) ಅಂಟಿಕೊಳ್ಳುವ ಮಾಂಸ ಪಿಂಡದಿಂದ ಸೃಷ್ಟಿಸಿದನು. ಪಠಿಸು; ನಿನ್ನ ಪ್ರಭು ಅತಿ ಕೀರ್ತಿವಂತನಾಗಿದ್ದಾನೆ. (ಅವನು) ಲೇಖನಿಯಿಂದ ಕಲಿಸಿದನು. ಮನುಷ್ಯನಿಗೆ ತಿಳಿಯದಿದ್ದುದನ್ನು ಅವನಿಗೆ (ಮನುಷ್ಯನಿಗೆ) ಕಲಿಸಿದನು." (96:2–6). ಹಝ್ರತ್ ಮುಹಮ್ಮದ್(ಸ) ಮೇಲಿನ ವಚನಗಳನ್ನು ಪುನರಾವರ್ತಿಸಿದ ನಂತರ ದೇವದೂತ ಅದೃಶ್ಯರಾದರು.

ಹಝ್ರತ್ ಪೈಗಂಬರರು(ಸ) ನಡುಗುತ್ತಾ ಮನೆಗೆ ಹೋಗಿ ತನ್ನ ಪತ್ನಿಗೆ ಎಲ್ಲ ಸಂಭವಗಳನ್ನು ವಿವರಿಸಿ, "ನನ್ನಂತಹ ಬಲಹೀನ ಮನುಷ್ಯನು ಈ ಭಾರವನ್ನು ಹೇಗೆ ಹೊರಬಲ್ಲನು" ಎಂದು ಆತಂಕ ಸೂಚಿಸಿದರು. ಆಗ ಹಝ್ರತ್ ಪೈಗಂಬರರ(ಸ) ಪತ್ನಿ ಸಾಂತ್ವನ ಹೇಳಿದರು: "ಅಲ್ಲಾಹನಾಣೆ, ಅಲ್ಲಾಹನು ನಿಮಗೆ ಈ ವಚನಗಳನ್ನು ಅವತೀರ್ಣಗೊಳಿಸಿದುದು ನೀವು ನಿಮ್ಮ ಉದ್ದೇಶಲಕ್ಷ್ಯವನ್ನು ತಲುಪದೆ ನಿರಾಶೆ ಹೊಂದಿ ಅಪಮಾನಿತರಾಗಲಿಕ್ಕಾಗಿ ಅಲ್ಲ. ಅಲ್ಲಾಹನು ನಿಮ್ಮನ್ನು ಎಂದೂ ಕೈ ಬಿಡಲಾರನು. ಏಕೆಂದರೆ ನೀವು ನಿಮ್ಮ ಸಂಬಂಧಿಕರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುವಿರಿ. ನೀವು ನಿರಾಶ್ರಿತರಾದ, ನಿಸ್ಸಹಾಯಕರಾದ ಜನರ ಭಾರವನ್ನು ಹೊರುವವರಾಗಿದ್ದೀರಿ. ಸಮುದಾಯದಿಂದ ಅಳಿಸಿ ಹೋಗುತ್ತಿರುವ ಸುಸ್ವಭಾವಗಳು ನಿಮ್ಮ ಮೂಲಕ ಸ್ಥಾಪಿಸಲ್ಪಡುತ್ತವೆ. ನೀವು ಅತಿಥಿಗಳನ್ನು ಸತ್ಕರಿಸುತ್ತಿರುವಿರಿ. ಆಪತ್ತು ಬಂದಾಗ ನೀವು ಜನರಿಗೆ ಸಹಾಯ ಮಾಡುತ್ತೀರಿ. ಇಂತಹ ವ್ಯಕ್ತಿಯನ್ನು ಖಂಡಿತವಾಗಿಯೂ ಅಲ್ಲಾಹನು ಕಷ್ಟಕ್ಕೆ ಗುರಿಪಡಿಸಲಾರ."

ಖದೀಜ ಹಝ್ರತ್ ಪೈಗಂಬರರನ್ನು(ಸ) ತನ್ನ ಚಿಕ್ಕಪ್ಪನ ಮಗ ವರಖನೆಂಬ ವೃದ್ಧ ಕ್ರೈಸ್ತ ಸನ್ಯಾಸಿಯ ಬಳಿಗೆ ಕರೆದುಕೊಂಡು ಹೋದರು. ವರಖನೊಂದಿಗೆ ಹಝ್ರತ್ ಪೈಗಂಬರರು(ಸ) ತನ್ನ ಅನುಭವವನ್ನು ವಿವರಿಸಿದಾಗ ವರಖ ಹೇಳಿದರು: ಪ್ರವಾದಿ ಮೂಸಾರಿಗೆ ಕಾಣಿಸಿಕೊಂಡ ದೇವದೂತನೇ ನಿನಗೂ ಕಾಣಿಸಿಕೊಂಡಿರುವನು. ನಿನ್ನ ಸಮುದಾಯ ನಿನ್ನನ್ನು ಹೊರಗಟ್ಟುವಾಗ ನಿನಗೆ ಸಹಾಯ ಮಾಡಲು ನಾನು ಜೀವಿಸಿರಲು ಬಯಸುತ್ತೇನೆ." ಆಗ ಹಝ್ರತ್ ಪೈಗಂಬರರು(ಸ) ಆಶ್ಚರ್ಯದಿಂದ ಉದ್ಗರಿಸಿದರು: "ನನ್ನ ಸಮುದಾಯ ನನ್ನನ್ನು ಹೊರಗಟ್ಟುವುದೇ?" ಆಗ ವರಖ ಹೇಳಿದರು: "ನಿನಗೆ ಸಂಭವಿಸಿದ ಹಾಗೆ ಬೇರೆ ಯಾರಿಗಾದರೂ ಸಂಭವಿಸಿದಾಗ ಆತನ ಸಮುದಾಯ ಆತನಿಗೆ ವಿರುದ್ಧವಾಗದೆ ಇರಲಿಲ್ಲ."

ಪ್ರವಾದಿ ಮೂಸಾ(ಅ) ಬಗ್ಗೆ ವರಖ ಹೇಳಿದುದು ಬೈಬಲಿನ ಈ ಭವಿಷ್ಯವಾಣಿ ಪ್ರಕಾರವಾಗಿತ್ತು: "ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಏರ್ಪಡಿಸುವೆನು; ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು. ನಾನು ಅವನಿಗೆ ಆಜ್ಞಾಪಿಸಿದ್ದನ್ನೆಲ್ಲ ಅವನು ಅವರಿಗೆ ತಿಳಿಸುವನು. ಅವನು ನನ್ನ ಹೆಸರಿನಲ್ಲಿ ಹೇಳಿದ ಮಾತುಗಳಿಗೆ ಯಾರು ಕಿವಿಗೊಡುವುದಿಲ್ಲವೋ ಅಂಥವರನ್ನು ನಾನು ಶಿಕ್ಷಿಸುವೆನು." (ಧರ್ಮೋಪದೇಶ ಕಾಂಡ 18:18,19).

ಪ್ರಥಮ ದೇವ ಸಂದೇಶವಾಣಿ "(ಸರ್ವವನ್ನೂ) ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ ಪಠಿಸು" ಎಂಬ ವಚನ ಗಮನಾರ್ಹವಾಗಿದೆ. ಅದಲ್ಲದೆ ಪವಿತ್ರ ಖುರ್‌ಆನಿನ ಪ್ರತಿಯೊಂದು ಅಧ್ಯಾಯ "ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ" ಎಂದು ಪ್ರಾರಂಭಿಸಲ್ಪಡುತ್ತದೆ.

ಪ್ರಥಮ ಸಂದೇಶವಾಣಿ ದೊರೆತ ನಂತರ ಸ್ವಲ್ಪ ಕಾಲ ಹೊಸ ಸಂದೇಶಗಳು ಲಭಿಸಲಿಲ್ಲ. ಅನಂತರ ಸಂದೇಶಗಳು ಆಗಾಗ ಲಭಿಸಲು ತೊಡಗಿದುವು. ಹಝ್ರತ್ ಪೈಗಂಬರರು(ಸ) ಹೀಗೆ ವಿವರಿಸಿರುವರು: ನನಗೆ ದೈವಿಕ ಸಂದೇಶವಾಣಿ ವಿವಿಧ ರೀತಿಗಳಲ್ಲಿ ಅವತೀರ್ಣವಾಗುತ್ತವೆ. ಕೆಲವು ಸಾರಿ ಶಬ್ದಗಳು ನನ್ನ ಹೃದಯಕ್ಕೆ ನೇರವಾಗಿ ಬಂದು ಗಂಟೆ ಬಾರಿಸುವ ಹಾಗೆ ಬಾರಿಸುತ್ತವೆ. ಇದು ನನಗೆ ಶಾರೀರಿಕವಾಗಿ ಕಷ್ಟಕರವಾಗುತ್ತದೆ. ಕೆಲವು ಸಾರಿ ಪರದೆಯ ಹಿಂದಿನಿಂದ ಮಾತುಗಳು ಕೇಳಿಸುತ್ತವೆ. ಕೆಲವು ಸಾರಿ ದೇವದೂತ ಬಂದು ನೇರವಾಗಿ ನನಗೆ ಸಂದೇಶವಾಣಿಯನ್ನು ಹೇಳಿಕೊಡುತ್ತಾರೆ. ಪವಿತ್ರ ಖುರ್‌ಆನ್ ಇದರ ಬಗ್ಗೆ ಅಧ್ಯಾಯ 42 ವಚನ 52-53ರಲ್ಲಿ ವಿವರಿಸಿದೆ.

ಪ್ರಾರಂಭದಲ್ಲಿ ನಾಲ್ಕು ಜನರು ಹಝ್ರತ್ ಪೈಗಂಬರರನ್ನು(ಸ) ನಂಬಿದರು. ಅವರ ಪತ್ನಿ ಖದೀಜ, ಅವರ ಪಿತೃ ಸಹೋದರ ಪುತ್ರ ಅಲಿ, ವಿಮೋಚಿತ ಗುಲಾಮ ಝೈದ್ ಮತ್ತು ಆತ್ಮೀಯ ಸ್ನೇಹಿತ ಅಬೂಬಕರ್- ಈ ನಾಲ್ವರಾಗಿದ್ದರು. ದೈವಿಕ ಪ್ರಕಾಶವನ್ನು ಹಬ್ಬಿಸಲು ಈ ನಾಲ್ವರು ಹಝ್ರತ್ ಪೈಗಂಬರರಿಗೆ(ಸ) ಬೆಂಬಲಿಗರಾದರು. ಇದರ ಬಗ್ಗೆ ಸಮಾಚಾರ ತಿಳಿದಾಗ ಮಕ್ಕದ ಜನರು ಪರಿಹಾಸ ಮಾಡಿದರು. ಆದರೆ ದೀರ್ಘಕಾಲ ಪರಿಹಾಸ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ. ವಚನಗಳ ನಂತರ ವಚನಗಳಾಗಿ ದೇವ ಸಂದೇಶವಾಣಿ ಅವತೀರ್ಣಗೊಳ್ಳುತ್ತಾ ಇತ್ತು. ಒಬ್ಬೊಬ್ಬರಾಗಿ ಜನರು ಅದರ ಕಡೆಗೆ ಆಕರ್ಷಿಸಲ್ಪಟ್ಟರು. ಪರಿಹಾಸದ ನಂತರ ಅವರ ಬಗ್ಗೆ ಲಕ್ಷ್ಯ ನೀಡಲು ಮಕ್ಕದವರು ತೊಡಗಿದರು. ಹಝ್ರತ್ ಮುಹಮ್ಮದರ(ಸ) ಏಕದೇವ ವಿಶ್ವಾಸದ ಪ್ರಚಾರ ತಮ್ಮ ಜೀವಿತವನ್ನೂ ತಮ್ಮ ಜೀವನಾಧಾರವನ್ನೇ ಅಪಾಯಕ್ಕೆ ಗುರಿಪಡಿಸುತ್ತಾ ಇದೆ ಎಂದು ಮಕ್ಕದ ಬಹುದೇವಾರಾಧಕರು ಚಿಂತಿಸಲು ತೊಡಗಿದರು. ವಿಗ್ರಹರಾಧನೆ ತ್ಯಜಿಸಿದರೆ ಮಕ್ಕವು ಯಾತ್ರಾಸ್ಥಳವಾಗಿ ಮುಂದುವರಿಯಲಾರದು, ಮಕ್ಕವು ಒಂದು ಮುಖ್ಯ ನಗರವಾಗಿ ಬಾಕಿಯಾಗಲಾರದು ಮತ್ತು ಅದರ ಆರ್ಥಿಕ ವ್ಯವಸ್ಥೆ ಬಿಗಡಾಯಿಸುವುದೆಂದು ಮಕ್ಕದ ಬಹುದೇವಾರಾಧಕರು ಯೋಚಿಸಿದರು. ವ್ಯಾಪಾರ ಸಂಘಗಳು ಸಹ ಮಕ್ಕ ಪ್ರವೇಶಿಸದೆ ಹಾದಿ ಬದಲಾಯಿಸಿ ಹೋಗುವುವು. ಆದುದರಿಂದ ತಮ್ಮ ಜೀವಿತಕ್ಕೂ ಸಂಪತ್ತಿಗೂ ಅಪಾಯಕರವಾದ ಇದನ್ನು ಬಗ್ಗು ಬಡಿಯಬೇಕೆಂದು ಅವರು ನಿರ್ಧರಿಸಿದರು.

ಹೊಸ ವಿಶ್ವಾಸಾದರ್ಶಗಳು ಬಡವರನ್ನು ಮತ್ತು ತುಳಿಯಲ್ಪಟ್ಟವರನ್ನು ಬಹಳ ಆಕರ್ಷಿಸಿತು. ಅಪಮಾನ ಮತ್ತು ಅತ್ಯಂತ ಹೆಚ್ಚು ಕಷ್ಟ ಅನುಭವಿಸುತ್ತಿದ್ದ ಗುಲಾಮರು ಹಝ್ರತ್ ಪೈಗಂಬರರ(ಸ) ಸಂದೇಶ ತಮಗೆ ವಿಮೋಚನೆಯನ್ನು ತರಬಹುದೆಂದು ಪ್ರತೀಕ್ಷಿಸಲು ತೊಡಗಿದರು. ಆ ಕಾಲಘಟ್ಟದಲ್ಲಿ ಮಹಿಳೆಯರು ಪ್ರಾಣಿಗಳಿಗಿಂತ ಕೀಳಾಗಿ ಕೆಲವು ವಿಷಯಗಳಲ್ಲಿ ಗಣಿಸಲ್ಪಡುತ್ತಿದ್ದರು. ತಮಗೆ ತಮ್ಮ ಪಿತ, ಪತಿ, ಸಹೋದರ ಮತ್ತು ಪುತ್ರರೊಂದಿಗೆ ಸಮಾನ ಗೌರವ ಸಿಗಬಹುದು ಎಂದು ಆಶಿಸಲು ತೊಡಗಿದರು. ತರುಣರು ಗೌರವಾನ್ವಿತ ಜೀವಿತದ ಬಗ್ಗೆ ಕನಸುಗಳನ್ನು ಕಾಣಲು ತೊಡಗಿದರು. ಪ್ರಥಮ ಘಟ್ಟದಲ್ಲಿ ಈ ವರ್ಗದ ಜನರು ಸತ್ಯವಿಶ್ವಾಸಿಗಳಾಗಲು ತೊಡಗಿದರು. ಈ ಜನರ ಗುಂಪು ವರ್ಧಿಸಿದಾಗ ಮಕ್ಕದ ಬಹುದೇವಾರಾಧಕರು ಹಿಂಸಾಚಾರಕ್ಕೆ ಪ್ರಾರಂಭಿಸಿದರು. ಅದು ದಿನಗಳೆದಂತೆ ಹೆಚ್ಚು ಕ್ರೂರವಾಗಲು ತೊಡಗಿತು. ಆದರೆ ಅವರಿಗೆ ಏಕದೇವ ವಿಶ್ವಾಸ, ಮಾನವರ ಗೌರವ, ಸಮಾನತೆ ಮತ್ತು ಉನ್ನತ ಗುರಿಯನ್ನು ಹೊಂದಿದ ಜೀವಿತವನ್ನು ಪ್ರತಿಪಾದಿಸುವವರ ಸಂಖ್ಯೆಯನ್ನು ತಗ್ಗಿಸಲು ಸಾಧ್ಯವಾಗಲಿಲ್ಲ.

## ವಿರೋಧ ಮತ್ತು ಹಿಂಸಾಚಾರ

ಮಕ್ಕದ ಖುರೈಶ್ ಗೋತ್ರದ ಜನರು ಹೊಸ ಧರ್ಮದ ಉದಯದಿಂದ ತಮಗೆ ಸಂಭವಿಸಬಹುದಾದ ಹಾನಿಯಿಂದ ಭೀತಿಗೊಂಡು ಹಝ್ರತ್ ಪೈಗಂಬರರ(ಸ) ಚಿಕ್ಕಪ್ಪ ಅಬೂತಾಲಿಬರ ಬಳಿಗೆ ಒಂದು ಪ್ರತಿನಿಧಿ ಸಂಘವನ್ನು ಕಳುಹಿಸಿದರು. ಅವರ ಸಹೋದರ ಪುತ್ರನು ವಿಗ್ರಹಾರಾಧನೆಯನ್ನು ಖಂಡಿಸುವುದು ತಮಗೆ ಅಸಹನೀಯವಾಗಿದ್ದರೂ ಅಬೂತಾಲಿಬರ ಮೇಲೆ ಹೊಂದಿದ ಗೌರವದಿಂದ ಅವನ ವಿರುದ್ಧ ಕಠಿಣ ಕ್ರಮಕೈಗೊಂಡಿಲ್ಲ ಎಂದು ಅವರು ವಿವರಿಸಿದರು. ಅವರು ಹೇಳಿದರು: "ನಿಮ್ಮ ಸಹೋದರ ಪುತ್ರ ತನ್ನ ನಡೆವಳಿಕೆಯನ್ನು ಬದಲಾಯಿಸುವುದಿಲ್ಲವಾದರೆ ನೀವು ಅವನನ್ನು

ಬಿಟ್ಟುಬಿಡಬೇಕಾಗುವುದು. ನೀವು ಅವನನ್ನು ಬಿಡುವುದಿಲ್ಲವಾದರೆ ನಾವು ನಿಮ್ಮ ನಾಯಕತ್ವವನ್ನು ಅಲ್ಲಗಳೆದು ನಿಮ್ಮನ್ನು ಬಿಟ್ಟುಬಿಡುವೆವು."

ಅಬೂತಾಲಿಬರು ತನ್ನ ಸಹೋದರ ಪುತ್ರನಾದ ಹಝ್ರತ್ ಮುಹಮ್ಮದರಿಗೆ(ಸ) ಖುರೈಶರ ಸಂದೇಶವನ್ನು ತಿಳಿಸಿದರು. ಹಝ್ರತ್ ಪೈಗಂಬರರು(ಸ) ತನ್ನ ಚಿಕ್ಕಪ್ಪ ಅನುಭವಿಸುವ ವಿಷಮ ಪರಿಸ್ಥಿತಿಯ ಬಗ್ಗೆ ಸಹಾನುಭೂತಿ ಸೂಚಿಸುತ್ತಾ ದೃಢವಾಗಿ ಹೀಗೆ ಹೇಳಿದರು: "ನಾನು ದೇವನ ಆಜ್ಞೆ ಪ್ರಕಾರ ವರ್ತಿಸುತ್ತಿದ್ದೇನೆ. ನಾನು ದೇವನಿಗೆ ಅವಿಧೇಯನಾಗಲಾರೆ. ನೀವು ನಿಮ್ಮ ಜನರನ್ನು ಬಿಟ್ಟುಬಿಡಬೇಡಿರಿ. ನೀವು ನನಗೆ ಬೆಂಬಲ ನೀಡಲು ನಾನು ಹೇಳುವುದಿಲ್ಲ. ನೀವು ನನ್ನನ್ನು ಬಿಟ್ಟುಬಿಡಿರಿ. ನಾನು ಏಕನಾದ ಮತ್ತು ಯಾರೂ ಸಮಾನರಿಲ್ಲದ ಅಲ್ಲಾಹನ ನಾಮದಲ್ಲಿ ಪ್ರಮಾಣಮಾಡಿ ಹೇಳುತ್ತೇನೆ. ನನ್ನ ಬಲಭಾಗದಲ್ಲಿ ಸೂರ್ಯನನ್ನೂ ಎಡಭಾಗದಲ್ಲಿ ಚಂದ್ರನನ್ನೂ ಅವರು ತಂದು ನಿಲ್ಲಿಸಿದರೂ ನಾನು ನನಗೆ ದೇವನಿಂದ ದೊರೆತ ಸತ್ಯವನ್ನು ಪ್ರಚಾರ ಮಾಡುವುದನ್ನು ಬಿಟ್ಟುಬಿಡಲಾರೆನು. ನಾನು ಮೃತಪಡುವ ತನಕ ನನ್ನ ಕೆಲಸವನ್ನು ಮುಂದುವರಿಸುತ್ತಾ ಹೋಗುವೆನು."

ಅಬೂ ತಾಲಿಬ್ ಗಾಢವಾಗಿ ಚಿಂತಿಸಿದರು. ಅವರು ಹಝ್ರತ್ ಪೈಗಂಬರರ(ಸ) ಸಂದೇಶವನ್ನು ನಂಬಲು ಸಿದ್ಧರಿರಲಿಲ್ಲ. ಆದರೆ ಅವರು ಹಝ್ರತ್ ಪೈಗಂಬರರನ್ನು(ಸ) ತುಂಬಾ ಪ್ರೀತಿಸುತ್ತಿದ್ದರು. ತನ್ನ ಸಹೋದರ ಪುತ್ರನ ದೃಢ ನಿರ್ಧಾರದ ಬಗ್ಗೆ ಅವರು ಅಭಿಮಾನ ಹೊಂದಿದರು. ಅವರು ಹೇಳಿದರು: ಹೇ ನನ್ನ ಸಹೋದರ ಪುತ್ರಾ, ನೀನು ಹೋಗು, ನಿನ್ನ ಕರ್ತವ್ಯವನ್ನು ನಿರ್ವಹಿಸು. ನನ್ನ ಗೋತ್ರದವರು ನನ್ನನ್ನು ಬಿಟ್ಟು ಬಿಡುವರಾದರೆ ಬಿಟ್ಟುಬಿಡಲಿ. ನಾನು ನಿನ್ನನ್ನು ಬಿಡಲಾರೆ.

ಮಕ್ಕದ ಅವಿಶ್ವಾಸಿಗಳು ಸತ್ಯವಿಶ್ವಾಸಿಗಳನ್ನು ಹಿಂಸಾಚಾರಕ್ಕೆ ಹೆಚ್ಚು ಹೆಚ್ಚಾಗಿ ಗುರಿಪಡಿಸಲು ತೊಡಗಿದರು. ಹಝ್ರತ್ ಪೈಗಂಬರರು(ಸ) ತನ್ನ ಅನುಯಾಯಿಗಳಲ್ಲಿ ಯಾರಾದರೂ ಬಯಸುವವರಾದರೆ ಕೆಂಪು ಸಮುದ್ರ ದಾಟಿ ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಬಹುದೆಂದು ಸಲಹೆ ನೀಡಿದರು. ಅಲ್ಲಿ ಆಡಳಿತೆ ನಡೆಸುತ್ತಿರುವ ಕ್ರೈಸ್ತ ಚಕ್ರವರ್ತಿಯ ರಾಜ್ಯದಲ್ಲಿ ನೆಮ್ಮದಿಯಿಂದ ಜೀವಿಸಬಹುದಾಗಿತ್ತು. ಸತ್ಯವಿಶ್ವಾಸಿಗಳ ಒಂದು ಗುಂಪು ಹಝ್ರತ್ ಪೈಗಂಬರರ(ಸ) ಒಬ್ಬ ಸಂಬಂಧಿಕನ ನೇತೃತ್ವದಲ್ಲಿ ಅಬಿಸೀನಿಯಕ್ಕೆ ವಲಸೆ ಹೋಯಿತು. ಮಕ್ಕದ ಖುರೈಶ್ ಗೋತ್ರದ ಪ್ರತಿನಿಧಿ ಸಂಘ ಅಲ್ಲಿಗೆ ಹೋಗಿ ಚಕ್ರವರ್ತಿಯೊಂದಿಗೆ ಸತ್ಯವಿಶ್ವಾಸಿಗಳನ್ನು ತಮ್ಮ ವಶಕ್ಕೊಪ್ಪಿಸಲು ಅಪೇಕ್ಷಿಸಿತು. ಚಕ್ರವರ್ತಿ ಎರಡು ಪಕ್ಷದವರ ಹೇಳಿಕೆಗಳನ್ನು ಪರಿಶೀಲಿಸಿ ಮಕ್ಕದ ಅವಿಶ್ವಾಸಿಗಳ ಬೇಡಿಕೆಯನ್ನು ನಿರಾಕರಿಸಿದರು.

ಇದೇ ಸಮಯದಲ್ಲಿ ಹಝ್ರತ್ ಉಮರ್(ರ) ಮತ್ತು ಹಝ್ರತ್ ಪೈಗಂಬರರ ಚಿಕ್ಕಪ್ಪ ಹಮ್‌ಝ ಮುಸ್ಲಿಮರಾದುದರಿಂದ ಮಕ್ಕದ ಮುಸ್ಲಿಮರಿಗೆ ಸ್ವಲ್ಪ ಮಟ್ಟಿಗೆ ಸಹಾಯ ಮತ್ತು ಪ್ರೋತ್ಸಾಹ ದೊರಕಿತು. ಆದರೆ ಈ ಮತಾಂತರಗಳಿಂದ ಮಕ್ಕದ ಅವಿಶ್ವಾಸಿಗಳ ವರ್ತನೆಯಲ್ಲಿ ವ್ಯತ್ಯಾಸ ಉಂಟಾಗಲಿಲ್ಲ. ಹಝ್ರತ್ ಉಮರರನ್ನು ಇತರ ಸತ್ಯವಿಶ್ವಾಸಿಗಳ ಹಾಗೆಯೇ ಹಿಂಸೆಗೆ ಗುರಿಪಡಿಸಲಾಯಿತು. ಹಿಂಸಾಚಾರ ವಾಸ್ತವಿಕವಾಗಿ ಹೆಚ್ಚೇ ಆಯಿತು. ಹಝ್ರತ್ ಪೈಗಂಬರರನ್ನೂ(ಸ) ಅವರ ಕುಟುಂಬದವರನ್ನೂ ಸತ್ಯವಿಶ್ವಾಸಿಗಳನ್ನೂ ಹಸಿವೆಯಿಂದ ಬಳಲುವಂತೆ ಮಾಡಲಾಯಿತು. ಅವರನ್ನು ಅಬೂತಾಲಿಬರ ಮಾಲಿಕತ್ವಕ್ಕೆ ಸೇರಿದ ಒಂದು ಕಿರಿದಾದ ಕಣಿವೆ ಪ್ರದೇಶದಲ್ಲಿ ನಿರ್ಬಂಧಿತ ಸ್ಥಿತಿಯಲ್ಲಿ ವಾಸಿಸುವಂತೆ ಮಾಡಲಾಯಿತು. ಅವರೊಂದಿಗೆ ಎಲ್ಲ ಸಂಬಂಧವನ್ನು ಕಡಿದು ಹಾಕಲಾಯಿತು. ಇದು ಸತ್ಯವಿಶ್ವಾಸಿಗಳಿಗೆ ಬಹಳ ಕಷ್ಟಕರವಾಗಿತ್ತು. ವಿಶಿಷ್ಟವಾಗಿ ಮಕ್ಕಳು ಮತ್ತು ವೃದ್ಧರು ಬಹಳ ಕಷ್ಟ ಅನುಭವಿಸಿದರು. ಅಂದಾಜು ಮೂರು ವರ್ಷಗಳ ತನಕ ಈ ಬಹಿಷ್ಕಾರ ಮುಂದುವರಿಯಿತು. ಮಕ್ಕದ ಕೆಲವು ಪ್ರಮುಖರು ತಮ್ಮ ಗೋತ್ರದ ಜನರ ಬರ್ಬರತೆಯ ವಿರುದ್ಧ ಪ್ರತಿಭಟಿಸಿ ಹಝ್ರತ್ ಪೈಗಂಬರರನ್ನೂ(ಸ) ಅವರ ಅನುಯಾಯಿಗಳನ್ನೂ ಅವರನ್ನು ನಿರ್ಬಂಧದಲ್ಲಿರಿಸಲಾದ ಸ್ಥಳದಿಂದ ಹೊರಗೆ ಬರಲು ಹೇಳಿದರು. ಹಾಗೆ ಬಹಿಷ್ಕಾರ ಕೊನೆಗೊಂಡಿತು. ಆದರೆ ಆ ಸಮಯದಲ್ಲಿ ಅನುಭವಿಸಿದ ಕಷ್ಟದ ಕಾರಣ ಖದೀಜ ಮತ್ತು ಅಬೂತಾಲಿಬರ ಆರೋಗ್ಯ ಕೆಟ್ಟು ಹೋಯಿತು. ಖದೀಜ ಕೆಲವು ದಿವಸಗಳ ನಂತರ ಮೃತರಾದರು. ಅಬೂತಾಲಿಬ್ ಒಂದು ತಿಂಗಳ ನಂತರ ಮೃತರಾದರು. ಪ್ರಿಯ ಪತ್ನಿಯು ನಿಧನ ಹೊಂದಿದುದರಿಂದ ಹಝ್ರತ್ ಪೈಗಂಬರರು(ಸ) ಲೌಕಿಕ ಸುಖ ಸಾಂತ್ವನಗಳಿಂದ ವಂಚಿತರಾದರು. ಅಬೂತಾಲಿಬರು ಮೃತರಾದುದರಿಂದ ಹಝ್ರತ್ ಪೈಗಂಬರರು(ಸ) ಹೆಚ್ಚು ಹಿಂಸಾಚಾರಗಳಿಗೆ ಗುರಿಯಾದರು. ಹಝ್ರತ್ ಪೈಗಂಬರರು(ಸ) ಮಕ್ಕದ ಯಾರಿಗೂ ಸಂದೇಶ ತಲಪಿಸದ ಹಾಗೆ ಮತ್ತು ಅವರನ್ನು ಯಾರೂ ಸಂದರ್ಶಿಸದ ಹಾಗೆ ಮಕ್ಕದವರು ಅನೇಕ ವಿಧಗಳಲ್ಲಿ ಪ್ರಯತ್ನಿಸಿದರು. ಇಂತಹ ಪರಿಸ್ಥಿತಿಯಲ್ಲಿ ಅವರು ತಾಯಿಫ್‌ಗೆ ಸಂದೇಶ ತಲಪಿಸಲು ನಿರ್ಧರಿಸಿದರು. ತಾಯಿಫ್ ಮಕ್ಕದ ದಕ್ಷಿಣ ಪೂರ್ವ ದಿಕ್ಕಿನಲ್ಲಿ ಸುಮಾರು 60 ಮೈಲು ದೂರವಿದ್ದ ಯಾತ್ರಾ ನಗರವಾಗಿತ್ತು. ಅದು ಮಕ್ಕದ ನಗರಕ್ಕಿಂತ ಹೆಚ್ಚು ರಮಣೀಯವಾಗಿತ್ತು. ತಾಯಿಫ್‌ಗೆ ಹೋಗುವಾಗ ಹಝ್ರತ್ ಪೈಗಂಬರರು(ಸ) ತನ್ನ ವಿಮೋಚಿತ ಗುಲಾಮ ಝೈದರನ್ನು ಜೊತೆಗೆ ಸೇರಿಸಿಕೊಂಡಿದ್ದರು.

ತಾಯಿಫ್ ನಗರದ ಪ್ರಮುಖರು ಹಝ್ರತ್ ಪೈಗಂಬರರನ್ನು(ಸ) ಬರಮಾಡಿಕೊಂಡು ಮಾತನಾಡಲು ಬಿಟ್ಟರು. ಆದರೆ ಅವರ

ಉಪದೇಶಕ್ಕೆ ಕಿವಿಗೊಡಲಿಲ್ಲ. ಆದರೆ ಅನಂತರ ಅವರಲ್ಲಿ ಆತಂಕ ತಲೆದೋರಿತು. ಮಕ್ಕದವರು ತಮ್ಮೊಂದಿಗೆ ಜಗಳಕ್ಕೆ ಬರಬಹುದೆಂದು ಅವರು ಭಯಪಟ್ಟರು. ಏಕೆಂದರೆ ಮಕ್ಕದವರೊಂದಿಗೆ ತಾಯಿಫ್ ಜನರಿಗೆ ವ್ಯಾಪಾರ ಸಂಬಂಧಗಳಿದ್ದುವು. ಮಕ್ಕದವರೊಂದಿಗೆ ಸ್ನೇಹ ಸಂಬಂಧಕ್ಕೆ ಭಂಗವುಂಟು ಮಾಡಲು ಅವರು ಬಯಸಲಿಲ್ಲ. ಅವರು ನಗರದ ಪುಂಡು ಪೋಕರಿಗಳನ್ನು ಕರೆದು ಹಝ್ರತ್ ಪೈಗಂಬರರನ್ನು ಅಪಹಾಸ್ಯಕ್ಕೆ ಗುರಿಪಡಿಸಿ ಕಲ್ಲೆಸೆದು ಗಾಯಗೊಳಿಸಿ ಹೊಡೆದೋಡಿಸುವಂತೆ ಮಾಡಿದರು. ಹಝ್ರತ್ ಪೈಗಂಬರ್(ಸ) ಮತ್ತು ಝೈದ್ ಗಾಯಗೊಂಡು ತಾಯಿಫ್‌ನಿಂದ ಹೊರಗೆ ಹೋದರು.

ಹಝ್ರತ್ ಪೈಗಂಬರರು(ಸ) ಬಹಳ ಕಷ್ಟದ ಸ್ಥಿತಿಯಲ್ಲಿದ್ದರು. ಅವರು ಮಕ್ಕವನ್ನು ತ್ಯಜಿಸಿದ್ದರು. ತಾಯಿಫ್‌ನವರು ಅವರನ್ನು ತಿರಸ್ಕರಿಸಿದ್ದರು. ಮಕ್ಕದವರ ಸಂಪ್ರದಾಯ ಪ್ರಕಾರ ಮಕ್ಕವನ್ನು ಬಿಟ್ಟು ಹೊರಗೆ ಹೋದವನು ಮಕ್ಕದ ಯಾವನಾದರೂ ಮುಂದಾಳುವಿನ ಅನುಮತಿ ಪಡೆದ ನಂತರವೇ ಮಕ್ಕವನ್ನು ಪ್ರವೇಶಿಸಲು ಸಾಧ್ಯವಿತ್ತು. ಹಝ್ರತ್ ಪೈಗಂಬರರು(ಸ) ಮಾರ್ಗದರ್ಶನಕ್ಕೋಸ್ಕರ ಪ್ರಾರ್ಥಿಸಿದರು. ಅವರು ಝೈದರೊಂದಿಗೆ ಮಕ್ಕದ ಕಡೆಗೆ ಪ್ರಯಾಣ ಮಾಡಿದರು. ಅವರು ನಖ್ಲ ಎಂಬ ಸ್ಥಳಕ್ಕೆ ತಲಪಿ ಮುತ್‌ಇಮ್‌ಬಿನ್ ಅದೀ ಎಂಬ ಮುಂದಾಳುವಿಗೆ ಹೀಗೆ ಹೇಳಿ ಕಳುಹಿಸಿದರು: "ಅರಬ್ ಸಂಪ್ರದಾಯ ಪ್ರಕಾರ ಮಕ್ಕವನ್ನು ಮರಳಿ ಪ್ರವೇಶಿಸಲು ನೀವು ನನಗೆ ಅನುಮತಿ ನೀಡುವಿರೋ?" ಮುತ್‌ಇಮ್ ನೀಡಿದ ಅನುಮತಿ ಪ್ರಕಾರ ಹಝ್ರತ್ ಪೈಗಂಬರ್ ಮತ್ತು ಝೈದ್ ಮಕ್ಕವನ್ನು ಪ್ರವೇಶಿಸಿದರು. ಆದರೆ ಮಕ್ಕದ ಜನರು ಮೊದಲಿನ ಹಾಗೆಯೇ ವಿರೋಧಿಸುತ್ತಿದ್ದರು. ಹಝ್ರತ್ ಪೈಗಂಬರರ(ಸ) ಪ್ರಾರ್ಥನೆಗಳು ಮತ್ತು ಅಂತಿಮವಾಗಿ ಜಯಸಿಗುವುದಾಗಿ ಲಭಿಸಿದ ದೇವನ ಸಂದೇಶವಾಣಿಗಳು ಅವರಿಗೆ ಸಮಾಧಾನ ಮತ್ತು ಧೈರ್ಯ ನೀಡುತ್ತಿದ್ದುವು. ಹೊಸ ಸಂದೇಶವಾಣಿಗಳು ಮಕ್ಕದಿಂದ ವಲಸೆ ಹೋಗುವ ಆವಶ್ಯಕತೆಗಳನ್ನು ಸೂಚಿಸುತ್ತಿದ್ದುವು. ಮಕ್ಕವು ಹಝ್ರತ್ ಪೈಗಂಬರ್(ಸ) ಜನಿಸಿದ ಸ್ಥಳವಾಗಿತ್ತು. ಅವರು ಅಷ್ಟರ ತನಕ ಅಲ್ಲಿಯೇ ಜೀವಿಸಿದ್ದರು, ಮದುವೆ ಅಲ್ಲೇ ಆದರು. ಅವರಿಗೆ ಮಕ್ಕಳು ಅಲ್ಲೇ ಹುಟ್ಟಿದುವು. ಅಲ್ಲಿಯೇ ಅವರಿಗೆ ದೈವಿಕ ಸಂದೇಶವಾಣಿ ಸಹ ಲಭಿಸಿತು. ಅವರು ಮತ್ತು ಅವರ ಅನುಯಾಯಿಗಳು ಕಠೋರ ಹಿಂಸಾಚಾರಗಳಿಗೆ ಈಡಾದರೂ ಅಲ್ಲಿನ ಜನರನ್ನು ಅವರು ಪ್ರೀತಿಸುತ್ತಿದ್ದರು. ಆದುದರಿಂದ ಆ ನಗರವನ್ನು ಬಿಟ್ಟು ಹೋಗಬೇಕಾಗಿ ಬಂದಲ್ಲಿ ಬಹಳ ದುಃಖಕರವಾಗುವುದು ಎಂದು ಅವರು ತಿಳಿದಿದ್ದರು. ಆದರೆ ಪೈಗಂಬರರ(ಸ) ಜೀವಿತ ದೇವನ ಇಚ್ಛೆಗೆ ಅರ್ಪಿತವಾಗಿತ್ತು. ದೇವನ ಇಚ್ಛೆಯನ್ನು ಈಡೇರಿಸಲು ಅವರು ಸಂತೋಷದಿಂದ ಯಾವಾಗಲೂ ಸಿದ್ಧರಾಗಿರುತ್ತಿದ್ದರು. ಮಕ್ಕವನ್ನು ಬಿಟ್ಟು ಹೋಗುವ ಬಗ್ಗೆ ಇದ್ದ ನೋವು ಅಲ್ಲಿಗೆ ಅವರನ್ನು ಮರಳಿ ಕರೆದುಕೊಂಡು ಬರಲಿಕ್ಕಿದೆ ಎಂಬ ಖಾತರಿಯಿಂದ ಶಮನಗೊಂಡಿತು.

ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ: "ನಿನ್ನ ಮೇಲೆ ಪವಿತ್ರ ಖುರ್‌ಆನಿನ ಅಧ್ಯಾಪನೆಗಳನ್ನು ಕಡ್ಡಾಯಗೊಳಿಸಿದವನು ಖಂಡಿತವಾಗಿಯೂ ನಿನ್ನನ್ನು ಮರಳಬೇಕಾದ ಸ್ಥಳಕ್ಕೆ ಮರಳಿಸುವನು." (ಪವಿತ್ರ ಖುರ್‌ಆನ್ 28:86).

============================


**ಯುಗರಶ್ಮಿಗೆ ಚಂದಾದಾರರಾಗಿರಿ**

**ವಾರ್ಷಿಕ ಚಂದಾ : ರೂ. 60/–**

**ಅಂಚೆ ಮೂಲಕ : ರೂ. 70/–**

**ಸಂಪರ್ಕಿಸಿರಿ : 99 00 410 789**


**ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು**

| | |
|---|---|
| ಜನಾಬ್ ಕೆ.ಪಿ. ಮಸ್‌ಊದ್ ಸಾಹಿಬ್, ಪಯಂಗಾಡಿ. | ರೂ. 1000/= |
| ಜನಾಬ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ಬೆಂಗಳೂರು. | ರೂ. 1000/= |
| ಜನಾಬ್ ಅಬ್ದುಲ್ ಗಫೂರ್ ಸಾಹಿಬ್, ಗಂಗಾವತಿ. | ರೂ. 500/= |

ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು –2

# ರಫಅ್ ಇಲಲ್ಲಾಹ್ – ಅಲ್ಲಾಹನ ಕಡೆಗೆ ಆರೋಹಣದ ವಾಸ್ತವಿಕ ಅರ್ಥ

* ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಎಂ.ಎ.

ಜೀವಿಸಿರುವಾಗ ದೇಹ ಸಮೇತ ಆಕಾಶಾರೋಹಣ ಮಾಡುವುದು ಸಾಧ್ಯವೇ ಇಲ್ಲವೆಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತಿದೆ. ಆದರೆ ಅಹ್ಮದಿಯಾ ಜಮಾಅತಿನ ಸ್ಥಾಪಕರ ವಿರೋಧಿಗಳು ಪವಿತ್ರ ಖುರ್‌ಆನಿನ ಒಂದು ವಚನವನ್ನು ಆಧಾರವಾಗಿಟ್ಟುಕೊಂಡು ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಕಾಶಕ್ಕೆ ಎತ್ತಲ್ಪಟ್ಟಿರುವರು ಎಂದು ವಾದಿಸುತ್ತಾರೆ. ಅವರು ಪ್ರಸ್ತಾಪಿಸುವ ಪವಿತ್ರ ಖುರ್‌ಆನ್ ವಚನ ಇದಾಗಿದೆ:

"ವಾಸ್ತವದಲ್ಲಿ ಅವರು ಅವರನ್ನು (ಮಸೀಹರನ್ನು) ವಧಿಸಲಿಲ್ಲ. ಶಿಲುಬೆಗೇರಿಸಿ ಕೊಲ್ಲಲೂ ಇಲ್ಲ. ಆದರೆ ಅವರು ಹಾಗೆ (ಶಿಲುಬೆಯ ಮೇಲೆ ಮೃತಪಟ್ಟಂತೆ) ಅವರಿಗೆ ತೋರಿಸಲ್ಪಟ್ಟರು. .........ಖಂಡಿತವಾಗಿಯೂ ಅವರು ಅವರನ್ನು ವಧಿಸಲಿಲ್ಲ. ಬದಲಾಗಿ, ಅಲ್ಲಾಹನು ಅವರನ್ನು ತನ್ನೆಡೆಗೆ ಎತ್ತಿದನು." (4: 158,159).

ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಕಾಶಕ್ಕೆ ಎತ್ತಲ್ಪಟ್ಟರೆಂದು ಮೇಲೆ ಉಲ್ಲೇಖಿಸಿದ ವಚನ ಸೂಚಿಸುತ್ತದೆ ಎಂದು ವಾದಿಸಲಾಗುತ್ತಿದೆ. ಆದರೆ ಈ ವಾದ ಬಲಹೀನವಾದುದೆಂದು ಸ್ಪಷ್ಟವಾಗುತ್ತದೆ. ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ಅಲ್ಲಾಹನು ತನ್ನ ಕಡೆಗೆ ಎತ್ತಿದುದಾಗಿ ಹೇಳಿದುದು ಸತ್ಯವೇ ಆಗಿದೆ. ಅದನ್ನು ನಿರಾಕರಿಸಲು ಸಾಧ್ಯವಿಲ್ಲ. ಆದರೆ ಈ ಎತ್ತಲ್ಪಡುವಿಕೆ ಹೇಗಾಯಿತು?

ಪವಿತ್ರ ಖುರ್‌ಆನ್ ಹೇಳಿದುದು ಹೀಗೆ: **ಬಲ್ ರಫಅಹುಲ್ಲಾಹು ಇಲೈಹಿ**. ಅಂದರೆ, ಅಲ್ಲಾಹನು ಮಸೀಹರನ್ನು ತನ್ನ ಕಡೆಗೆ ಎತ್ತಿಕೊಂಡನು.

ಅಲ್ಲಾಹನ ಕಡೆಗೆ ಎತ್ತಲ್ಪಡುವುದರ ಅರ್ಥ ಆಕಾಶದ ಕಡೆಗೆ ಎತ್ತಲ್ಪಡುವುದು ಎಂದು ಹೇಳುವುದಾದರೆ ಆಗ ಉದಿಸುವ ಪ್ರಶ್ನೆ, ಏನು ಅಲ್ಲಾಹನು ಆಕಾಶದಲ್ಲಿ ಮಾತ್ರ ಸೀಮಿತನಾಗಿ ಇರುವವನೋ? ಏನು ಅವನು ಭೂಮಿಯಲ್ಲಿ ಇಲ್ಲವೇ? ಇಸ್ಲಾಮೀ ತತ್ವಗಳ ಪ್ರಕಾರ ಅಲ್ಲಾಹನು ಎಲ್ಲ ಸ್ಥಳಗಳಲ್ಲೂ ಇರುವವನೂ ಎಲ್ಲವನ್ನೂ ಕಾಣುವವನೂ ಅಲ್ಲವೇ? ನಿಶ್ಚಯವಾಗಿಯೂ ಅವನು ಎಲ್ಲ ಸ್ಥಳಗಳಲ್ಲೂ ಇರುವವನೂ ಎಲ್ಲವನ್ನೂ ಕಾಣುವವನೂ ಆಗಿದ್ದಾನೆ. ಹೀಗಿರುವಾಗ ಅಲ್ಲಾಹನು ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ತನ್ನೆಡೆಗೆ ಎತ್ತಿಕೊಂಡನು ಎಂದು ಹೇಳಿದುದರ ಅರ್ಥವೇನು? ಈ ಪ್ರಶ್ನೆಗೆ ಸಮಾಧಾನಕರವಾದ ಉತ್ತರ ಪಡೆಯಲು ಈ ವಚನ ಅವತೀರ್ಣವಾದ ಸಂದರ್ಭವನ್ನು ಪರಿಶೀಲಿಸಬೇಕು. ಯಹೂದಿಯರು ವಾದಿಸುತ್ತಾ ಇದ್ದುದು ಹೀಗೆ: "ನಾವು ಈಸಾ ಮಸೀಹರನ್ನು ಶಿಲುಬೆಗೇರಿಸಿ ಕೊಂದೆವು." ಹೀಗೆ ಹೇಳಿ ಅವರು ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಶಾಪಗ್ರಸ್ತ ಮರಣವನ್ನು ಹೊಂದಿದರೆಂದು ಸಾಬೀತುಗೊಳಿಸುತ್ತಿದ್ದರು. ಏಕೆಂದರೆ ಬೈಬಲಿನ ಹಳೆ ಒಡಂಬಡಿಕೆಯು ಧರ್ಮೋಪದೇಶಕಾಂಡ ಅಧ್ಯಾಯ 21 ವಚನ 23 ಪ್ರಕಾರ ಶಿಲುಬೆಗೆ ಜಡಿಯಲ್ಪಟ್ಟು ಕೊಲ್ಲಲ್ಪಡುವವನು ಶಾಪಗ್ರಸ್ತನಾಗಿದ್ದಾನೆ.

ಯಹೂದಿಯರ ಪ್ರಕಾರ, ಈಸಾ ಶಾಪಗ್ರಸ್ತನಾದ ಸುಳ್ಳು ಪ್ರವಾದಿ ಎಂದು ಅವರು ಶಿಲುಬೆಗೇರಿಸಲ್ಪಟ್ಟು ಮೃತನಾದುದರಿಂದ ಸಾಬೀತಾಗಿದೆ. ಯಹೂದಿಯರ ಈ ವಾದವನ್ನು ಅಲ್ಲಗಳೆದು ಅಲ್ಲಾಹನು ಹೇಳಿದುದೇನೆಂದರೆ, ಈಸಾ ಮಸೀಹ್ ಖಂಡಿತವಾಗಿಯೂ ಶಿಲುಬೆಯಲ್ಲಿ ಮೃತರಾಗಲಿಲ್ಲ; ಅವರನ್ನು ತನ್ನ ಕಡೆಗೆ ಎತ್ತಲಾಯಿತು.

ಇದರಿಂದ ಅಲ್ಲಾಹನು ಉದ್ದೇಶಿಸುವುದು ಹೀಗೆ: ಈಸಾ ಮಸೀಹರನ್ನು ಶಾಪಗ್ರಸ್ತ ಮೃತ್ಯುವಿಗೆ ಗುರಿ ಮಾಡಲು ನೀವು ಪ್ರಯತ್ನಿಸಿದಿರಿ. ಆದರೆ ನಿಮ್ಮ ಪ್ರಯತ್ನವನ್ನು ಅಲ್ಲಾಹನು ನಿಷ್ಫಲಗೊಳಿಸಿದನು. ಶಾಪಗ್ರಸ್ತ ಮೃತ್ಯುವನ್ನು ಹೊಂದಿ ನರಕಕ್ಕೆ ಬೀಳುವುದರಿಂದ ಅಲ್ಲಾಹನು ರಕ್ಷಿಸಿ ತನ್ನ ಕಡೆಗೆ ಎತ್ತಿದನು. ಅವರಿಗೆ ಅಲ್ಲಾಹನು ಆಧ್ಯಾತ್ಮಿಕವಾಗಿ ಉನ್ನತ ಸ್ಥಾನ ನೀಡಿದನು ಎಂದು ಇದರ ಅರ್ಥವಾಗಿದೆ. ಇಂತಹ ಆಧ್ಯಾತ್ಮಿಕ ಉನ್ನತ ಸ್ಥಾನವು ಅಲ್ಲಾಹನ ಸಾಮೀಪ್ಯ ಪಡೆದ ಎಲ್ಲ ಸಾತ್ವಿಕರಿಗೂ ಲಭಿಸುತ್ತದೆ. ಪವಿತ್ರ ಖುರ್‌ಆನಿನ ಈ ವಚನವನ್ನು ನೋಡಿರಿ:

"ಎಲೈ ಶಾಂತಿ ಪಡೆದ ಆತ್ಮವೇ, ನೀನು ಅಲ್ಲಾಹನ ಕಡೆಗೆ ಮರಳು – ನೀನು ಅವನಲ್ಲಿ ಸಂತೃಪ್ತನೂ ಅವನು ನಿನ್ನಲ್ಲಿ ಸಂಪ್ರೀತನೂ ಆದ ಸ್ಥಿತಿಯಲ್ಲಿ, ನನ್ನ ದಾಸರೊಂದಿಗೆ ಸೇರಿಕೋ. ಹಾಗೂ ನನ್ನ ಸ್ವರ್ಗದಲ್ಲಿ ಪ್ರವೇಶಿಸಿಕೋ." (89: 28 – 31).

ಮೇಲೆ ಉಲ್ಲೇಖಿಸಲಾದ ಪವಿತ್ರ ಖುರ್‌ಆನಿನ ವಚನಗಳಿಂದ ತಿಳಿಯುವುದೇನೆಂದರೆ ಅಲ್ಲಾಹನಿಗೆ ಸಾಮೀಪ್ಯ ಹೊಂದಿದ ಎಲ್ಲರೂ ಅಲ್ಲಾಹನ ಕಡೆಗೆಯೇ ಮರಳುತ್ತಾರೆ; ಉನ್ನತ ಸ್ಥಾನವನ್ನು ಗಳಿಸುತ್ತಾರೆ.

ರಫಅ ಪದದ ಅರ್ಥ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನದಿಂದಲೂ ಸ್ಪಷ್ಟವಾಗುತ್ತದೆ:

"ನಾನು ಇಚ್ಛಿಸಿದ್ದರೆ ಅದರ ಮೂಲಕ (ದೃಷ್ಟಾಂತಗಳ ಮೂಲಕ) ಅವನನ್ನು ನಾವು ಉನ್ನತಿಗೇರಿಸುತ್ತಿದ್ದೆವು. ಆದರೆ ಅವನು ಭೂಮಿಯೆಡೆಗೆ ವಾಲಿದನು." (7: 177).

ಹಝ್ರತ್ ಮೂಸಾ ಅಲೈಹಿಸ್ಸಲಾಮರ ಒಬ್ಬ ವಿರೋಧಿಯ ಬಗ್ಗೆ ಈ ವಚನದಲ್ಲಿ ಸೂಚಿಸಲಾಗಿದೆ. ಅವನು ಮೊದಲು ಒಳ್ಳೆಯವನಾಗಿದ್ದನು. ಅವನ ಹೆಸರು ಬಲ್‌ಅಮ್ ಬಾಊರ್ ಎಂದಾಗಿತ್ತೆಂದು ವರದಿಯಾಗಿದೆ. ಅವನ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ: ನಾವು ಇಚ್ಛಿಸುತ್ತಿದ್ದರೆ ನಮ್ಮ ದೃಷ್ಟಾಂತಗಳ ಮೂಲಕ ಅವನನ್ನು ಉನ್ನತಿಗೇರಿಸುತ್ತಿದ್ದೆವು. ಆದರೆ ಅವನು ಭೂಮಿಯ ಕಡೆಗೆ ಬಾಗಿದನು.

ಈ ವಚನದ ಅರ್ಥ ಹೇಳುವಾಗ ಆಧ್ಯಾತ್ಮಿಕ ಮೇಲೇರುವಿಕೆಯ ಅರ್ಥವನ್ನು ಹೇಳುತ್ತಾರೆ. ಶಾರೀರಿಕ ಮೇಲೇರುವಿಕೆಯ ಅರ್ಥವನ್ನು ಯಾರೂ ಹೇಳುವುದಿಲ್ಲ. ಇಲ್ಲಿ ಭೂಮಿ ಎಂಬ ಪದ ಸಹ ಸೂಚಕವಾಗಿ ಇದೆ. ಹೀಗಿರುವಾಗ ಹಝ್ರತ್ ಈಸಾ ಅಲೈಹಿಸ್ಸಲಾಮರ ಬಗ್ಗೆ ಅವರು ಶಾರೀರಿಕವಾಗಿ ಮೇಲಕ್ಕೆತ್ತಲ್ಪಟ್ಟರು ಎಂದು ಅನಾವಶ್ಯಕವಾಗಿ ಅರ್ಥ ಹೇಳುವುದೇಕೆ?

ಈಸಾ ಮಸೀಹ್ ಶಿಲುಬೆಯಲ್ಲಿ ಮೃತರಾಗಿ ಶಾಪಗ್ರಸ್ತರಾದರೆಂದು ಯಹೂದಿಯರು ಆಕ್ಷೇಪಿಸುತ್ತಿದ್ದರು. ಯಹೂದಿಯರು ಉದ್ದೇಶಿಸುತ್ತಿದ್ದುದೇನೆಂದರೆ, ಈಸಾ ಮಸೀಹ್ ಆಧ್ಯಾತ್ಮಿಕವಾಗಿ ಉನ್ನತಿಗೇರಿಸಲ್ಪಟ್ಟಿಲ್ಲ. ಇದಕ್ಕೆ ಉತ್ತರವಾಗಿ ಅಲ್ಲಾಹನು ಹೇಳಿದುದು ಹೀಗೆ: ಈಸಾ ಮಸೀಹ್ ಖಂಡಿತವಾಗಿಯೂ ಶಿಲುಬೆಯಲ್ಲಿ ಮೃತರಾಗಲಿಲ್ಲ. ಅವರಿಗೆ ಆಧ್ಯಾತ್ಮಿಕ ಉನ್ನತಿ ನೀಡಲಾಯಿತು. ಈ ವಚನದಲ್ಲಿ ಬಳಸಲಾದ ರಫಅ ಪದಕ್ಕೆ ಶಾರೀರಿಕ ಮೇಲೆತ್ತುವಿಕೆ ಎಂಬ ಅರ್ಥ ನೀಡಲಾಗದು. ಯಹೂದಿಯರು ಆಕ್ಷೇಪ ಮಾಡುತ್ತಾ ಇದ್ದುದು ಹೀಗೆ: ಈಸಾ ಮಸೀಹ್ ಶಿಲುಬೆಯಲ್ಲಿ ಮೃತರಾದುದರಿಂದ ಅವರಿಗೆ ಆಧ್ಯಾತ್ಮಿಕ ಉನ್ನತಿ ಲಭಿಸಲಿಲ್ಲ. ಅವರು ಶಾಪಗ್ರಸ್ತ ಮೃತ್ಯುವನ್ನು ಹೊಂದಿದರು. ಇದಕ್ಕೆ ಉತ್ತರ ಹೀಗೆ ಸಿಗುತ್ತದೆ: ಅಲ್ಲಾಹನು ಅವರನ್ನು ಜೀವಂತವಾಗಿ ಆಕಾಶಕ್ಕೆತ್ತಿದನು. ಪ್ರಶ್ನೆ ಒಂದಾಗಿದ್ದರೆ ಉತ್ತರ ಬೇರೊಂದಾಗಿದೆ. ಸಾಮಾನ್ಯ ಬುದ್ಧಿಶಕ್ತಿಯುಳ್ಳ ಮನುಷ್ಯನು ಕೂಡ ಪ್ರಶ್ನೆಗೆ ಉತ್ತರ ನೀಡುವಾಗ ನಾನು ಪ್ರಶ್ನೆಗೆ ಸರಿಯಾದ ಉತ್ತರ ನೀಡುತ್ತಿದ್ದೇನೆಯೇ, ಯಾವುದಾದರೂ ಅಸಂಬದ್ಧ ಮಾತು ನಾನು ಹೇಳುತ್ತಾ ಇಲ್ಲವಷ್ಟೇ? ಎಂದು ಚಿಂತಿಸುತ್ತಾನೆ. ಆದರೆ ನಮ್ಮ ವಿರೋಧಿಗಳ ದೇವನೊಂದಿಗೆ ಆಧ್ಯಾತ್ಮಿಕ ಉನ್ನತಿಯ ಪ್ರಶ್ನೆಯನ್ನು ಕೇಳುವಾಗ ಉತ್ತರ ಶಾರೀರಿಕ ಉನ್ನತಿಗೇರಿಸುವಿಕೆಯನ್ನು ನೀಡಲಾಗುತ್ತದೆ. ಒಂದು ವಿಷಯ ದೃಢವಾಗಿ ತಿಳಿಯುತ್ತದೆ: ಹಝ್ರತ್ ಈಸಾ ಮಸೀಹ್[ಅ] ಅಲ್ಲಾಹನೆಡೆಗೆ ಎತ್ತಲ್ಪಟ್ಟುದರ ಅರ್ಥ ಆಧ್ಯಾತ್ಮಿಕ ಉನ್ನತಿಗೇರುವಿಕೆಯಾಗಿದೆ. ಅಲ್ಲಾಹನ ಸಾಮೀಪ್ಯ ಪಡೆದ ಎಲ್ಲ ಸಾತ್ವಿಕರು ಈ ರೀತಿ ಉನ್ನತಿಗೇರಿಸಲ್ಪಡುತ್ತಾರೆ. ಅವರ ಶರೀರಗಳು ಮೇಲಕ್ಕೆತ್ತಲ್ಪಡುವುದಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಒಂದನೆಯದಾಗಿ ಅಲ್ಲಾಹನು ಕೇವಲ ಆಕಾಶದೊಳಗೆ ಸೀಮಿತನಾಗಿರುವವನಲ್ಲ. ಅವನು ಎಲ್ಲ ಸ್ಥಳಗಳಲ್ಲೂ ಹಾಜರಿರುವವನೂ ಎಲ್ಲವನ್ನು ನೋಡುವವನೂ ಆಗಿದ್ದಾನೆ. ಆದುದರಿಂದ ಅಲ್ಲಾಹನ ಕಡೆಗೆ ಎತ್ತಲ್ಪಡುವುದರ ಅರ್ಥ ಆಧ್ಯಾತ್ಮಿಕ ಉನ್ನತಿಗೇರುವಿಕೆ ಹೊರತು ಬೇರೆ ಅರ್ಥ ಹೇಳಲಾಗದು. ಎರಡನೆಯದಾಗಿ, ಯಹೂದಿಯರ ಆಕ್ಷೇಪ ಆಧ್ಯಾತ್ಮಿಕ ಉನ್ನತಿಗೇರುವಿಕೆಯ ಬಗ್ಗೆಯಾಗಿತ್ತು. ಶಾರೀರಿಕ ಮೇಲೆತ್ತುವಿಕೆಯನ್ನು ಅವರು ವಿಚಾರಿಸಿರಲಿಲ್ಲ. ಆದುದರಿಂದ ಇದಕ್ಕೆ ಉತ್ತರವಾಗಿ ಶಾರೀರಿಕ ಮೇಲೆತ್ತುವಿಕೆಯುನ್ನು ಪ್ರಸ್ತಾಪಿಸುವುದು ನಿರರ್ಥಕವಾಗಿದೆ. ಇಂತಹ ಉತ್ತರವನ್ನು ಅಲ್ಲಾಹನಂತಹ ಬುದ್ಧಿಶಾಲಿಯು ನೀಡಿದನೆಂದು ಹೇಳಲಾಗದು. ಮೂರನೆಯದಾಗಿ, ಅಲ್ಲಾಹನ ಕಡೆಗೆ ಎತ್ತಲ್ಪಡುವುದರ ಅರ್ಥ ಶಾರೀರಿಕವಾದ ಮೇಲೆತ್ತುವಿಕೆ ಮಾತ್ರವಾಗಿದ್ದರೆ ನಾವು ಹೀಗೆ ಸಮ್ಮತಿಸಬೇಕಾದೀತು– ಅಲ್ಲಾಹನ ಸಾಮೀಪ್ಯ ಪಡೆದ ಎಲ್ಲರೂ ಆಕಾಶದ ಕಡೆಗೆ ಎತ್ತಲ್ಪಟ್ಟರೆಂದು. ಏಕೆಂದರೆ ಅಲ್ಲಾಹನು ಹೇಳುತ್ತಾನೆ:

"ಎಲೈ ಶಾಂತಿ ಪಡೆದ ಆತ್ಮವೇ, ನೀನು ಅಲ್ಲಾಹನ ಕಡೆಗೆ ಮರಳು – ನೀನು ಅವನಲ್ಲಿ ಸಂತೃಪ್ತನಾಗಿ ಅವನು ನಿನ್ನಲ್ಲಿ ಸಂಪ್ರೀತನೂ ಆದ ಸ್ಥಿತಿಯಲ್ಲಿ." (89:28,29).

ನಾಲ್ಕನೆಯದಾಗಿ, ಪವಿತ್ರ ಖುರ್‌ಆನ್ ಸ್ವತಃ ರಫಅ ಶಬ್ದದ ಅರ್ಥವನ್ನು ಆಧ್ಯಾತ್ಮಿಕ ಉನ್ನತಿಗೇರಿಸುವಿಕೆ ಎಂದು ಹೇಳಿದೆ. ಈ ಉದಾಹರಣೆ ನೋಡಿರಿ. ಹಝ್ರತ್ ಮೂಸಾರ[ಅ] ಕಾಲದ ಬಲ್‌ಅಮ್ ಬಾಊರನ ಕುರಿತು ಅಲ್ಲಾಹನು ಹೀಗೆ ಹೇಳಿದ್ದಾನೆ: "ನಾನು ಇಚ್ಛಿಸಿದ್ದರೆ ಅದರ ಮೂಲಕ (ದೃಷ್ಟಾಂತಗಳ ಮೂಲಕ) ಅವನನ್ನು ನಾವು ಉನ್ನತಿಗೇರಿಸುತ್ತಿದ್ದೆವು. ಆದರೆ ಅವನು ಭೂಮಿಯೆಡೆಗೆ ವಾಲಿದನು. (7:177).

ಪವಿತ್ರ ಖುರ್‌ಆನ್ ಇನ್ನೊಂದು ವಚನ ರಫಅ ಪದದ ಅರ್ಥವನ್ನು ಸ್ಪಷ್ಟವಾಗಿ ಹೇಳುತ್ತದೆ: "ಎಲೈ ಈಸಾ, ನಾನು ನಿನ್ನನ್ನು (ಪ್ರಕೃತಿ ಸಹಜವಾದ ರೀತಿಯಲ್ಲಿ) ಮೃತಪಡಿಸುವೆನು ಮತ್ತು ನನ್ನಡೆಗೆ ಎತ್ತುವೆನು." (3:56). ಈ ವಚನದಲ್ಲಿ ಹಝ್ರತ್ ಈಸಾ ಮಸೀಹರನ್ನು[ಅ] ಅವರು ಮೃತರಾದ ನಂತರ ಉನ್ನತಿಗೇರಿಸುವುದಾಗಿ ಸ್ಪಷ್ಟವಾಗಿ ಹೇಳಲಾಗಿದ್ದು ರಫಅ ಶಬ್ದದ ಅರ್ಥವೇನೆಂದು ಬಹಳ ಚೆನ್ನಾಗಿ ತಿಳಿಯುತ್ತದೆ. ಮರಣಾನಂತರ ಸಾತ್ವಿಕರಾದ ಜನರ ಆತ್ಮಗಳು ಅಲ್ಲಾಹನ ಕಡೆಗೆ ಏರಿ ಹೋಗುತ್ತವೆ. ಅವರನ್ನು ಸ್ವರ್ಗದ ಕಡೆಗೆತ್ತಿ ಉನ್ನತ ಸ್ಥಾನಗಳನ್ನು ನೀಡಲಾಗುತ್ತದೆ. ಆದರೆ ದುಷ್ಟಜನರ ಆತ್ಮಗಳು ಉನ್ನತ ಸ್ಥಾನಕ್ಕೆತ್ತಲ್ಪಡುವುದಿಲ್ಲ. ಅವು ನರಕಕ್ಕೆ ಹಾಕಲ್ಪಡುತ್ತವೆ. ಇದೇ ಅರ್ಥದಲ್ಲಿ ಹಝ್ರತ್ ಈಸಾ ಮಸೀಹರನ್ನು[ಅ] ಕೆಳಗೆ ಬೀಳುವುದರಿಂದ ರಕ್ಷಿಸಿ ತನ್ನಡೆಗೆ ಎತ್ತಲಾಗಿದೆ ಎಂದು ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ.

ಬಲ್ ರಫಅಲ್ಲಾಹು ಇಲೈಹಿ – ಈ ವಚನ ಬಗ್ಗೆ ಇದರ ಮೊದಲು ಚರ್ಚಿಸಲಾಗಿದೆ. ಈ ವಚನದಲ್ಲಿ ಎಲೈ ಈಸಾ, ನಾನು

ನಿನ್ನನ್ನು (ಪ್ರಕೃತಿ ಸಹಜವಾದ ರೀತಿಯಲ್ಲಿ) ಮೃತಪಡಿಸುವೆನು ಮತ್ತು ನನ್ನೆಡೆಗೆ ಎತ್ತುವೆನು (3:56) ಎಂಬ ವಚನದ ಈಡೇರಿಕೆಯನ್ನು ಸೂಚಿಸಲಾಗಿದೆ. ಅಲ್ಲಾಹನು ನೀಡಿದ ವಾಗ್ದಾನ ಪ್ರಕಾರ ಹಝ್ರತ್ ಈಸಾ ಮಸೀಹರನ್ನು[ಅ] ಮೃತಪಡಿಸಿದ ನಂತರ ತನ್ನೆಡೆಗೆ ಎತ್ತಿದನು.

ಬೇರೆ ಅನೇಕ ಪವಿತ್ರ ಖುರ್‌ಆನ್ ವಚನಗಳು ಮತ್ತು ಹದೀಸುಗಳು ನಾವು ಹೇಳುವ ಅರ್ಥವನ್ನು ಬೆಂಬಲಿಸುತ್ತವೆ. ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ನೋಡಿರಿ: "ಪರಿಶುದ್ಧ ವಚನಗಳು ಅವನೆಡೆಗೆ ಏರುತ್ತವೆ. ಸತ್ಕರ್ಮವು ಅವನನ್ನು (ಮನುಷ್ಯನನ್ನು) ಮೇಲಕ್ಕೆತ್ತುತ್ತದೆ." (35:11).

ಈ ವಚನದಲ್ಲಿ ಪ್ರತಿಯೊಬ್ಬ ಸಾತ್ವಿಕನನ್ನು ಅವನ ಸತ್ಕರ್ಮಗಳು ಮೇಲಕ್ಕೆತ್ತುತ್ತವೆ ಎಂದು ಅಲ್ಲಾಹನು ಹೇಳಿದ್ದಾನೆ. ಏನು ಎಲ್ಲ ಸಜ್ಜನರು ಜೀವಂತವಾಗಿ ಶರೀರ ಸಮೇತ ಆಕಾಶಕ್ಕೆ ಎತ್ತಲ್ಪಡುತ್ತಾರೋ?

ಅಲ್ಲಾಹನ ಕಡೆಗೆ ಹೋಗುವುದರ ಅರ್ಥವೇನೆಂದು ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರ ಈ ಕೆಳಗಿನ ಮಾತಿನಿಂದಲೂ ತಿಳಿಯುತ್ತದೆ. "ನಾನು ನನ್ನ ಪ್ರಭುವಿನ ಕಡೆಗೆ ಹೋಗುತ್ತೇನೆ." (37:100).

ಈ ಕೆಳಗಿನ ಪವಿತ್ರ ಖುರ್‌ಆನ್ ವಚನವನ್ನು ಎಲ್ಲ ಮುಸ್ಲಿಮರು ಚೆನ್ನಾಗಿ ಬಲ್ಲರು. "ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್" ನಿಶ್ಚಯವಾಗಿಯೂ ನಾವು ಅಲ್ಲಾಹನಿಗಾಗಿ ಇರುವವರು ಹಾಗೂ ನಿಶ್ಚಯವಾಗಿಯೂ ಅವನೆಡೆಗೆಯೇ ಮರಳುವವರಾಗಿದ್ದೇವೆ." (2: 157).

ಅಲ್ಲಾಹನ ಕಡೆಗೆಯೇ ಮರಳುವೆವು ಎಂದು ಹೇಳಿದರೆ ಅದರ ಅರ್ಥ ನಾವು ಆಕಾಶದ ಕಡೆಗೆ ಜೀವಂತವಾಗಿ ಸಶರೀರರಾಗಿ ಎತ್ತಲ್ಪಡುವೆವು ಎಂದಾಗುತ್ತದೆಯೋ?

ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪಿತೃಸಹೋದರ ಹಝ್ರತ್ ಅಬ್ಬಾಸರೊಂದಿಗೆ ಹೇಳಿದರು: ರಫಅಕಲ್ಲಾಹು ಯಾ ಅಮ್ಮಿ. "ಹೇ ನನ್ನ ಚಿಕ್ಕಪ್ಪ, ಅಲ್ಲಾಹನು ನಿಮ್ಮನ್ನು ಉನ್ನತಿಗೇರಿಸಲಿ." (ಕನ್‌ಝುಲ್ ಉಮ್ಮಾಲ್ ನೋಡಿರಿ).

ಈ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಪಿತೃ ಸಹೋದರನಿಗೋಸ್ಕರ, ಅವರನ್ನು ಅಲ್ಲಾಹನು ರಫಅ ಮಾಡಲಿ ಎಂದು ಪ್ರಾರ್ಥಿಸಿದ್ದಾರೆ. ಇದರಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಧ್ಯಾತ್ಮಿಕ ಉನ್ನತಿಯನ್ನು ಹೊರತು ಶಾರೀರಿಕ ಮೇಲೇರುವಿಕೆಯನ್ನು ಉದ್ದೇಶಿಸಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಹಝ್ರತ್ ಅಬ್ಬಾಸರಿಗೆ[ರ] ಶಾರೀರಿಕ ಮೇಲೆತ್ತುವಿಕೆ ಸಂಭವಿಸಲಿಲ್ಲ. ಅವರು ಇಲ್ಲಿಯೇ ಮೃತರಾದರು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝ್‌ನಲ್ಲಿ ಈ ಪ್ರಾರ್ಥನೆ ಮಾಡಬೇಕೆಂದು ನಮಗೆ ಕಲಿಸಿದ್ದಾರೆ. "ಅಲ್ಲಾಹುಮ್ಮಗ್‌ಫಿರ್‌ಲೀ ವರ್‌ಹಮ್‌ನೀ ವಹ್‌ದಿನೀ ವರ್‌ಝುಖ್‌ನೀ ವರ್‌ಫಅ್‌ನೀ" – ಹೇ ಅಲ್ಲಾಹ್, ನನ್ನ ಮೇಲೆ ದಯೆದೋರು. ನನಗೆ ಮಾರ್ಗದರ್ಶನ ನೀಡು. ನನಗೆ ಆಹಾರ ನೀಡು ಮತ್ತು ನನ್ನನ್ನು ರಫಅ್ ಮಾಡು. ಹಝ್ರತ್ ಪೈಗಂಬರರು[ಸ] ಯಾವಾಗಲೂ ಈ ಪ್ರಾರ್ಥನೆ ಮಾಡುತ್ತಿದ್ದರು. ರಫಅ್ ಪದದ ಅರ್ಥ ಶಾರೀರಿಕ ಮೇಲೆತ್ತುವಿಕೆಯಾದರೆ ದೊಡ್ಡ ಸಮಸ್ಯೆ ತಲೆದೋರುತ್ತದೆ. ಹಝ್ರತ್ ಪೈಗಂಬರರು[ಸ] ತನ್ನ ಆಯುಷ್ಕಾಲದಲ್ಲಿ ಈ ಪ್ರಾರ್ಥನೆ ಮಾಡುತ್ತಾ ಇದ್ದರೂ ಅವರ ಪ್ರಾರ್ಥನೆ ಸ್ವೀಕರಿಸಲ್ಪಡಲಿಲ್ಲ. ಅವರು ಶಾರೀರಿಕವಾಗಿ ಮೇಲೆತ್ತಲ್ಪಡಲಿಲ್ಲ – ಇಂತಹ ದೋಷಾರೋಪಗಳಿಂದ ಅಲ್ಲಾಹನ ಅಭಯ ಯಾಚಿಸುತ್ತೇವೆ.

ಪವಿತ್ರ ಖುರ್‌ಆನಿಗೆ ಅರಬಿ ಭಾಷೆಯಲ್ಲಿ ಬರೆದ ಪ್ರಸಿದ್ಧ ಅಧಿಕೃತ ನಿಘಂಟು ಮುಫ್ರದಾತು ರಾಗಿಬ್‌ನಲ್ಲಿ ರಫಅಲ್ಲಾಹು ಇಲೈಹಿ (ಅಲ್ಲಾಹನು ಅವನನ್ನು ತನ್ನೆಡೆಗೆ ಎತ್ತಿದನು) ಎಂಬ ವಚನದ ಅರ್ಥವನ್ನು ಹೀಗೆ ಬರೆಯಲಾಗಿದೆ: "ರಫಅಹೂ ಮಿನ್ ಹೈಸುತ್ತಶ್‌ರೀಫೀ." ಇಮಾಮ್ ರಾಗಿಬ್ ಹೀಗೆ ಅರ್ಥ ಹೇಳಿದ್ದಾರೆ: "ಅಲ್ಲಾಹನು ಹಝ್ರತ್ ಈಸಾ ಮಸೀಹರ ಪದವಿಯನ್ನು ಉನ್ನತಗೊಳಿಸಿದನು."

ಅರಬಿ ಭಾಷೆಯ ಇನ್ನೊಂದು ಪ್ರಸಿದ್ಧ ನಿಘಂಟು ಲಿಸಾನುಲ್ ಅರಬ್ ಎಂಬ ಗ್ರಂಥದಲ್ಲಿ ಅಲ್ಲಾಹನ "ರಾಫಿಅ್" ಗುಣದ ಬಗ್ಗೆ ಹೀಗೆ ವಿವರಣೆ ನೀಡಲಾಗಿದೆ: ಹೂವಲ್ಲದೀ ಯರ್‌ಫಉಲ್ ಮೂಮಿನ ಬಿಲ್ ಇಸ್‌ಆದಿ ವಲ್ ಔಲಿಯಾಅಹೂ ಬಿತ್ತಖುರ್ರುಬಿ. "ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಸಾತ್ವಿಕತೆಯ ಮೂಲಕ ಮತ್ತು ವಲಿಗಳನ್ನು (ಸಂತರನ್ನು) ತನ್ನ ಸಾಮೀಪ್ಯ ಮೂಲಕ ತನ್ನಡೆಗೆ ಎತ್ತಿಕೊಳ್ಳುತ್ತಾನೆ."

ಒಟ್ಟಾರೆ ಹೇಳುವುದಾದರೆ, ಅಲ್ಲಾಹನ ವಚನಗಳಲ್ಲಿ ಮತ್ತು ಪ್ರವಾದಿಗಳಿಗೆ ಸಂಬಂಧಿಸಿದ ವಿಶಿಷ್ಟ ಬಳಕೆಯಲ್ಲಿ "ರಫಅ" ಎಂಬ ಪದವನ್ನು ಬಳಸಿದುದು ಆಧ್ಯಾತ್ಮಿಕ ಉನ್ನತಿಗೊಳಿಸುವಿಕೆಯ ಅರ್ಥದಲ್ಲಿ ಹೊರತು ಶಾರೀರಿಕವಾದ ಮೇಲೆತ್ತುವಿಕೆಯ ಅರ್ಥದಲ್ಲಿ ಅಲ್ಲ. ನಾವು ದೃಢವಾಗಿ ಹೀಗೆ ವಾದಿಸುತ್ತೇವೆ: ಅಲ್ಲಾಹನ ವಚನಗಳಲ್ಲಿ ತನ್ನ ದಾಸರ ಬಗ್ಗೆ ರಫಅ ಎಂಬ ಪದವನ್ನು ಎಲ್ಲೆಲ್ಲಿ ಪ್ರಯೋಗಿಸಲಾಗಿದೆಯೋ ಅಲ್ಲೆಲ್ಲ ಅದರ ಅರ್ಥ ಆಧ್ಯಾತ್ಮಿಕ ಉನ್ನತಿಗೊಳಿಸುವಿಕೆ ಹೊರತು ಬೇರೇನೂ ಆಗಿರುವುದಿಲ್ಲ. ಆಧ್ಯಾತ್ಮಿಕ ಉನ್ನತಿಯನ್ನು ಗಳಿಸಿದುದು ಹಝ್ರತ್ ಈಸಾ ಮಸೀಹರ[ಅ] ವಿಶಿಷ್ಟ ಸ್ಥಾನವೇನೂ ಅಲ್ಲ. ಎಲ್ಲ ಸಜ್ಜನರು ಅಲ್ಲಾಹನ ಕಡೆಗೆ ಉನ್ನತೀಕರಿಸಲ್ಪಡುತ್ತಾರೆ. ಹೀಗೆ ಆಗುತ್ತಿದೆ. ಮುಂದೆಯೂ ಇದೇ ರೀತಿ ಆಗುವುದು.

## ಸಂಪಾದಕರಿಗೆ ಪತ್ರ

ಮಾನ್ಯರೆ,

ನವೆಂಬರ್ 2017 ಪತ್ರಿಕೆಯಲ್ಲಿ ಮೂಡಿಬಂದ ವಿಷಯಗಳ ಕುರಿತು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮ ಪತ್ರಿಕೆ ಓದಿ ನನಗೆ ಅತಿ ಆನಂದವಾಗಿದೆ. ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು ಬಹಳ ಅನುಭವ ಹಾಗೂ ಚಿಂತನೆಯಿಂದ ಕೂಡಿವೆ. ಒಳ್ಳೆಯ ಉನ್ನತವಾದ ವಿಚಾರಗಳು ಆಗಿವೆ. ಅವರು ಅದನ್ನು ಬಹಳ ಸತ್ಯವಾಗಿ, ಸರಳವಾಗಿ ಎಲ್ಲರಿಗೂ ತಿಳಿಯುವ ಹಾಗೆ ಬರೆದಿದ್ದಾರೆ. ನನ್ನ ವೈಯಕ್ತಿಕ ಹಾಗೂ ಸಂಸ್ಥೆಯ ಪರವಾಗಿ ಅನಂತ ಧನ್ಯವಾದಗಳು. ಮುಸ್ಲಿಂ ಧರ್ಮ ಶಾಂತಿ ಪ್ರತಿಪಾದಿಸುವ ಧರ್ಮವೆಂಬುದು ಸತ್ಯ. ಈಗ ಜಗತ್ತಿಗೆ ಬೇಕಾಗಿದ್ದು ಇದೇ ಶಾಂತಿ. ಆದರೆ ಕೆಲವು ಅಜ್ಞಾನಿ ಕಿಡಿಗೇಡಿಗಳು ಇಲ್ಲಿ ಕೆಡುಕನ್ನೇ ಬಯಸುವುದರಿಂದ ಇದರ ಬಗ್ಗೆ ಕಾಳಜಿ ಇಲ್ಲ. ಕೈಯ ಎಲ್ಲ ಬೆರಳುಗಳು ಸಮ ಇರುವುದಿಲ್ಲ. ಜಗದಲ್ಲಿ ಬೇರೆ ಬೇರೆ ವಿಚಾರಧಾರೆಗಳಿದ್ದು ತಮ್ಮದೇ ಆದ ಅಜ್ಞಾನದ ವಿಚಾರದಿಂದ ಅಳೆದು ತಿಳಿಯುತ್ತಾರೆ.

**ಎಸ್.ಎಂ. ಟೊಟಾಡ್,** ಬಿ.ಎ.ಎಲ್‌ಎಲ್‌ಬಿ.

ಪ್ರೆಸಿಡೆಂಟ್, ಬಿಜಾಪುರ್ ಥಿಯೋಲೊಜಿಕಲ್ ಸೊಸೈಟಿ ಆಫ್ ಇಂಡಿಯಾ. **ಬಿಜಾಪುರ.**

==========================================================

**ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ...... (ಜೂನ್ 1980ರ ಸಂಚಿಕೆಯಿಂದ)**

"ಯುಗರಶ್ಮಿ" ಬಿಡದೆ ಓದುವವರಲ್ಲಿ ನಾನೂ ಒಬ್ಬ. ಇದೇ ಮಾರ್ಚ್ ಸಂಚಿಕೆಯಲ್ಲಿ "ದಾನ ಮಾಡಿ ಪ್ರತಿಫಲ ಪಡೆಯಿರಿ", "ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು", "ಮುಸಲ್ಮಾನರಿಗೆ ಚಿಂತಾರ್ಹವಾದ ಸಂಗತಿ" – ಇವು ಉಪಯುಕ್ತ ಬರಹಗಳು. ಸಾಮಾನ್ಯ ಮಾನವನಿಗೂ ಮನನಮಾಡಬಹುದಾದ ವಿಷಯಗಳು ಈ ಬರಹಗಳಲ್ಲಿ ಅಡಕವಾಗಿವೆ. "ಯುಗರಶ್ಮಿ" ಕೇವಲ ಮಹಮದೀಯ ಮಿತ್ರರಿಗೆ ಮಾತ್ರವಲ್ಲ ಮಾನವ ಕುಲಕ್ಕೆ ದಾರಿ ದೀಪದಂತಿದೆ.

ಅಂತೆಯೇ ಮಹಮದೀಯ ನವಾಬರ ಕಾಲದಲ್ಲಿನ ಶಿಲ್ಪ–ಚಿತ್ರ ಕಲೆಯ ಉನ್ನತಿಗೆ ಶ್ರಮಿಸಿದರ ಬಗ್ಗೆಯೂ ಕಿರು ಪರಿಚಯಾತ್ಮಕ ಲೇಖನಗಳು ಬಂದರೆ ನಮ್ಮವರಿಗೆ ಕಲೆಯ ಹಿರಿಮೆಯನ್ನು ಮೆರೆಸಿದಂತಾಗುತ್ತದೆ. ಜೊತೆಗೆ ಚಿತ್ರಗಳೂ ಇದ್ದರೆ ಮೆರಗುಕೊಟ್ಟಂತಾಗುತ್ತದೆ.

ಕನ್ನಡದಲ್ಲಿ ತಿಳಿಭಾಷೆಯಲ್ಲಿ ಹೊರತರುತ್ತಿರುವ ತಮ್ಮ ಈ ಸಾಹಸ ಕನ್ನಡಿಗರು ಅಭಿನಂದಿಸುವ ವಿಷಯ.

ತಮ್ಮ ಅಭಿಮಾನಿ

**ಮೈಸೂರು** **ಪಿ. ಆರ್. ತಿಪ್ಪೇಸ್ವಾಮಿ.** ಕಲಾವಿದ, ಜಾನಪದ ಮ್ಯೂಸಿಯಂ ಮೈಸೂರು ವಿಶ್ವವಿದ್ಯಾಲಯ

==========================================================

**(ಸಪ್ಟೆಂಬರ್ 1980ರ ಸಂಚಿಕೆಯಿಂದ)**

ಮಾನ್ಯ ಸಂಪಾದಕರಿಗೆ,

ಯುಗರಶ್ಮಿಯಲ್ಲಿಯ – ಲೋಕವು ವಿನಾಶದಿಂದ ರಕ್ಷಿಸಲ್ಪಡಲಿ, ಆರನೆಯ ವಯಸ್ಸು, ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು, ದೈವ ಒಂದು ಅನರ್ಘ್ಯ ನಿಧಿ, ಧರ್ಮ ಇಂದು, ಖುರ್‌ಆನ್ ಮತ್ತು ಪ್ರಪಂಚ, ವ್ರತಾನುಷ್ಠಾನ ಏಕೆ? ಇಸ್ಲಾಂ ಮತ ತತ್ವಜ್ಞಾನ – ಮುಂತಾದ ಲೇಖನಗಳು ತುಂಬಾ ಹಿಡಿಸಿವೆ. ಪತ್ರಿಕೆ ಕದಡಿದ ಜನಮನವನ್ನು ದೇವನತ್ತ ಕೊಂಡೊಯ್ಯುವಲ್ಲಿ ಹಿರಿದಾದ ಪಾತ್ರ ವಹಿಸುತ್ತಿದೆ ಎನಿಸುತ್ತದೆ. ಉರ್ದು ಬಾರದ ಅನೇಕರಿಗೆ ಕನ್ನಡ ಮೂಲಕ ಇಸ್ಲಾಂ ಧರ್ಮ ತತ್ವ ತಿಳಿಸಿಕೊಡುತ್ತಿರುವುದು ಆನಂದದ ಸಂಗತಿ ಹಾಗೂ ಸಾಹಸಪೂರ್ಣ ಪ್ರಯತ್ನ.

ಮುಹಮ್ಮದ್ ಪೈಗಂಬರರ ಮತ್ತು ಬಸವಣ್ಣನವರ ತತ್ವಗಳಿಗೆ ಬಹಳಷ್ಟು ಸಾಮ್ಯವಿದೆ. ಕನ್ನಡ ಅಭ್ಯಾಸಿಗಳಿಗೆ ಇದೊಂದು ದಿವ್ಯ ಕೊಡುಗೆ. ಅನೇಕ ಜಿಜ್ಞಾಸುಗಳು ಯುಗರಶ್ಮಿಯ ಉಪಯೋಗ ಪಡೆದುಕೊಳ್ಳುವುದರಲ್ಲಿ ಸಂದೇಹವಿಲ್ಲ.

**ಭಾಲ್ಕಿ,** –**ಎಂ. ಬಂಡೆಪ್ಪ,** ಕಾರ್ಯದರ್ಶಿ, "ಶಾಂತಿ ಕಿರಣ" ಧಾರ್ಮಿಕ ಮಾಸಪತ್ರಿಕೆ

==========================================================

ಮಾನ್ಯರೇ,

ತಮ್ಮ ಪತ್ರಿಕೆಯಾದ ಯುಗರಶ್ಮಿ ಜುಲೈ ಸಂಚಿಕೆಯಲ್ಲಿ ಪ್ರಕಟವಾದ "ದೈವ ಒಂದು ಅನರ್ಘ್ಯ ನಿಧಿ" ಎಂಬ ಹಝ್ರತ್ ಅಹ್ಮದ್ ನೀಡಿರುವ ಒಂದೊಂದು ವಾಕ್ಯ ತುಂಬಾ ಕೌತುಕಕಾರಿಯಾಗಿದೆ. ಚೆನ್ನಾಗಿ ಹೇಳಿ ವಿವರಿಸಿದ್ದಾರೆ. ಮತ್ತು "ಲೋಕವು ವಿನಾಶದಿಂದ ರಕ್ಷಿಸಲ್ಪಡಲಿ" ಎಂಬ ಖುತ್ಬಾ ಪ್ರವಚನದ ಸಂಕ್ಷಿಪ್ತ ವರದಿಯು ವಿಚಾರಯುತವಾಗಿದೆ. ಇಂಥ ವರದಿಯನ್ನು ಸಂಗ್ರಹಿಸಿದ ಎಂ.ಯು. ರಶೀದ್ ಅವರಿಗೆ ಧನ್ಯವಾದಗಳು ಇದರಂಥ ತತ್ವ ಲೇಖನಗಳು ಮುಂದೆಯೂ ಪ್ರಕಟವಾಗಿ "ಯುಗರಶ್ಮಿ" ಚಿರಕಾಲ ಬಾಳಲೆಂದು ಹಾರೈಸುತ್ತೇನೆ.

**ಇಂಡಿ.** **–ಆರ್. ಎಸ್. ಸಿಂದಗಿ**

**ಅಹ್ಮದಿಯಾ ವಾರ್ತೆಗಳು**

## ಶಾಂತಿ ವಿಚಾರಗೋಷ್ಠಿ ಯಾದಗಿರಿ 2017

ನವೆಂಬರ್ 26 ರವಿವಾರದಂದು ಅಹ್ಮದಿಯಾ ಮುಸ್ಲಿಂ ಜಮಾಅತ್ ವತಿಯಿಂದ ಯಾದಗಿರಿ ಜಿಲ್ಲಾ ಕೇಂದ್ರದ ಇಂಪೀರಿಯಲ್ ಗಾರ್ಡನ್ ಸಭಾಂಗಣದಲ್ಲಿ ಶಾಂತಿ ವಿಚಾರಗೋಷ್ಠಿ ಜರುಗಿತು. ಜನಾಬ್ ಅಸದ್ ಸುಲ್ತಾನ್ ಘೋರಿ ಸಾಹೇಬ್ ಅಹ್ಮದಿಯಾ ಜಿಲ್ಲಾ ಅಧ್ಯಕ್ಷರು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಜನಾಬ್ ಉಸ್ಮಾನ್ ಪಾಶಾ ಸಾಹೇಬ್ ದಾಯಿ ಇಲಲ್ಲಾಹ್ ಉತ್ತರ ಕರ್ನಾಟಕ ಅವರ ಖುರ್‌ಆನ್ ಪಾರಾಯಣದೊಂದಿಗೆ ಸಮಾರಂಭ ಪ್ರಾರಂಭವಾಯಿತು. ಜನಾಬ್ ಮುಹಮ್ಮದ್ ಇಸ್ಮಾಯಿಲ್ ಸಾಹೇಬರು ಪ್ರಾಸ್ತವಿಕ ಭಾಷಣ ಮಾಡಿದರು. ನಂತರ ಅಹ್ಮದಿಯಾ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರ ಶಾಂತಿ ಸಂದೇಶದ ಡಾಕ್ಯುಮೆಂಟರಿ ಚಲನಚಿತ್ರವನ್ನು ಪ್ರದರ್ಶಿಸಲಾಯಿತು.

ಜಿಲ್ಲಾ ಪ್ರಧಾನ ಸತ್ರ ನ್ಯಾಯಧೀಶ ಸದಾನಂದ ನಾಯಕ, ಮಾಜಿ ಸಚಿವ ನರಸಿಂಹ ನಾಯಕ ರಾಜುಗೌಡ, ಮಾಜಿ ಶಾಸಕ ಯಾದಗೀರ್ ಡಾ। ವೀರ ಬಸವಂತರೆಡ್ಡಿ, ರಾಜ್ಯ ಬಿಜೆಪಿ ಉಪಾಧ್ಯಕ್ಷ ನಾಗರತ್ನ ಆರ್ ಕುಪ್ಪಿ, ಯಾದಗೀರ್ ನಗರ ಸಭೆ ಅಧ್ಯಕ್ಷ ಲಲಿತ ಆನೆಪೂರ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ್ದರು.

ಧಾರ್ಮಿಕ ಗುರುಗಳಾದ ಮೆತೊಡಿಸ್ಟ್ ಚರ್ಚಿನ ಜೆ. ನಂದು ಕುಮಾರ, ಯಾದಗಿರಿ ಜಿಲ್ಲಾ ಜೈನ ಸಮುದಾಯದ ಅಧ್ಯಕ್ಷ ಪರಸಮಲ್ ಜೈನ್. ಯಾದಗಿರಿ ಬಸವೇಶ್ವರ ನಗರದ ರಾಜಯೋಗ ಕೇಂದ್ರದ ಸ್ವಾತಿ, ಮೌಲ್ವಿ ಶೇಖ ಖುರಾನ್ ಸಾಹೇಬ್, ಯಾದಗಿರಿ ನಗರಾಧ್ಯಕ್ಷ ಅಬ್ದುಲ್ ಮನ್ನಾನ್ ಸಾಲಿಕ್, ಯುವ ಘಟಕದ ಜಿಲ್ಲಾಧ್ಯಕ್ಷ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತ್ ಕೇಂದ್ರ ಖಾದಿಯಾನ್ ಭಾರತದ ಪ್ರತಿನಿಧಿಯಾಗಿ ಅಲಿ ಬಾಸಿಲ್ ಸಾಹೆಬ್, ಲುಕ್ಮಾನ್ ಅಹ್ಮದ್ ಸಾಹೇಬ್ ಉಪಸ್ಥಿತರಿದ್ದರು.

ಶಾಂತಿಗಾಗಿ ಅಹ್ಮದಿಯಾ ಸಂಘಟನೆ ಕೈಗೊಂಡ ಕ್ರಮಗಳು ನಿಜಕ್ಕೂ ಮಾದರಿಯಾಗಿವೆ ಎಂದು ಮುಖ್ಯ ಅತಿಥಿಯಾಗಿ ಆಗಮಿಸಿದ್ದು ಜಿಲ್ಲಾ ಸತ್ರ ನ್ಯಾಯಾಧೀಶ ಸದಾನಂದ ನಾಯಕ ಅವರು ಶ್ಲಾಘಿಸಿದರು.

ಇನ್ನೋರ್ವ ಮುಖ್ಯ ಅತಿಥಿ ಮಾಜಿ ಸಚಿವ ರಾಜುಗೌಡ ಅವರು ಮಾತನಾಡಿ ಇಂತಹ ವಿಚಾರಗೋಷ್ಠಿಗಳು ರಾಜ್ಯದ ಪ್ರತಿಯೊಂದು ಜಿಲ್ಲೆ ಹಾಗೂ ತಾಲೂಕಿನಲ್ಲಿ ನಡೆಯಬೇಕೆಂದು ಹೇಳಿದರು.

ಮಾಜಿ ಶಾಸಕ ಯಾದಗಿರಿ ಡಾ। ವೀರ ಬಸವಂತ ರೆಡ್ಡಿ ಮಾತನಾಡಿ ಇಂದು ಜಗತ್ತಿನಲ್ಲಿಯೇ ಮುಸ್ಲಿಂ ಸಮುದಾಯಗಳ ಪೈಕಿ ಅಹ್ಮದಿಯಾ ಸಂಘಟನೆ ಅತ್ಯಂತ ಶಿಸ್ತುಬದ್ಧ ಸಂಘಟನೆಯಾಗಿದ್ದು ಎಲ್ಲರೊಂದಿಗೆ ಪ್ರೀತಿ ಸಹಬಾಳ್ವೆ ನಡೆಸಬೇಕೆಂದು ಮತ್ತು ಯಾರನ್ನೂ ದ್ವೇಷಿಸುವುದಿಲ್ಲ ಎಂದು ಘೋಷಿಸಿರುವುದು ಮಹತ್ವಪೂರ್ಣವಾಗಿದೆ ಎಂದರು.

ಅಹ್ಮದಿಯಾ ಮುಸ್ಲಿಂ ಜಮಾಅತ್ ಖಾದಿಯಾನ್ ಕೇಂದ್ರ ಪ್ರತಿನಿಧಿಯಾದ ಅಲಿಬಾಸಿಲ್ ಪ್ರಧಾನ ಭಾಷಣ ಮಾಡಿದರು. ಜಿಲ್ಲಾ ಅಧ್ಯಕ್ಷರಾದ ಅಸದ್ ಸುಲ್ತಾನ್ ಘೋರಿ, ಯಾದಗಿರಿ ಬಸವೇಶ್ವರ ನಗರದ ರಾಜಯೋಗ ಕೇಂದ್ರದ ಸಂಚಾಲಕಿ ಸ್ವಾತಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ನಾಗರತ್ನ, ಜೆ ಆರ್ ಕುಪ್ಪಿ, ನಗರ ಸಭೆ ಅಧ್ಯಕ್ಷ ಲಲಿತಾ ಆನೆಪೊರ ಸೇರಿದಂತೆ ಅನೇಕರು ಶಾಂತಿ ಕುರಿತು ತಮ್ಮ ವಿಚಾರ ಮಂಡಿಸಿದರು. ನಗರಾಧ್ಯಕ್ಷರಾದ ಜನಾಬ್ ಮನ್ನಾನ್ ಸಾಲಿಕರು ಧನ್ಯವಾದಾರ್ಪಣೆಯನ್ನು ಸಲ್ಲಿಸಿದರು. ಜನಾಬ್ ಉಸ್ಮಾನ್ ಪಾಶಾ ಸಾಹೇಬರು ಕಾರ್ಯಕ್ರಮವನ್ನು ನಿರೂಪಿಸಿದರು.

**(ವರದಿ : ಮುಹಮ್ಮದ್ ಇಸ್ಮಾಈಲ್)**

=====================================================================

## ಅಹ್ಮದಿಯಾ ಮುಸ್ಲಿಂ ಯುವ ಸಂಘಟನೆ ಜಕ್ಕೂರ್, ಬೆಂಗಳೂರು
## ಅನಾಥ ಮಕ್ಕಳಿಗೆ ಅನ್ನದಾನ ಕಾರ್ಯಕ್ರಮ

ಜಕ್ಕೂರ್: ದಿನಾಂಕ 26–2–2018 ರಂದು "ಸುಮಂಗಲಿ ಸೇವೆ ಆಶ್ರಮ"ದ 125 ಅನಾಥ ಮಕ್ಕಳಿಗೆ ಅಹ್ಮದಿಯಾ ಯುವ ಸಂಘಟನೆ ಜಕ್ಕೂರ್, ಬೆಂಗಳೂರು ವತಿಯಿಂದ ಮಧ್ಯಾಹ್ನ ಊಟ ಮಾಡಿಸಲಾಯಿತು. ಅಧ್ಯಕ್ಷರು ಅಹ್ಮದಿಯಾ ಯುವ ಸಂಘಟನೆ ಮುಹಮ್ಮದ್ ಇರ್ಫಾನ್, ಸಯ್ಯದ್ ಝುಫರುಲ್ಲಾಹ್ ಉಪ ಅಧ್ಯಕ್ಷರು ಅಹ್ಮದಿಯಾ ಮುಸ್ಲಿಂ ಜಮಾಅತ್ ಜಕ್ಕೂರ್, ಹಲವು ಅತ್ಫಾಲ್, ಖುದ್ದಾಮ್, ಅನ್ಸಾರ್ ಸಹೋದರರು ಭಾಗವಹಿಸಿದ್ದರು. ಮುಹಮ್ಮದ್ ಇಸ್ಮಾಈಲ್ ಸಾಹೇಬ್ ನಿವೃತ್ತ ಶಿಕ್ಷಕರು ಸೇವಾ ಆಶ್ರಮ ಸಂಸ್ಥೆ ಅವರಿಗೆ ಜಮಾಅತಿನ ಪರಿಚಯ ಮಾಡಿಕೊಟ್ಟರು ಹಾಗೂ ಜಮಾಅತಿನ ಸಾಹಿತ್ಯಗಳನ್ನು ಉಡುಗೊರೆಯಾಗಿ ನೀಡಿದರು. ಆಶ್ರಮ ವ್ಯವಸ್ಥಾಪಕರು ನಮ್ಮ ಈ ಸೇವಾಕ್ರಿಯೆಯನ್ನು ಮೆಚ್ಚಿ ಅಭಿನಂದನಾ ಪತ್ರವನ್ನು ನೀಡಿದರು.

**(ವರದಿ: ಮುಹಮ್ಮದ್ ಇರ್ಫಾನ್, ಖಾಯಿದ್, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಜಕ್ಕೂರ್, ಬೆಂಗಳೂರು.)**

# ಚತುರ್ಥ ವಖ್ಫೆ-ನೌ ವಾರ್ಷಿಕ ಇಜ್ತಿಮಾ

**ದಕ್ಷಿಣ ಕರ್ನಾಟಕ ವಿಭಾಗ ಬೆಂಗಳೂರು**

ಬೆಂಗಳೂರು: ದಿನಾಂಕ 4, 5 ನವೆಂಬರ್ 2017ರಂದು ದಕ್ಷಿಣ ಕರ್ನಾಟಕ ವಿಭಾಗೀಯ ವಖ್ಫೆನೌ ಇಜ್ತಿಮಾ ಅಹ್ಮದಿಯಾ ಮುಸ್ಲಿಂ ಮಸೀದಿ, ವಿಲ್ಸನ್ ಗಾರ್ಡನ್ ಬೆಂಗಳೂರಿನಲ್ಲಿ ವಿಜೃಂಭಣೆಯಿಂದ ಜರಗಿತು.

ದಕ್ಷಿಣ ಕರ್ನಾಟಕದ ವಿಭಾಗ ವಖ್ಫೆನೌ ಇಜ್ತಿಮಾ ಘಟಕ ಬೆಂಗಳೂರಿನಲ್ಲಿ ಮಂಗಳೂರು, ಶಿವಮೊಗ್ಗ, ಮಡಿಕೇರಿ, ಜಕ್ಕೂರ್, ಸಾಗರ ವಖ್ಫೆನೌ ಬಾಲಕರು ಹಾಗೂ ಬಾಲಕಿಯರು ಒಳಗೊಂಡಿದ್ದಾರೆ.

4 ನವೆಂಬರ್ 2017 ಪ್ರಥಮ ದಿನದ ಇಜ್ತಿಮಾ ಉದ್ಘಾಟನಾ ಸಮಾರಂಭವು ಜನಾಬ್ ಎಂ. ಖಲೀಲ್ ಅಹ್ಮದ್ ಸಾಹೇಬ್ ಶಿವಮೊಗ್ಗ ಜಿಲ್ಲಾ ಅಮೀರರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ತಹಸೀನ್ ಅಹ್ಮದ್ ಅವರ ಖುರ್‌ಆನ್ ಪಠಣದೊಂದಿಗೆ ಸಭೆಯು ಪ್ರಾರಂಭಗೊಂಡಿತು. ಸಯ್ಯದ್ ಶಾರಿಖ್ ಮಜೀದ್ ಸಾಹೇಬ್ ಇಜ್ತಿಮಾ ಕಾರ್ಯದರ್ಶಿ ಪ್ರಸ್ತಾವಿಕ ಭಾಷಣ ಮಾಡಿದರು. ತರುವಾಯ ಜನಾಬ್ ದಾವೂದ್ ಅಹ್ಮದ್ ಸಾಹೇಬ್ ವಖ್ಫೆನೌ ಭಾರತ ಪ್ರತಿನಿಧಿ "ವಖ್ಫೆನೌ" ಧ್ಯೇಯೋದ್ದೇಶಗಳ ಬಗ್ಗೆ ಸವಿವರವಾಗಿ ಭಾಷಣ ಮಾಡಿದರು. ನಂತರ ಮೌಲವಿ ತಾರೀಖ್ ಸುಲ್ತಾನ್ ಸಾಹೇಬ್ ಮಾತನಾಡಿದರು. ನಂತರ ವಖ್ಫೆನೌ ಬಾಲಕರು ಒಂದು ಸಾಮೂಹಿಕ ಗಾಯನ ಪ್ರಸ್ತುತಪಡಿಸಿದರು. ನಂತರ ಜನಾಬ್ ಎಂ. ಖಲೀಲ್ ಅಹ್ಮದ್ ಸಾಹೇಬ್ ಅಧ್ಯಕ್ಷೀಯ ಸಂಬೋಧನೆ ಹಾಗೂ ಅಂತ್ಯದಲ್ಲಿ ಪ್ರಾರ್ಥನೆಯೊಂದಿಗೆ ಉದ್ಘಾಟನೆ ಸಮಾರಂಭವು ಮುಕ್ತಾಯಗೊಂಡಿತು.

ಶೈಕ್ಷಣಿಕ ಸ್ಪರ್ಧೆಗಾಗಿ 4 ವರ್ಷದಿಂದ 20 ವರ್ಷದವರೆಗಿನ ವಖ್ಫೆನೌ ಬಾಲಕ ಬಾಲಕಿಯರನ್ನು ವಯಸ್ಸಿಗೆ ಅನುಗುಣವಾಗಿ ಶರಾಫತ್, ಅಮಾನತ್, ಜಿಹಾನತ್, ದಿಯಾನತ್, ಸದಾಖತ್, ಹೆಸರಿನ 5 ಗ್ರೂಪುಗಳಾಗಿ ವಿಂಗಡಿಸಲಾಯಿತು. ಅಲ್ಪಕಾಲದ ಚಹಾ ವಿರಾಮದ ನಂತರ ಖುರ್‌ಆನ್ ಪಠಣ, ಕವನ, ಭಾಷಣ ಮತ್ತು ಖುರ್‌ಆನ್ ಕಂಠಪಾಠ ಒಳಗೊಂಡ ಶೈಕ್ಷಣಿಕ ಸ್ಪರ್ಧೆ ಪ್ರಾರಂಭಿಸಲಾಯಿತು. ಶರಾಫತ್, ಅಮಾನತ್ ಗ್ರೂಪುಗಳ ಶೈಕ್ಷಣಿಕ ಸ್ಪರ್ದೆಯೊಂದಿಗೆ ದಿನದ ಕಾರ್ಯಕ್ರಮಗಳು ಅಂತ್ಯಗೊಳಿಸಲಾಯಿತು.


5 ನವೆಂಬರ್ 2017 ಎರಡನೆಯ ದಿವಸವು ತಹಜ್ಜುದ್ ನಮಾಝ್, ಫಜ್ರ್ ನಮಾಝ್, ದರ್ಸ್ ಹಾಗೂ ಸಾಮೂಹಿಕ ಖುರ್‌ಆನ್ ಪಾರಾಯಣದೊಂದಿಗೆ ಪ್ರಾರಂಭವಾಯಿತು. ಚಹಾ ಸೇವನೆ ನಂತರ ವಖ್ಫೆನೌ ಮಕ್ಕಳು "ಲಾಲ್‌ಬಾಗ್" ವಿಹಾರಕ್ಕಾಗಿ ಅವಕಾಶ ಮಾಡಿಕೊಡಲಾಯಿತು. ಚಹಾ ಲಘು ಉಪಹಾರದ ನಂತರ 10 ಗಂಟೆಗೆ ಸರಿಯಾಗಿ ಎರಡನೇ ದಿವಸದ ಕಾರ್ಯಕ್ರಮಕ್ಕೆ ವೇದಿಕೆ ಸಜ್ಜುಗೊಂಡಿತು. ಪ್ರಥಮವಾಗಿ ವಖ್ಫೆನೌ ಡಾಕ್ಯುಮೆಂಟರಿ ಪ್ರದರ್ಶಿಸಲಾಯಿತು. ನಂತರ ಜನಾಬ್ ಶರೀಫ್ ಅಹ್ಮದ್ ಸಾಹೇಬ್ ವಖ್ಫೆನೌ ಕಾರ್ಯದರ್ಶಿ ಶಿವಮೊಗ್ಗ ಖಲೀಫತುಲ್ ಮಸೀಹ್ ಖಾಮಿಸ್ (ಅಯ್ಯದಹುಲ್ಲಾಹ್)ರವರ ಖುತ್‌ಬ ಜುಮುಅ– 28 ಅಕ್ಟೋಬರ್ 2016– ಉರ್ದು ಮತ್ತು ಜನಾಬ್ ಶುಮೇಬ್ ಅಹ್ಮದ್ ವಖ್ಫೆನೌ ಅವರು ಕನ್ನಡದಲ್ಲಿ ವಾಚಿಸಿದರು. ಆ ಬಳಿಕ ಉಳಿದ ಗ್ರೂಪುಗಳ ಶೈಕ್ಷಣಿಕ ಸ್ಪರ್ಧೆಗಳು ಮುಂದುವರಿದುವು.

ಸಂಜೆ 6 ಗಂಟೆಗೆ ಸಮಾರೋಪ ಕಾರ್ಯಕ್ರಮ ಆರಂಭಗೊಂಡಿತು. ಜನಾಬ್ ಮುಸದ್ದಿಖ್ ಅಹ್ಮದ್ ಸಾಹೇಬ್ ದಕ್ಷಿಣ ಕರ್ನಾಟಕ ಅಧ್ಯಕ್ಷರು ಹಾಗೂ ಅಮೀರ್ ಜಮಾಅತ್ ಬೆಂಗಳೂರು ಅಧ್ಯಕ್ಷತೆ ವಹಿಸಿದರು. ಮೌಲವಿ ಜಮೀಲ್ ಸಾಹೇಬ್ ಖುರ್‌ಆನ್ ಪಠಣ ಮಾಡಿ ಉರ್ದುವಿನಲ್ಲಿ ಅದರ ಅನುವಾದ ಓದಿದರು. ಅರ್ಸ್‌ಲಾನ್ ಅಹ್ಮದ್ ಕವನ ಓದಿದರು. ತರುವಾಯ ಖಲೀಫತುಲ್ ಮಸೀಹ್ ಖಾಮಿಸ್ (ಅಯ್ಯದಹುಲಾಹ್) ಖುತ್‌ಬ ಜುಮುಅ ಆಡಿಯೋ ನುಡಿಸಲಾಯಿತು. ಮೌಲವಿ ಮೀರ್ ಅಬ್ದುಲ್ ಹಮೀದ್ ಸಾಹೇಬ್ ಶಾಹಿದ್ ಭಾಷಣ ಮಾಡಿದರು. ಇಜ್ತಿಮಾ ಕಮಿಟಿ ಕಾರ್ಯದರ್ಶಿ ಜನಾಬ್ ಸಯ್ಯದ್ ಶಾರಿಖ್ ಮಜೀದ್ ಸಾಹೇಬ್ ಧನ್ಯವಾದ ಅರ್ಪಿಸಿದರು. ಜನಾಬ್ ಮುಸದ್ದಿಖ್ ಅಹ್ಮದ್ ಸಾಹೇಬ್ ಅಧ್ಯಕ್ಷೀಯ ಭಾಷಣ ಮಾಡಿದರು.

ತದನಂತರ ಶೈಕ್ಷಣಿಕ ಸ್ಪರ್ದೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳಿಂದ ಪುರಸ್ಕರಿಸಲಾಯಿತು. ಶೇಕಡಾ 95ರಷ್ಟು ಹಾಜರಿಯಿತ್ತು. ಕೊನೆಗೆ ಅಧ್ಯಕ್ಷರ "ದುಆ"ದೊಂದಿಗೆ ಅಲ್ಲಾಹನ ಅಪಾರವಾದ ಅನುಗ್ರಹದಿಂದ ಈ ಎರಡು ದಿವಸಗಳ ಇಜ್ತಿಮಾವು ಸುಸೂತ್ರವಾಗಿ ನಡೆದು ಯಶಸ್ವಿಯಾಗಿ ಅಂತ್ಯಗೊಂಡಿತು – ಅಲ್‌ಹಮ್‌ದುಲಿಲ್ಲಾಹ್.

**(ವರದಿ: ಸಯ್ಯದ್ ಶಾರಿಕ್ ಮಜೀದ್, ಇಜ್ತಿಮಾ ಕಾರ್ಯದರ್ಶಿ – ವಖ್ಫೆ-ನೌ ದಕ್ಷಿಣ ಕರ್ನಾಟಕ)**

## “ದೇವನಾಣೆ” – ಪುಸ್ತಕ ಬಿಡುಗಡೆ




ಮಂಗಳೂರು: ಜನವರಿ 15, ಮಂಗಳೂರಿನ ಅಹ್ಮದಿಯಾ ಮುಸ್ಲಿಂ ಜಮಾಅತಿನ ಮಸೀದಿ ‘ದಾರುಸ್ಸಲಾಮ್’ನಲ್ಲಿ ಮಧ್ಯಾಹ್ನ “ಖುದಾಕಿ ಕಸಂ” ಎಂಬ ಉರ್ದು ಕೃತಿಯ ಅನುವಾದ “ದೇವನಾಣೆ”ಎಂಬ ಪುಸ್ತಕ ಬಿಡುಗಡೆ ಯಾಯಿತು.

ಜಮಾಅತ್ ಅಧ್ಯಕ್ಷ ಮುಹಮ್ಮದ್ ಯೂಸುಫ್ ಸಾಹೇಬ್ ಪುಸ್ತಕದ ಕಿರು ಪರಿಚಯ ಮಾಡಿದರು. ಪುಸ್ತಕದ ಪ್ರಕಾಶಕರಾದ ರಾಶಿದ್ ಮುಹಮ್ಮದ್ ಅಲ್ಲಾದೀನ್ ಸಾಹೇಬ್ ಮತನಾಡಿ, ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಮಿರ್ಝಾ ಗುಲಾಂ ಅಹ್ಮದ್‌ರವರು ತಾನು ಬರೆದ ವಿವಿಧ ಗ್ರಂಥಗಳಲ್ಲಿ ತನ್ನ ಸತ್ಯತೆಗೆ ಸಾಕ್ಷ್ಯವಾಗಿ ದೇವನಾಮದಲ್ಲಿ ಪ್ರಮಾಣ ಮಾಡಿದ 47 ಉದ್ಧರಣೆಗಳನ್ನು ಈಪುಸ್ತಕದಲ್ಲಿ ಕ್ರೋಢೀಕರಿಸಲಾಗಿದೆ ಎಂದರು. ಸುಳ್ಳು ಪ್ರಮಾಣ ಮಾಡಿದ ಮಿಥ್ಯವಾದಿ ಜಯಿಸಲಾರನೆಂದೂ, ಆದರೆ ಇಂದು ಮಿರ್ಝಾ ಗುಲಾಂ ಅಹ್ಮದ್‌ರವರು ಸ್ಥಾಪಿಸಿದ ಅಹ್ಮದಿಯಾ ಮುಸ್ಲಿಂ ಜಮಾಅತ್ ಜಗತ್ತಿನ 210 ದೇಶಗಳಲ್ಲಿ ಹರಡಿದೆ ಎಂದೂ ಅವರು ಹೇಳಿದರು.

ಭಾಷಾಂತರಕಾರ ಯಮ್. ಉಬೈದುಲ್ಲಾ ಸಾಹೇಬ್ ಪುಸ್ತಕದ ಪ್ರತಿಯನ್ನು ರಾಶಿದ್ ಮುಹಮ್ಮದ್ ಅಲ್ಲಾದೀನ್ ಸಾಹೇಬರಿಗೆ ಕೊಟ್ಟು ಪುಸ್ತಕವನ್ನು ಬಿಡುಗಡೆ ಮಾಡಿದರು.

================================================================

**ಪ್ರತಿಭೆ**



ಮಡಿಕೇರಿ ಜಮಾಅತಿನ ಜೆ.ಎಂ. ಬಶೀರ್ ಅಹ್ಮದ್ ಮತ್ತು ಬುಶ್ರಾ ಬಶೀರ್ ದಂಪತಿಯ 7 ವರ್ಷ 8 ತಿಂಗಳು ಪ್ರಾಯದ ಅವಳಿ ಹೆಣ್ಣು ಮಕ್ಕಳಾದ ಆತಿಫಾ ಮತ್ತು ಆರಿಫಾ 70 ಸಾಲುಗಳ ಅರಬಿಕ್ ಕಸೀದ (ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಶ್ಲಾಘಿಸಿ ಹಝ್ರತ್ ಅಹ್ಮದ್[ಅ] ರಚಿಸಿದ ಸ್ತುತಿಗೀತೆ) ಕಂಠಪಾಠ ಮಾಡಿ ಪ್ರತಿಭೆ ತೋರಿದ್ದಾರೆ. ಮಾಶಾ ಅಲ್ಲಾಹ್.

================================================================




ಮೊಗ್ರಾಲ್ ಜಮಾಅತಿನ ಮುಹಮ್ಮದ್ ರಫೀ ಹಾಗೂ ಮಡಿಕೇರಿ ಜಮಾಅತಿನ ಜನ್ನತುನ್ನಿಸಾ ದಂಪತಿಯ 7 ವರ್ಷ ಪ್ರಾಯದ ಮಗಳು ರಿಯಾ ಸುಲ್ತಾನ ಖುರ್‌ಆನ್ ಆಮೀನ್ ಮಾಡಿದ್ದಾರೆ. ಮಾಶಾ ಅಲ್ಲಾಹ್.

================================================================

**ನಿಧನ ವಾರ್ತೆಗಳು**

## ಮಿರ್ಝಾ ಖುರ್‌ಶಿದ್ ಅಹ್ಮದ್ ಸಾಹಿಬ್



ಅಹ್ಮದಿಯಾ ಮುಸ್ಲಿಂ ಜಮಾಅತಿನ ದೀರ್ಘಕಾಲ ಸೇವಕನೂ ಹಝ್ರತ್ ಅಹ್ಮದ್ ಅಲೈಹಿಸ್ಸಲಾಮರ ಸಂತತಿ ಪರಂಪರೆಗೆ ಸೇರಿದವರೂ ಆಗಿದ್ದ ಸಾಹಿಬ್‌ಝಾದ ಮಿರ್ಝಾ ಖುರ್‌ಶಿದ್ ಅಹ್ಮದ್ ಸಾಹಿಬ್ ಜನವರಿ 17ರಂದು ಪಾಕಿಸ್ತಾನದ ಅಹ್ಮದಿಯಾ ಕೇಂದ್ರವಾದ ರಬ್‌ವದಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್".) ಅವರು ಹಝ್ರತ್ ಮಸೀಹ್ ಮೌಊದ್(ಅ) ಅವರ ಹಿರಿಯ ಪುತ್ರ ಸಾಹಿಬ್‌ಝಾದಾ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬರ ಪೌತ್ರ ಹಾಗೂ ಹಝ್ರತ್ ಮಿರ್ಝಾ ಅಝೀಝ್ ಅಹ್ಮದ್ ಸಾಹಿಬರ ಪುತ್ರರಾಗಿದ್ದರು. ತನ್ನ ಪಿತನಿಗಿಂತ ಮುಂಚೆ ಹಝ್ರತ್ ಮಸೀಹ್ ಮೌಊದರಿಗೆ(ಅ) ಬೈಅತ್ ಮಾಡಿದ್ದ ಪೌತ್ರರಾಗಿದ್ದರು ಹಝ್ರತ್ ಮಿರ್ಝಾ ಅಝೀಝ್ ಅಹ್ಮದ್ ಸಾಹಿಬ್.

1932 ಸೆಪ್ಟಂಬರ್ 12ರಂದು ಖುರ್‌ಶಿದ್ ಅಹ್ಮದ್ ಸಾಹಿಬ್ ಜನಿಸಿದರು. 12ನೇ ವಯಸ್ಸಿನಲ್ಲಿ ತನ್ನ ಜೀವಿತವನ್ನು ಇಸ್ಲಾಮಿಕ ಕಾರ್ಯ ಚಟುವಟಿಕೆಗೋಸ್ಕರ ವಖ್ಫ್ ಮಾಡಿದ ತ್ಯಾಗವರ್ಯರಾಗಿದ್ದರು ಅವರು. ಆಗ ಅವರು ಒಂಬತ್ತನೇ ತರಗತಿಯಲ್ಲಿ ಕಲಿಯುವ ವಿದ್ಯಾರ್ಥಿಯಾಗಿದ್ದರು. ನಂತರ ಅವರು ಖಾದಿಯಾನಿನ ಹೈಸ್ಕೂಲಿನಲ್ಲಿ ಮೆಟ್ರಿಕ್ ಪಾಸಾದರು. ಆ ಬಳಿಕ ತಅ್‌ಲೀಮುಲ್ ಇಸ್ಲಾಂ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. ಅನಂತರ ಲಾಹೋರ್ ಸರಕಾರಿ ಕಾಲೇಜಿನಿಂದ ಇಂಗ್ಲಿಷ್ ಎಂ.ಎ. ಪದವಿ ಪಡೆದರು. 1956 ರಿಂದ 1973ರ ವರೆಗೆ ರಬ್‌ವ ತಅ್‌ಲೀಮುಲ್ ಇಸ್ಲಾಂ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಾಝಿರ್ ಖಿದ್ಮತೆ ದರ್ವೇಶಾನ್, ಅಡಿಷನಲ್ ನಾಝಿರ್ ಅಅ್‌ಲಾ, ನಾಝಿರ್ ಉಮೂರೆ ಆಮ, ನಾಝಿರ್ ಅಅ್‌ಲಾ ಎಂಬಿತ್ಯಾದಿ ಅನೇಕ ಸ್ಥಾನಗಳಲ್ಲಿ ದೀನೀ ಸೇವೆ ಸಲ್ಲಿಸಲು ದಿವಂಗತರಿಗೆ ಸೌಭಾಗ್ಯ ಲಭಿಸಿತ್ತು.

1955ರಲ್ಲಿ ವಿವಾಹಿತರಾದ ಖುರ್‌ಶಿದ್ ಅಹ್ಮದ್ ಸಾಹಿಬರಿಗೆ ಆರು ಮಂದಿ ಪುತ್ರರಿದ್ದಾರೆ. ಅವರ ಪೈಕಿ ನಾಲ್ಕು ಮಂದಿ ಪುತ್ರರು ಜೀವಿತ ವಖ್ಫ್ ಮಾಡಿದವರು. ಇಬ್ಬರು ಡಾಕ್ಟರ್‌ಗಳು. ಕಳೆದ ವರ್ಷ ಅವರ ಪತ್ನಿ ನಿಧನ ಹೊಂದಿದರು.

ಶ್ಲಾಘನೀಯ ಸ್ಮರಣಶಕ್ತಿ ಅವರಿಗಿತ್ತು. ಅಲ್ಲಾಹನು ದಿವಂಗತರ ಸೇವೆಗಳನ್ನು ಸ್ವೀಕರಿಸಲಿ. ಅವರ ಪದವಿಯನ್ನು ಉನ್ನತಗೊಳಿಸಲಿ. ಮಗ್‌ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ – ಆಮೀನ್.

=========================================================================

## ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್



ಪಾಕಿಸ್ತಾನದ ನಾಝಿರ್ ಅಅ್‌ಲಾ ಆಗಿದ್ದ ಸಾಹಿಬ್‌ಝಾದ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್(78) ಫೆಬ್ರವರಿ 6ರಂದು ಪಾಕಿಸ್ತಾನದ ಅಹ್ಮದಿಯಾ ಕೇಂದ್ರವಾದ ರಬ್‌ವದಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.") ಅವರು ಹಝ್ರತ್ ಮಸೀಹ್ ಮೌಊದ್(ಅ) ಅವರ ಹಿರಿಯ ಪುತ್ರ ಹಝ್ರತ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬರ ಪೌತ್ರ ಹಾಗೂ ಈಗಿನ ಖಲೀಫತುಲ್ ಮಸೀಹ್ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರ ಸಹೋದರಿಯ ಪತಿಯಾಗಿದ್ದರು. ಅವರಿಗೆ ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರಿದ್ದಾರೆ. ಇಬ್ಬರು ಪುತ್ರರು ಜೀವಿತ ವಖ್ಫ್ ಮಾಡಿದವರಾಗಿದ್ದಾರೆ. ದೀನೀ ಸೇವೆಗಾಗಿ ಜೀವಿತ ವಖ್ಫ್ ಮಾಡಿದ ವ್ಯಕ್ತಿಯಾಗಿದ್ದರು ದಿವಂಗತರು. ಅವರ ಸಹೋದರನಾಗಿದ್ದ ಮಾಜಿ ನಾಝಿರ್ ಅಅ್‌ಲಾರವರ ನಿಧನದ ಬಳಿಕ, ಖಲೀಫತುಲ್ ಮಸೀಹ್‌ರವರು ನಾಝಿರ್ ಅಅ್‌ಲಾ ಸ್ಥಾನವನ್ನು ಅವರಿಗೆ ಒಪ್ಪಿಸಿದರು.

1962ರಲ್ಲಿ ಅವರು ಜೀವಿತವನ್ನು ವಖ್ಫ್ ಮಾಡಿದರು. ನಂತರ ಅವರು "ರಿವ್ಯೂ ಆಫ್ ರಿಲೀಜನ್ಸ್"ನ ರಬ್‌ವದ ಮ್ಯಾನೇಜಿಂಗ್ ಎಡಿಟರ್ ಆಗಿ ನೇಮಿಸಲ್ಪಟ್ಟರು. "ನೀನು ಗಳಿಸಿದ ಭೌತಿಕ ವಿದ್ಯಾಭ್ಯಾಸದೊಂದಿಗೆ ಧಾರ್ಮಿಕ ಜ್ಞಾನವನ್ನೂ ಗಳಿಸಬೇಕು" ಎಂಬ ಖಲೀಫತುಲ್ ಮಸೀಹ್ ಸಾನಿ(ರ) ಅವರ ನಿರ್ದೇಶಾನುಸಾರ ಅವರು ಸಯ್ಯಿದ್ ಮೀರ್ ದಾವೂದ್ ಅಹ್ಮದ್ ಸಾಹಿಬರಿಂದ ಹದೀಸು ಮತ್ತು ಇತರ ದೀನೀ ಜ್ಞಾನವನ್ನು ಗಳಿಸಿದರು.

ನಾಝಿರ್ ಅಅ್‌ಲಾ ಸ್ಥಾನ ವಹಿಸುವುದಕ್ಕಿಂತ ಮುಂಚೆ ನಾಝಿರ್ ತಅ್‌ಲೀಂ, ಎಡಿಷನಲ್ ನಾಝಿರ್ ಇಸ್ಲಾಹ್ ವ ಇರ್ಶಾದ್, ಮುಂತಾದ ವಿವಿಧ ಸ್ಥಾನಗಳಲ್ಲಿ ಅಹ್ಮದಿಯತಿಗೆ ಸೇವೆ ಸಲ್ಲಿಸಲು ಅವರಿಗೆ ಭಾಗ್ಯ ಲಭಿಸಿದೆ. ಖಲೀಫತುಲ್ ಮಸೀಹ್ ಸಾನಿ(ರ) ಅವರ ಪ್ರೈವೇಟ್ ಸೆಕ್ರೆಟರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ.

ಅಲ್ಲಾಹು ದಿವಂಗತರ ಪದವಿಯನ್ನು ಉನ್ನತಗೊಳಿಸಲಿ. ಮಗ್‌ಫಿರತ್ ಮತ್ತು ಜನ್ನತನ್ನು ಕರುಣಿಸಲಿ – ಆಮೀನ್.

## ಜನಾಬ್ ಎಂ. ಅಬ್ದುರ್ರಹ್ಮಾನ್ ಸಾಹಿಬ್



ಕಣ್ಣೂರು: ಕಣ್ಣೂರ್ ಸಿಟಿ ಜಮಾಅತಿನ ಕಾರ್ಯಕಾರಿ ಸಮಿತಿಯ ಸದಸ್ಯ ಮತ್ತು ಹಿರಿಯ ಪತ್ರಕರ್ತ ಎಂ. ಅಬ್ದುರ್ರಹ್ಮಾನ್ ಸಾಹಿಬ್ ತನ್ನ 81ನೇ ವಯಸ್ಸಿನಲ್ಲಿ ಮಾರ್ಚ್ 1ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ಕೇರಳದ ಅಹ್ಮದಿಯಾ ಜಮಾಅತಿನ ವೇದಿಕೆಗಳಲ್ಲೂ ಸಾಂಸ್ಕೃತಿಕ, ಸಾಹಿತ್ಯ, ರಾಜಕೀಯ ವೇದಿಕೆಗಳಲ್ಲೂ ಅವರು ತನ್ನ ನಿರರ್ಗಳ ವಾಕ್ಚಾತುರ್ಯದಿಂದ ಸಭಿಕರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು. ಕೇರಳದ ಮಾಜಿ ಮುಖ್ಯಮಂತ್ರಿ ಕರುಣಾಕರ್‌ರವರ ಪರ್ಸನಲ್ ಸ್ಟಾಫ್ ಮೆಂಬರ್ ಮತ್ತು ಕೆಪಿಸಿಸಿ ಮೆಂಬರ್ ಆಗಿದ್ದರು. ಆದರೆ ಅವರು ರಾಜಕೀಯ ಕಳಂಕದಿಂದ ಮುಕ್ತರಾಗಿದ್ದರು. ಅದಕ್ಕೆ ಕಾರಣವೇನೆಂದರೆ, ಅವರು ಬಾಲ್ಯದಿಂದಲೇ ಅಹ್ಮದಿಯಾ ಜಮಾಅತಿನ ಧೋರಣೆಗಳ ಪ್ರಭಾವಕ್ಕೊಳಗಾಗಿದ್ದರು. ಅವರು "ಕೇರಳ ಕೌಮುದಿ" ದಿನಪತ್ರಿಕೆಯ ಸಂಪಾದಕೀಯ ವಿಭಾಗದಲ್ಲೂ ದುಡಿದಿದ್ದಾರೆ. ಅವರು ಪತ್ನಿಯನ್ನೂ ಪುತ್ರಿಯನ್ನೂ ಅಗಲಿದ್ದಾರೆ. ಅಲ್ಲಾಹು ಅವರಿಗೆ ಮಗ್‌ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ – ಆಮೀನ್.

## ಜನಾಬ್ ಯು. ಅಬೂಬಕರ್ ಸಾಹಿಬ್



ಮಂಜೇಶ್ವರ: ಮಂಜೇಶ್ವರದ ಪ್ರಥಮ ತಲೆಮಾರಿನ ಅಹ್ಮದಿಯರ ಪೈಕಿಯ ಜನಾಬ್ ಯು. ಅಹ್ಮದ್ ಕುಞ್ಞಿ ಸಾಹಿಬರ ಹಿರಿಯ ಪುತ್ರ ಜನಾಬ್ ಯು. ಅಬೂಬಕರ್ ಸಾಹಿಬ್ ಮಾರ್ಚ್ 29ರಂದು ತನ್ನ 81ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ಅವರು ಸರಳ ಸ್ವಭಾವಿಯೂ ಮಿತಭಾಷಿಯೂ ಆಗಿದ್ದರು. ಅವರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ – ಆಮೀನ್.

## ಜನಾಬ್ ಸಿ. ರಫೀ ಅಹ್ಮದ್ ಸಾಹಿಬ್



ಮೊಗ್ರಾಲ್: ಮೊಗ್ರಾಲ್ ಜಮಾಅತಿನ ಸಿ. ಮುತೀಯುಲ್ಲಾಹ್ ಸಾಹಿಬರ ಪುತ್ರ ಸಿ. ರಫೀ ಅಹ್ಮದ್ ಸಾಹಿಬ್ ಸಲಾಲದಲ್ಲಿ ತನ್ನ 48ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ಅವರು ಸಲಾಲ ಜಮಾಅತಿನ ಆಮಿಲ ಸದಸ್ಯ ಮತ್ತು ಖಾಯಿದ್ ಆಗಿ ಸೇವೆ ಸಲ್ಲಿಸಿದ್ದಾರೆ. ಅರಬಿ, ಉರ್ದು ಭಾಷೆ ಬಲ್ಲ ಅವರು ಒಬ್ಬ ಉತ್ತಮ ಭಾಷಣಗಾರರಾಗಿದ್ದರು.

ಅವರು ತಂದೆ, ತಾಯಿ, ಇಬ್ಬರು ಸಹೋದರರು, ಒಬ್ಬ ಸಹೋದರಿ, ಪತ್ನಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ – ಆಮೀನ್.

# ಇನ್ಸಾನಿಯತ್ ಝಿಂದಾಬಾದ್
# ಮಾನವೀಯತೆ ಚಿರಕಾಲ ಬಾಳಲಿ

ಓದಿದ್ದು

## ಆರ್‌ಎಸ್‌ಎಸ್, ಬಿಜೆಪಿ ವಿರುದ್ಧ ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಆರೋಪ 'ರಾಮ ಸೀತೆ ಗೋಮಾಂಸ ಭಕ್ಷಕರು'

ಬಳ್ಳಾರಿ: 'ರಾಮ – ಸೀತೆ ಕೂಡಾ ಗೋಮಾಂಸ ತಿನ್ನುತ್ತಿದ್ದರು ಎಂದು ವಾಲ್ಮೀಕಿ ರಾಮಾಯಾಣದಲ್ಲಿ ಉಲ್ಲೇಖವಾಗಿದೆ. ಯಜ್ಞ–ಯಾಗಾದಿಗಳ ಸಂದರ್ಭದಲ್ಲೂ ಗೋಮಾಂಸ ಸೇವನೆ ನಡೆಯುತ್ತಿತ್ತು. ಇದನ್ನು ಮರೆತಿರುವ ಆರ್‌ಎಸ್‌ಎಸ್–ಬಿಜೆಪಿ, ಸಾಂಸ್ಕೃತಿಕ ಸರ್ವಾಧಿಕಾರ ನಡೆಸುತ್ತಿರುವುದು ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ದೊಡ್ಡ ಅಪಾಯ' ಎಂದು ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಅಭಿಪ್ರಾಯಪಟ್ಟರು.

'ಸೌಹಾರ್ದತೆಗಾಗಿ ಕರ್ನಾಟಕ' ಸಮಿತಿಯು ನಗರದಲ್ಲಿ ಬುಧವಾರ ಏರ್ಪಡಿಸಿದ್ದ ಪೂರ್ವಸಿದ್ಧತಾ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 'ಆಗ ಗೋಮಾಂಸ ತಿನ್ನುತ್ತಿದ್ದವರು ಮಾತ್ರ ಪೂಜ್ಯರು. ಈಗಿನವರು ಅಲ್ಲ ಎಂದರೆ ಹೇಗೆ' ಎಂದು ಪ್ರಶ್ನಿಸಿದರು.

'ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ಮುಕ್ತ ಭಾರತ ಮಾಡುವುದಾಗಿ ಹೇಳಿದ್ದಾರೆ. ನಂತರದಲ್ಲಿ ಮುಸ್ಲಿಂ, ಕ್ರೈಸ್ತ, ಲಿಂಗಾಯತ ಹಾಗೂ ಜೈನ ಮುಕ್ತ ಭಾರತ ಎನ್ನುತ್ತಾರೆ. ಒಟ್ಟಾರೆ ಅವರ ಉದ್ದೇಶವೇನು? ಇಡೀ ಭಾರತದಲ್ಲಿ ಅವರು ಮಾತ್ರ ಉಳಿಯಬೇಕು. ಉಳಿದವರೆಲ್ಲ ಅಳಿಯಬೇಕು ಎಂಬ ಧೋರಣೆಯಲ್ಲವೇ? ಇದು ಯಾವ ಅಭಿವೃದ್ಧಿಯ ದ್ಯೋತಕ' ಎಂದು ಪ್ರಶ್ನಿಸಿದರು.

'ಹಿಂದೂಗಳು ನಾವು ಒಂದು, ನಾವೆಲ್ಲ ಬಂಧು ಎಂದು ಆರ್‌ಎಸ್‌ಎಸ್ ಸೇರಿದಂತೆ ಸಂಘ ಪರಿವಾರದವರು ಹೇಳುತ್ತಿದ್ದಾರೆ. ಆದರೆ, ಅಸ್ಪೃಶ್ಯ ಸಮುದಾಯಗಳನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿ ನೋಡಿಕೊಂಡಿದ್ದು ಇದೇ ಹಿಂದೂಗಳು ಎಂದು ಹೇಳಿಕೊಳ್ಳುವವರೇ ಹೊರತು, ಬೇರೆಯವರಲ್ಲ' ಎಂದರು. **(ಪ್ರಜಾವಾಣಿ 25–1–2018).**

================================================================

## ನಾಸಾದ ಕೆಪ್ಲರ್ ಗಗನ ನೌಕೆ ಸಹಾಯದಿಂದ ಪತ್ತೆ ಸೌರಮಂಡಲದ ತದ್ರೂಪಿ!

### 2200 ಜ್ಯೋತಿರ್ವರ್ಷ; ಭೂಮಿಗೂ, ನವ ಸೌರ ಮಂಡಲದ ನಡುವಿನ ದೂರ
### 08 ಹೊಸ ಸೌರ ಮಂಡಲದಲ್ಲಿ ಇರುವ ಗ್ರಹಗಳು
### 426ಸೆ. ಮೊದಲ ಗ್ರಹದಲ್ಲಿ ಇರುವ ಸರಾಸರಿ ಉಷ್ಣಾಂಶ

**ವಾಷಿಂಗ್ಟನ್:** ಅಸಂಖ್ಯ ನಿಗೂಢತೆಗಳ ಆಗರವಾಗಿರುವ ಬಾಹ್ಯಾಕಾಶದಲ್ಲಿ ನಾವಿರುವ ಸೌರಮಂಡಲವನ್ನೇ ಹೋಲುವ ಹೊಸ ಸೌರಮಂಡಲವೊಂದು ಪತ್ತೆಯಾಗಿದೆ ಎಂದು ಅಮೆರಿಕ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ನಾಸಾ) ತಿಳಿಸಿದೆ.

ನಾಸಾ ವತಿಯಿಂದ ಅಂತರಿಕ್ಷಕ್ಕೆ ಕಳುಹಿಸಲ್ಪಟ್ಟಿರುವ ಕೆಪ್ಲರ್ – 90 ಗಗನ ನೌಕೆ ಈ ಮಂಡಲವನ್ನು ಪತ್ತೆ ಮಾಡಿದ್ದು, ನಮ್ಮ ಸೌರಮಂಡಲವನ್ನೇ ಹೋಲುವಂಥ ಮತ್ತೊಂದು ಸೌರಮಂಡಲ ಸಿಕ್ಕಿರುವುದು ಇದೇ ಮೊದಲು ಎಂದು ಸಂಸ್ಥೆ ಹೇಳಿದೆ.

**ಎಲ್ಲಿದೆ ಈ ಮಂಡಲ?:** ಭೂಮಿಯಿಂದ ಸುಮಾರು 2,200 ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದೆ ಇದು. 2009ರಲ್ಲಿ ಬಾಹ್ಯಾಕಾಶಕ್ಕೆ ಉಡಾವಣೆಗೊಂಡ ಕೆಪ್ಲರ್ ನೌಕೆ, 2013ರಲ್ಲೇ ತನ್ನ ಸಂಚಾರ ಮುಗಿಸಿದೆ. ಆ ನಾಲ್ಕು ವರ್ಷಗಳ ಅವಧಿಯಲ್ಲಿ ಇದು ಕ್ಲಿಕ್ಕಿಸಿರುವ ಫೋಟೋ ಈಗ ಭೂಮಿಗೆ ರವಾನೆಯಾಗಿವೆ!

**ವಿಶೇಷತೆ:** 'ನಾಸಾ' ಸಂಸ್ಥೆಯೇ ಬಣ್ಣಿಸಿರುವಂತೆ, ನಮ್ಮ ಸೌರಮಂಡಲದ ಮಿನಿ ವರ್ಷನ್ ಅದು. ಅಲ್ಲಿ ಎಂಟು ಗ್ರಹಗಳಿವೆ. ಆ ಮಂಡಲದ ಸೂರ್ಯ ಹತ್ತಿರದಲ್ಲಿರುವ ಗ್ರಹಗಳು ಚಿಕ್ಕದಾಗಿದ್ದು, ದೂರವಿರುವ ಗ್ರಹಗಳು ಕ್ರಮೇಣ ದೊಡ್ಡ ಗ್ರಹಗಳಾಗಿವೆ. ಸೂರ್ಯನ ಸನಿಹದಲ್ಲಿರುವ ಪುಟಾಣಿ ಗ್ರಹಕ್ಕೆ ಕೆಪ್ಲರ್ 90ಐ ಎಂದು ಹೆಸರಿಸಲಾಗಿದೆ. ಇದು ಸೂರ್ಯನನ್ನು ಪ್ರತಿ 14.4 ದಿನಗಳಿಗೊಮ್ಮೆ ಸಂಪೂರ್ಣವಾಗಿ ಸುತ್ತಿಬರುತ್ತದೆ. ಇದರ ಸರಾಸರಿ ಉಷ್ಣಾಂಶ 426 ಸೆಲ್ಸಿಯಸ್. ಇತರ ಗ್ರಹಗಳ ಬಗ್ಗೆ ಸಂಶೋಧನೆ ಜಾರಿಯಲ್ಲಿದೆ.

**(ಉದಯವಾಣಿ 16–12–2017)**

================================================================

## ಪಿಸ್ತಾ ಸೇವಿಸಿ – ಆರೋಗ್ಯ ಕಾಪಾಡಿ

ಒಣ ಹಣ್ಣುಗಳಲ್ಲಿ ಚಿಪ್ಪಿನಂತಿರುವ ಎರಡು ದಳಗಳ ಕಂದು ಬಣ್ಣದ ಒಳಗೆ ತಿಳಿ ಹಸುರು ಬಣ್ಣವನ್ನು ಹೊಂದಿರುವ ಪಿಸ್ತಾವನ್ನು ಉಪ್ಪಿನೊಂದಿಗೆ ಹುರಿದು ತಿಂದರೆ ರುಚಿಯೋರುಚಿ. ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುವ ಪಿಸ್ತಾದಲ್ಲಿ ಹಿಮೋಗ್ಲೋಬಿನ್ ಅಂಶವಿದ್ದು ದೇಹದ ವಿವಿಧ ಭಾಗಗಳಿಗೆ ಆಮ್ಲಜನಕವನ್ನು ರವಾನಿಸುವ ಕಾರ್ಯವನ್ನೂ ಮಾಡುತ್ತದೆ. ವಿಟಾಮಿನ್ ಬಿ6 ಹೊಂದಿರುವ ಇದು ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತದೆ. ಜತೆಗೆ ಅನೇಕ ಸೋಂಕಿನಿಂದ ರಕ್ಷಣೆಯನ್ನೂ ಒದಗಿಸುತ್ತದೆ. ರೋಗದಿಂದ ರಕ್ಷಣೆ ಒದಗಿಸುವ ಇದು ಬೆಳೆಯುತ್ತಿರುವ ಮಕ್ಕಳಿಗೆ ಅತ್ಯುತ್ತಮ ಆಹಾರ.

**ಮೈಕಾಂತಿ ವೃದ್ಧಿ:** ನಿತ್ಯವೂ 5–6 ಪಿಸ್ತಾ ತಿಂದರೆ ದೇಹಕ್ಕೆ ಬೇಕಾದಷ್ಟು ಪ್ರಮಾಣದ ವಿಟಮಿನ್ ಇ ದೊರೆಯುತ್ತದೆ. ಚರ್ಮದ ಹೊಳಪನ್ನು ಹೆಚ್ಚಿಸುತ್ತದೆ. ಸೂರ್ಯನ ಕಿರಣಗಳಿಂದ ಚರ್ಮವನ್ನು ರಕ್ಷಿಸುತ್ತದೆ. ಸುಕ್ಕನ್ನು ನಿವಾರಿಸುತ್ತದೆ. ಚರ್ಮದ ಕ್ಯಾನ್ಸರ್ ವಿರುದ್ಧ ರಕ್ಷಣೆ ಒದಗಿಸುತ್ತದೆ.

**ಕಣ್ಣಿನ ರಕ್ಷಣೆ:** ಪಿಸ್ತಾದಲ್ಲಿ ಕೆರೋಟಿನಾಯ್ಡ್ ಮತ್ತು ಲ್ಯುಟಿನ್ ಹೇರಳವಾಗಿದ್ದು, ಕಣ್ಣಿನ ಆರೋಗ್ಯ ಕಾಪಾಡುವಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಇದು ಕಣ್ಣಿನಲ್ಲಿ ಆವಶ್ಯಕ ಕೋಶಗಳ ಬೆಳವಣಿಗೆಗೆ ಸಹಕರಿಸಿ ದೃಷ್ಟಿಯನ್ನು ಉತ್ತಮಗೊಳಿಸುತ್ತದೆ. ದೇಹದಲ್ಲಿರುವ ತ್ಯಾಜ್ಯವನ್ನು ಹೋಗಲಾಡಿಸಿ, ಹೊಸ ಜೀವಕೋಶಗಳ ಬೆಳವಣಿಗೆಗೆ ನೆರವಾಗುತ್ತದೆ. ದೃಷ್ಟಿದೋಷ ಇರುವವರು ನಿತ್ಯವೂ ಪಿಸ್ತಾ ಸೇವಿಸಬೇಕು.

**ಕೊಬ್ಬಿನಾಂಶ ರಹಿತ:** ಇತ್ತೀಚಿನ ಅಧ್ಯಯನದ ಪ್ರಕಾರ, ಪಿಸ್ತಾದಲ್ಲಿ ಕಡಿಮೆ ಪ್ರಮಾಣದಲ್ಲಿ ಗ್ಲೈಸೆಮಿಕ್ ಇಂಡೆಕ್ಸ್ ಇದ್ದು, ನೈಸರ್ಗಿಕವಾಗಿ ಕೊಬ್ಬಿನಾಂಶ ರಹಿತವಾಗಿದೆ ಎಂಬುದು ದೃಢಪಟ್ಟಿದೆ. ಅಂತೆಯೇ ಇವುಗಳಲ್ಲಿ ರೋಗನಿರೋಧಕ ಶಕ್ತಿ ಅಧಿಕವಾಗಿದ್ದು, ಪ್ರೊಟೀನ್ ಹಾಗೂ ಫೈಬರ್ ಅಧಿಕವಾಗಿರುವುದರಿಂದ ದೇಹದ ತೂಕ ಇಳಿಸಲೆತ್ನಿಸುವವರು ಪಿಸ್ತಾವನ್ನು ಸೇವಿಸುವುದು ಉತ್ತಮ. ಇದರಿಂದ ಜೀರ್ಣಕ್ರಿಯೆಯೂ ಸುಧಾರಿಸುತ್ತದೆ.

**ರುಚಿಯ ಜತೆ ಆರೋಗ್ಯ:** ದಿನಕ್ಕೆ 5–6 ಪಿಸ್ತಾಕ್ಕೆ ಅರ್ಧ ಚಮಚ ಜೇನು ಸೇರಿಸಿ ದಿನವೂ ಬೆಳಗ್ಗೆ ತಿನ್ನುತ್ತಿದ್ದರೆ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಹಸಿ ತರಕಾರಿ ಅಥವಾ ಸೊಪ್ಪಿನೊಂದಿಗೆ ಪಿಸ್ತಾ ಮಿಶ್ರಣ ಮಾಡಿದರೆ ದೇಹ ಸದೃಢಗೊಳ್ಳುತ್ತದೆ. ಹಣ್ಣು, ಐಸ್‌ಕ್ರೀಮ್‌ನೊಂದಿಗೂ ಪಿಸ್ತಾ ಮಿಶ್ರಣ ಮಾಡಿ ಸೇವಿಸಿದರೆ ದೇಹದ ಆರೋಗ್ಯವನ್ನು ಕಾಪಾಡಬಹುದು.

**ನೆನಪಿನ ಶಕ್ತಿ ಹೆಚ್ಚಳ:** ಪ್ರತಿನಿತ್ಯ ಪಿಸ್ತಾಸೇವನೆ ಮಾಡುವುದರಿಂದ ನೆನಪಿನ ಶಕ್ತಿಯು ವೃದ್ಧಿಯಾಗುತ್ತದೆ. ಪಿಸ್ತಾವು ಮೆದುಳಿನ ಅವರ್ತನಗಳಿಗೆ ಶಕ್ತಿ ನೀಡಿ ನೆನಪಿನ ಶಕ್ತಿ ಹೆಚ್ಚು ಮಾಡುವುದು. ಇದು ಹೃದಯವನ್ನು ರಕ್ಷಿಸಿ, ಕ್ಯಾನ್ಸರ್ ವಿರುದ್ಧ ಹೋರಾಡಿ, ಉರಿಯೂತ ಕಡಿಮೆ ಮಾಡುತ್ತದೆ ಮತ್ತು ವಯಸ್ಸಾಗುವ ಲಕ್ಷಣಗಳನ್ನು ನಿಧಾನಗೊಳಿಸುತ್ತದೆ. ಮಧುಮೇಹ ನಿಯಂತ್ರಣದಲ್ಲಿಡಲು ಇದರಲ್ಲಿರುವ ಆ್ಯಂಟಿ ಆಕ್ಸಿಡೆಂಟ್ ಸಹಕಾರಿಯಾಗಿವೆ.

*** ಭರತ್‌ರಾಜ್ ಕರ್ತಡ್ಕ**

**(ಉದಯವಾಣಿ 20–3–2018).**

==================================================================

## Statement about ownership and other particulars about the Newspaper Yugarashmi Quarterly (Form IV see Rule 8)

| | | |
|---|---|---|
| **1. Place of publication** | : | **Mangalore** |
| **2. Period of its publication** | : | **Quarterly** |
| **3. Printer's Name** | : | **Muhammad Yusuf** |
| **Whether citizen of india** | : | **Yes** |
| **Address** | : | **10-23-1008/1, 1st Floor, Ansari Road, Bunder, Mangalore – 575001** |
| **4. Publisher's Name** | : | **Muhammad Yusuf** |
| **Whether citizen of india** | : | **Yes** |
| **Address** | : | **10-23-1008/1, 1st Floor, Ansari Road, Bunder, Mangalore – 575001** |
| **5. Editor's Name** | : | **Muhammad Yusuf** |
| **Whether citizen of india** | : | **Yes** |
| **Address** | : | **10-23-1008/1, 1st Floor, Ansari Road, Bunder, Mangalore - 575001** |
| **6. Name and address of individuals who own the newspaper and partners or shareholders holding more than one percent of the Capital** | : | **Jamath Ahmadiyya, "Darussalam", Near Railway Level Crossing, Pandeshwar, Mangalore – 575001** |

**I, Muhammad Yusuf hereby declare that the particulars given above are true to the best of my knowledge and belief.**

**Sd/-**

**Date : 1-4-2018** **Muhammad Yusuf**

**ಅಹ್ಮದಿಯರಿಗೆ ಸುತ್ತೋಲೆ**

# ತಹ್‌ರೀಕ್ ಜದೀದಿನ 84ನೇ ವರ್ಷದ ಆರಂಭದ ಘೋಷಣೆ

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದುಹುಲ್ಲಾಹ್) ತಹ್‌ರೀಕ್ ಜದೀದಿನ ಅನುಗ್ರಹೀತ 84ನೇ ವರ್ಷ ಆರಂಭವಾದ ಬಗ್ಗೆ **'ಬೈತುಲ್ ಫತೂಹ್'** ಮಸೀದಿಯಲ್ಲಿ 03–11–2017 ರಂದು ನೀಡಿದ ಜುಮುಅ ಖುತ್‌ಬದಲ್ಲಿ ಘೋಷಿಸಿದರು. ಸಹೋದರರೇ, ಖಲೀಫರಿಂದ ಜಾರಿಯಾದ ಎಲ್ಲ ಐಚ್ಛಿಕ ಯೋಜನೆಗಳಲ್ಲಿ ತಹ್‌ರೀಕ್ ಜದೀದಿಗೆ ಒಂದು ವಿಶೇಷತೆಯಿದೆ. ಅದೇನೆಂದರೆ, ಹಝ್ರತ್ ಖಲೀಫತುಲ್ ಮಸೀಹ್ ಸಾನೀ ತಹ್‌ರೀಕ್ ಜದೀದನ್ನು **"ಜಿಹಾದ್ ಕಬೀರ್"** (ಶ್ರೇಷ್ಠ ಜಿಹಾದ್) ಎಂದು ಹೇಳಿರುವರು. ಮಾತ್ರವಲ್ಲ, ಇತರ ಎಲ್ಲ ಐಚ್ಛಿಕ ಚಂದಾಗಳಿಗೆ ಹೋಲಿಸಿ, ಅದಕ್ಕೆ ಕಡ್ಡಾಯ ಚಂದಾದ ಸ್ಥಾನವನ್ನು ನೀಡಿರುವರು. ಇದನ್ನು ಪ್ರಸ್ತಾಪಿಸಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: **"ನಾನು ಈ ಚಂದಾವನ್ನು ಕಡ್ಡಾಯಗೊಳಿಸಿರುವೆನು. ಜಮಾಅತಿನ ಎಲ್ಲ ಸ್ತ್ರೀ – ಪುರುಷರು ಇದರಲ್ಲಿ ಕಡ್ಡಾಯವಾಗಿ ಭಾಗಿಯಾಗಬೇಕು."**

(ಹಝ್ರತ್ ಮುಸ್ಲಿಹ್ ಮೌಊದರ(ರ) ನಿರ್ದೇಶನ; ಅಲ್‌ಫಝ್ಲ್ ದಿನಪತ್ರಿಕೆ – ರಬ್‌ವ 13–07–1957)

ತಹ್‌ರೀಕ್ ಜದೀದಿನ ಪ್ರಾಮುಖ್ಯತೆಗೆ ಸಂಬಂಧಿಸಿ ಖಲೀಫರ ಹಲವು ನಿರ್ದೇಶನಗಳು ಇವೆ. ಎಲ್ಲ ಐಚ್ಛಿಕ ಚಂದಾಗಳಲ್ಲಿ ತಹ್‌ರೀಕ್ ಜದೀದ್ ಚಂದಾ ಅತ್ಯಂತ ಮುಖ್ಯವಾದುದಾಗಿದೆ. ಇದನ್ನು ಪ್ರಸ್ತಾಪಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಹೇಳುತ್ತಾರೆ:

**"ಆಮ್ ಚಂದಾದ ನಂತರ ತಹ್‌ರೀಕ್ ಜದೀದಿನ ಚಂದಾ ಅತ್ಯಂತ ಮುಖ್ಯವಾದುದಾಗಿದೆ. ಇದು ಹಲವು ಅನುಗ್ರಹಗಳನ್ನು ಹೊತ್ತುಕೊಂಡಿರುವಂಥದ್ದಾಗಿದೆ. ಇದು ಆರಂಭದಿಂದಲೇ ಜಮಾಅತಿನ ಧನತ್ಯಾಗಗಳ ಮೇಲೆ ಅದ್ಭುತಕರವಾದ ಉತ್ತಮ ಪ್ರಭಾವವನ್ನು ಬೀರಿದೆ. ಈ ತ್ಯಾಗದ ತತ್ವವನ್ನು ಹೇಳುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ವಿಷಯಕ್ಕೆ ಒತ್ತುನೀಡುತ್ತಾ ಹೀಗೆ ಹೇಳಿದ್ದರು: ಎಲ್ಲ ರೀತಿಯಲ್ಲೂ ಉಳಿತಾಯ ಮಾಡುತ್ತಾ ಶತಪ್ರಯತ್ನ ಮಾಡಿ ದೇವಮಾರ್ಗದಲ್ಲಿ ಖರ್ಚು ಮಾಡಬೇಕು.**

(ಜುಮುಅ ಖುತ್‌ಬ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್): 5–11–1993)

ಸನ್ಮಾನ್ಯರೇ, ತಹ್‌ರೀಕ್ ಜದೀದಿನ ಧನತ್ಯಾಗದ ಜಿಹಾದಿನಲ್ಲಿ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಶಕ್ತ್ಯಾನುಸಾರ ತನ್ನ ತ್ಯಾಗದ ಮಟ್ಟವನ್ನು ಸ್ವತಃ ನಿರ್ಣಯಿಸುವ ಅಧಿಕಾರವಿದೆ. ಆದರೂ ಈ ತೀರ್ಮಾನವನ್ನು ಕೈಗೊಳ್ಳುವ ಸಮಯದಲ್ಲಿ ಈ ಅನುಗ್ರಹೀತ ದೈವಿಕ ಯೋಜನೆಯ ಅಸಾಧಾರಣವಾದ ಶ್ರೇಷ್ಠತೆ ಮತ್ತು ಪ್ರಾಮುಖ್ಯತೆ ಹಾಗೂ ಅದರಿಂದ ಮಾಡಲಾಗುವ ಅಂತರಾಷ್ಟ್ರೀಯ ಕೆಲಸಗಳನ್ನೂ ಈ ಬಗ್ಗೆ ಖಲೀಫರ ನಿರ್ದೇಶನಗಳನ್ನೂ ದೃಷ್ಟಿಯಲ್ಲಿ ಇರಿಸುವುದು ಅತಿಮುಖ್ಯ. ಈ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:


**"ತಮ್ಮ ವರಮಾನದ ಪ್ರಕಾರ ಚಂದಾ ನೀಡಿರಿ ಎಂದು ನಾನು ತಮ್ಮ ಆದಾಯದ ಪ್ರಕಾರ ಚಂದಾ ಬರೆಸದವರ ಗಮನಹರಿಸುತ್ತೇನೆ. ಸದಾ ತನ್ನ ಯೋಗ್ಯತೆ ಮತ್ತು ಸಾಮರ್ಥ್ಯಕ್ಕಿಂತ ಕಡಿಮೆ ವಾಗ್ದಾನ ಮಾಡುವವರು ಚಂದಾ ಕೊಡದವರಾಗಿದ್ದಾರೆ. ಮನುಷ್ಯನು ಸಂಪೂರ್ಣವಾದ ತ್ಯಾಗಮಾಡದಿರುವಾಗ ಅಲ್ಲಾಹನ ದೇವದೂತರು ಅವನೊಳಗೆ ಶಕ್ತಿ ಮತ್ತು ಬಲವನ್ನು ಉಂಟುಮಾಡುವುದಿಲ್ಲ."**


(ಹಝ್ರತ್ ಮುಸ್ಲಿಹ್ ಮೌಊದ್(ರ) ಜುಮುಅ ಖುತ್‌ಬ: 4–12–1953).


ಒಟ್ಟಿನಲ್ಲಿ, ಇಂದು ಲೋಕದ ಎಲ್ಲ ಜಮಾಅತುಗಳು ತಹ್‌ರೀಕ್ ಜದೀದಿನ ಧನತ್ಯಾಗದಲ್ಲಿ ಮುನ್ನುಗ್ಗುತ್ತಿದೆ. ಹಝ್ರತ್ ಖಲೀಫತುಲ್ ಮಸೀಹರು ನವವರ್ಷದ ವಾಗ್ದಾನಗಳನ್ನು ವಸೂಲು ಮಾಡಲು ಅಹ್ಮದಿಯಾ ಜಮಾಅತ್ ಭಾರತಕ್ಕೆ ಹೊಸ ಟಾರ್ಗೆಟ್ ನೀಡಿರುವರು. ಅದನ್ನು ಪೂರ್ತಿ ಮಾಡಲು ವಾಗ್ದಾನಗಳಲ್ಲಿ ಕನಿಷ್ಠ ಶೇಕಡಾ ಹತ್ತರಷ್ಟು ವೃದ್ಧಿಮಾಡುವ ಆವಶ್ಯಕತೆ ಇದೆ. ಅಲ್ಲಾಹನು ತನ್ನ ಅನುಗ್ರಹದಿಂದ ನಿಮಗೆ ಸಂಪತ್ತನ್ನೂ ನಿಷ್ಠೆ ಮತ್ತು ತ್ಯಾಗ ಮನೋಭಾವವನ್ನೂ ನೀಡಿರುವನು. ಆದ್ದರಿಂದ ಅನುಗ್ರಹ ಪ್ರಕಟಣೆ ಎಂಬ ರೀತಿಯಲ್ಲಿ ತಹ್‌ರೀಕ್ ಜದೀದ್ ಶ್ರೇಷ್ಠ ಜಿಹಾದಿನ ತಮ್ಮ ವಾರ್ಷಿಕ ವಾಗ್ದಾನದಲ್ಲಿ ಕನಿಷ್ಠ ಶೇಕಡಾ ಹತ್ತರಷ್ಟು ವರ್ಧನೆ ಮಾಡಲು ನಿಮ್ಮೊಂದಿಗೆ ವಿನಂತಿಸುತ್ತೇವೆ. ನಿಮ್ಮ ಈ ತ್ಯಾಗ ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ನಿರ್ದೇಶನ ಪ್ರಕಾರ ನಿಶ್ಚಯವಾಗಿಯೂ ನಿಮ್ಮ ಮತ್ತು ನಿಮ್ಮ ಮಕ್ಕಳ ಪರವಾಗಿ ಸದ್‌ಖ ಜಾರಿಯಾ (ಸದಾಕಾಲ ಜಾರಿಯಲ್ಲಿರುವ ದಾನ)ದ ಪ್ರತಿಫಲವನ್ನು ನೀಡುವಂಥದ್ದು ಆಗುವುದು. ಅಲ್ಲಾಹನು ತನ್ನ ಅನುಗ್ರಹದಿಂದ ನಿಮಗೆ ಪ್ರಿಯ ಖಲೀಫರ ಉತ್ತಮ ಪ್ರತೀಕ್ಷೆಗಳನ್ನು ಈಡೇರಿಸಲು ಸೌಭಾಗ್ಯ ನೀಡಲಿ. ಅದರ ಫಲವಾಗಿ ನಿಮ್ಮನ್ನು ಅಗಣಿತ ಅನುಗ್ರಹಗಳ ಮತ್ತು ಕಾರುಣ್ಯಗಳ ವಾರಸುದಾರರನ್ನಾಗಿ ಮಾಡಲಿ – ಆಮೀನ್. ವಸ್ಸಲಾಮ್.

**ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಖಾದಿಯಾನ್**


NEW BOOKS PUBLISHED BY
NAZARAT NASHRO ISHAAT QADIAN
تحریک جدید
ایک الٰہی تحریک
शान्ति का सन्देश
और
एक चेतावनी
پہلا احمدی مسلمان
سائنسدان
శాంతి సందేశము
ISLAM &
HUMAN
RIGHTS
MUHAMMAD ZAFRULLA KHAN
انفاق فی سبیل اللہ
AHMAD
The
Guided One
A Life of The Holy Founder
of The Movement To Unite
All Religions





















## NEW PUBLICATIONS


Contact:

**NAZARAT NASHRO-ISHA'AT**

Sadr Anjuman Ahmadiyya

Qadian-143516 (Punjab)

Phone: 01872- 500970







## ಅಹ್ಮದಿಯಾ ಮುಸ್ಲಿಂ ಜಮಾಅತಿನ
## ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

**ಬೆಲೆ : ರೂ. 200/-**



# ಮುಹಮ್ಮದ್ ಪೈಗಂಬರರ
# ಜೀವನ ಚರಿತ್ರೆ

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

**ಪುಟಗಳು - 320. ಬೆಲೆ : 100/-**

## ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

National Toll Free Number : 1800 3010 2131
National Website : ahmadiyyamuslimjamaat.in
International Website : alislam.org
Email : info@ahmadiyyamuslimjamaat.in




ಯಾದಗಿರಿಯಲ್ಲಿ
26-11-2017ರಂದು
ಜರಗಿದ
ಶಾಂತಿ ವಿಚಾರಗೋಷ್ಠಿ

ಬೆಂಗಳೂರಿನಲ್ಲಿ
ನವೆಂಬರ್ 4,5ರಂದು
ಜರಗಿದ ಚತುರ್ಥ
ವಖ್ಫೆನೌ ವಾರ್ಷಿಕ
ಇಜ್ತಿಮಾ





ಬೆಂಗಳೂರಿನ ಜಕ್ಕೂರಿನಲ್ಲಿ
26-2-2018ರಂದು
ಏರ್ಪಡಿಸಲಾದ
ಅನಾಥ ಮಕ್ಕಳಿಗೆ
ಅನ್ನದಾನ ಕಾರ್ಯಕ್ರಮ

Registered with the Registrar of Newspapers for India No. R.N. 27354/75
**Yugarashmi** Kannada Quarterly, **April - 2018.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone,ipode, and Android




**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages




**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore